ಕಾವ್ಯಾನಂದ ನಂದಿನಿ

ಮಲ್ಲಿಕಾ

ಕಾವ್ಯಾನಂದ ನಂದಿನಿ

ಮಲ್ಲಿಕಾ

ದಶೋತ್ತರ ಚತುರ್ಭಾಷಾ
ಬಾಹುವಲ್ಲಿ ಸುಶೋಭಿತಾ
ಏಕ ಭಾವಾಖ್ಯ ಹೃದಯಾ
ಭಾರತೀ ಭಾತುವೋ ಹೃದಿ

Kavyananda Nandini in Kannada by 'Mallika'
Published by Lakshmi Prakashana,
170, Langford Road, Bangalore-560 025.

ಪ್ರಥಮ ಮುದ್ರಣ : ೧೯೮೮

18–00 ರೂಪಾಯಿ

ಮುದ್ರಕರು :

ನ್ಯೂ ಐಡಿಯಾಸ್
30, 15ನೇ ಅಡ್ಡರಸ್ತೆ
ಮೂರನೆಯ ವಿಭಾಗ ಜಯನಗರ
ಬೆಂಗಳೂರು-560 011

ಕಾವ್ಯಾನಂದ ನಂದಿನಿ

ಮಲ್ಲಿಕಾ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್
ಬೆಂಗಳೂರು–560 025

ಪರಿವಿಡಿ

ನಿವೇದನೆ

ಸಾಹಿತ್ಯ ಕಲಾಸುಂದರಿಯ ವಿವಿಧ ಅವತರಣಿಕೆಯಲ್ಲಿ ಸರ್ವ ಶ್ರೇಷ್ಠವೆಂದರೆ ಕವಿತಾ ರಮಣೀಮಣಿ ಎಂಬುದು ನನ್ನ ಅನುಭವ. ಕವಿತೆ ವಾಙ್ಮಯ ಶರೀರಿಯಾಗಿದ್ದು ರಾಗಭಾವರಸಗಳ ಉದ್ದೀಪನೆಯಿಂದ ಪರಿಸ್ಫುಟಗೊಂಡು ಘುಮುಘುಮಿಸಿ ಕೋಡಿವರಿದರೆ ಮಾತ್ರ ಶ್ರೇಷ್ಠ ಕವಿತೆ ಎನಿಸುತ್ತದೆ. ಗಾಢವಾದ ಚಿಂತನಮಂಥನಗಳಿಂದ ಮೈದಾಳಿದ ರಸಸ್ಫೂರ್ತಿ ಮನಸ್ಸಿಗೆ ಜ್ಞಾನಜ್ಯೋತಿಯ ಕಿರಣಗಳನ್ನು ತೂರಿ ಆತ್ಮಸಂಪತ್ತಿಯನ್ನು ಅತ್ಯುನ್ನತ ಸ್ಥಿತಿಗೇರಿಸುವಂತಹ ಅಪೂರ್ವ ಸಾಹಿತ್ಯವನ್ನು ಸ್ಫುರಿಸುತ್ತದೆ. ಕವಿತೆಯ ರಾಗರಸಾಮೃತವ್ಯಕ್ತಿಯನ್ನು ವ್ಯಕ್ತದ ಅಂಚಿಗೆ ಕೊಂಡೊಯ್ದು ಅವ್ಯಕ್ತದ ಪರಾಮರ್ಶೆಗೆ ಹಚ್ಚುವುದು ಸತ್ಯ.

ಕವಿತೆಯಲ್ಲಿ ವೇದ ಶಾಸ್ತ್ರ, ಕಾವ್ಯ, ಗದ್ಯಗಳ ಅಂತರಾರ್ಥವು ಐಕ್ಯವಾಗಿರುತ್ತದೆ. ಆಲೋಚನೆ ವಿಷಯಕಲ್ಪನೆ ಭಾವರಸಗಳ ಸಮರಸತೆಯಿಂದ ಮನೋಜ್ಞವಾಗಿ, ಪ್ರಸ್ಫುಟವಾಗಿ ಹರಿಯದ ಹೊರತು ಕವಿತೆಯಲ್ಲಿ ಕಾವ್ಯಸಿದ್ಧಿಯಾಗಲಾರದು. ಆಲೋಚನಾ ಶಕ್ತಿಯಿದ್ದು ಭಾವನಿರೂಪಣೆಯಲ್ಲಿ ಕೊರತೆಯಿದ್ದರೆ ಸಾಹಿತ್ಯ ಲಘುವಾಗಿ ನೀರಸವಾಗುತ್ತದೆ. ಏಕಾಗ್ರತೆಯ ಮೂಸೆಯಲ್ಲಿ ಆಲೋಚನೆಯು ಕರಗಿ ಭಾವರಸ ಪಕ್ವಾದರೆ ಆನಂದಸ್ಫೂರ್ತಿಯ ಊಟೆಯಾಗುತ್ತದೆ. ಕವನಸಾಹಿತ್ಯ ಧ್ಯಾನ, ತಪಸ್ಸು, ಅನುಭವಗಳ ಆಳದಿಂದ ಆವೇಶಪೂರ್ವಕವಾಗಿ ಹೊಮ್ಮಬೇಕು. ಗಿಡಬಳ್ಳಿಗಳಿಂದ ಮಿಡಿಮೊಗ್ಗು ಹೂಗಳು ಹೊಮ್ಮುವಂತೆ ಉತ್‌ಸ್ಫೂರ್ತಿಯಿಂದ ಹೊಮ್ಮಿದರೆ ಮಾತ್ರ ಉನ್ನತ ಕಾವ್ಯ. ಅಲಂಕಾರ ಛಂದಸ್ಸು ಎಷ್ಟೇ ಅವಶ್ಯಕವಾದರೂ—ಅವುಗಳಿಲ್ಲದಿದ್ದರೆ ಕವಿತೆಗಳೇ ಅಲ್ಲ ಎನ್ನುವಷ್ಟು ಅವಶ್ಯಕವಾದರೂ—ಆತ್ಮದ ಮುಂದೆ ಅವುಗಳೆಲ್ಲ ಗೌಣ

ಎಂದರೆ ತಪ್ಪಾಗಲಾರದು. ದೇಹಸೌಂದರ್ಯಕ್ಕೆ ಆತ್ಮಸೌಂದರ್ಯವೇ ಪೂರಕ. ಆದ್ದರಿಂದ, ಅಂತಹ ಅತ್ಯುತ್ತಮ ಕವಿತೆಗಳು ಬಹುಕಾಲ ಬಾಳುತ್ತವೆ.

ಕವಿತೆ ಎಂದರೆ ಬೇಸರವಾದಾಗ ಓದಿ ಅನಂತರ ಮೂಲೆಗೆ ಸೆಯುವಂತಾಗಬಾರದು. ಸರ್ವತ್ರ ಸದಾ ದೇಗುಲದ ಶಿಲ್ಪವೇದಿಯ ಮೇಲೆ ರಂಜಿಸುವ ಚೇತೋಮಯ ಮೂರ್ತಿಯಂತೆ ಅನವರತ ಆರಾಧನೆಗೆ ಅರ್ಹವಾದರೆ ಅದು ನಿಜವಾದ—ಸ್ತುತ್ಯವಾದ ಭಾವರಸ ಸೃಷ್ಟಿ. ಕವಿ ಉದಾಸೀನದ ಕಪಿಮುಷ್ಟಿಯಲ್ಲಿ ಸಿಲ್ಕದೆ ಭಾವ ಸಮುದ್ರದ ಆಳದಲ್ಲಿ ಮುಳುಗಿ ಚಿಂತನಾದ್ರವ್ಯವನ್ನು ಎತ್ತಿತಂದು ಸಹೃದಯ ಸಾಹಿತ್ಯಾರಾಧಕರ ಕರಕಮಲಗಳಿಗೆ ಅರ್ಪಿಸುವುದೇ ಆದರೆ ಸಾಹಿತ್ಯ ಸೃಷ್ಟಿ ಸಾರ್ಥಕ. ಅಂದರೆ, ಘನ ಸಾಹಿತ್ಯ ಎಲ್ಲರಿಗೂ ಹಿಡಿಸುತ್ತದೆ ಎಂದಲ್ಲ. ಸಾಹಿತ್ಯಾಸಕ್ತರಿಗೆ ಪರಮಾನ್ನ ಉಣಿಸುವುದು ಕವಿಪ್ರಜ್ಞೆಯ ಧರ್ಮ. ಆದರೆ, ಕುರಿ—ಮೇಕೆಗಳಿಗೆ ಚಿಗುರು ಗರಿಕೆಯಿದ್ದರೆ ಸಂತೃಪ್ತಿ ಎಂಬುದು ಸತ್ಯ.

ಕೊನೆಯಮಾತು, ಈ ಕಾವ್ಯಪುಂಜದಲ್ಲಿರುವ ಕವನಗಳೆಲ್ಲವೂ ಆಯಾಯಾ ಪ್ರಸಂಗೋಚಿತವಾಗಿ ಭಾವ ಚಿಂತಾಖಿನಿಯಿಂದ ಹೊಮ್ಮಿಬಂದ ಚಿತ್ರವಿಚಿತ್ರವಾಹಿಯೆಂದೇ ಹೇಳಬೇಕು. ದೇಶವಿದೇಶ ಗಳ ವಿಷಯ ಸಂಪತ್ತಿಯನ್ನು ಆಯ್ದು ಜಪಮಾಲೆಯಂತೆ ಪೋಣಿಸಿ "ಕಾವ್ಯನಂದ ನಂದಿನಿ" ಎಂಬ ಸಣ್ಣ ಗ್ರಾಂಥಿಕ ರೂಪದಲ್ಲಿ ಸಾಹಿತ್ಯಾ ಸಕ್ತರ ಕೈಗೆ ಸಮರ್ಪಿಸಲಿರುವೆ. ಇದನ್ನು ಲಕ್ಷಿಸುವುದೂ ಅಲಕ್ಷಿ ಸುವುದೂ ಆವರವರ ಅಂತರಾತ್ಮನಿಗೆ ಸೇರಿದ್ದು.

ಶ್ರಾವಣ ಬಹುಳ ಪಂಚಮಿ
ಬುಧವಾರ

ಮಲ್ಲಿಕಾ
೧೭–೮–೧೯೮೮

ಸಂಸ್ಮರಣೀಯಂ

ಹೇಳು, ಹೇಳೆನ್ನ ಹೃದಯ ವೀಣೆಯೆ ! ದಿನದಿನ
ನೆನೆದು ಧ್ಯಾನಿಪ ವಿಷಯ ವಿಸ್ಮಯುವನಿನಿದಾಗಿ.
ಬಹುಕಾಲವಮಾನದಿಂ ಮನಚಿತ್ತ ಕಲ್ಪಮಂ
ಮಥಿಸಿ ಘನಿಸಿದ ಎಳೆಗಳಿಂ ನೆಯ್ದು ಮಣಿಗಳ್
ಗ್ರಂಥಸ್ತ ಗೊಳಿಸಿದ ಕಥೆಯು ಮೇಣ್ ವ್ಯಥೆಯು ! ಈ
ದುರ್ಬರ ದಿನಮಾನದ ಸ್ಪರ್ಧಾ ಕಣದಲಿ ಸುಲಭ
ಸಾಧ್ಯಮಲ್ಲಮೀ ಲೇಖನಿಯ ಕೃಷಿಲೋಕಂ !
ಮಹಾತ್ಮಾ ಗಾಂಧೀಜಿಯುವರ ಸಂಸ್ಮರಣೆಯು
ನೇಮದಲಿ ಪೊದಳ್ದುದು ಕಾವ್ಯ ಮಂಜರಿಯಾಗಿ.
ದಿನದಿನ ಮನಃಕಲ್ಪದಲಿ ಮಿಂಚಿ ಬಹ ವಿವಿಧ
ವಿಚಿತ್ರಗಳ ಚಿತ್ತಾರಮಂ ಜಗಬೆಳಕಿಂಗೆ
ತೇಲಿ ಬಿಡುವೆನಿಂದು ಕರುನಾಡಿನ ಕನ್ನಡದ
ಕಂದಮ್ಮಗಳಿಗೆಂದು. ಚೈತ್ರೋದಯದ ಪುಣ್ಯ
ಸಮಯದಲಿ ಸುಗಂಧ ಕುಸುಮಾವಳಿಯಂ ಅರಸಿ
ಪೂವಿಂ ಪೂವಿಗೆ ಅಂಡಲೆವ ಭ್ರಮಂತ ಭ್ರಮರದ
ಮಾಳ್ಕೆಯಲಿ ವಿಚಾರಾನ್ವಿತ ಮನಃಭ್ರಮರಂ
ಕಾರ್ಯಾಚರಣೆಗೈದ ಸರಸ ಸಾಹಿತ್ಯ. ಬಾಳು
ಬದುಕಿನ ಸುಖದುಃಖಗಳ ವಿಧವಿಧ ರೂಪಕಂ
ಒಡ ಮೂಡಿದುದು ಕಾವ್ಯ ರೂಪದಲಿ. ಕಕ್ತಲೆಯ
ಗರ್ಭದಲಿ ಹಾರಾಡಿ ಮಿಣುಕು ಬೆಳಕನು ಘಳ್
ಘಳನೆ ಚೆಲ್ಲಿ ಸೂಸುವ ಮಿಣುಕು ಪುಳುಗಳಂತೆ
ಚಿಣ್ಣಚಿಣ್ಣ ವಿಷಯ ನಿರೂಪಣೆಯುುಮಿದೆನಲ್ಕೆ

→

ಉಲ್ಲೇಖನ ಧಾರಾವಹ್ನಿಯೀ ಚಿಂಕೃತಿ
ಸ್ವೀಕರಿಪುದು ಬಿಡುವುದು ಓದ್ವ ಜಾಣರಿಂಗಕ್ಕು.

ಕೇಳೆನ್ನ ಪ್ರಿಯ ಬಂಧು ! ಯಾವತ್ಕಾಲಾಸು
ಕಾಲಂ ಪರಮ ಪುರುಷ ರಾಷ್ಟ್ರಪಿತ ಮಹಾತ್ಮಾ
ಗಾಂಧೀಜಿ ಪ್ರಾತಃಸ್ಮರಣೀಯಂ ! ಪುನಃ ಪುನಃ
ಮತ್ತೆ ಮತ್ತೆ ಸಂಸ್ಮರಣೀಯಂ ! ದಿನನಿತ್ಯಂ
ಎಂದೆನೇಂ ? ಅಲ್ತಲ್ತು, ಕೇಳ್, ಎಂದಿಗುಂ, ಜನ್ಮ
ಜನ್ಮಾಂತರಗಳಿಗುಂ ಸದಾ ಸಂಸ್ಮರಣೀಯಂ
ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ
ಎಂದೆಂಬ ನಲ್ವಾತು ಸಲ್ವುದೈ ಮಹಾತ್ಮಂಗೆ !
ಗಾಂಧೀಜಿಯ ದಿನಚರಿ ಎಲ್ಲ ಬಲ್ಲಿದರ ತೆರದಿ
ತೀರ ಸಾಮಾನ್ಯಮಲ್ಲಮೀ ಪುಣ್ಯಭೂಮಿಯಲಿ !
ರಾಷ್ಟ್ರ ಸ್ವಾತಂತ್ರ್ಯಂಬಡೆಯೆ ಶ್ರಮವನೆ ಶ್ರಮಿಸಿ
ಬಂಡಿಳಿಸಿ ಸುಪ್ತ ಚೇತನಗಳ ಬಡಿದೇಳಿಸಿ
ದೀನಜನ ಬಂಧು ತಾನೈಸಿದಂ ಗಾಂಧೀಜಿ !
ರಾಷ್ಟ್ರರಥದ ಮಿಣಿಯಂ ಜಡಿದೆಳೆಯೆ ಬರಿಗೈಲಿ
ಹೋರಾಡಿ ಗುರಿಮುಟ್ಟೆ ಜಗಕೆ ಶಾಂತಿ ಮಂತ್ರದ
ಪರಮಾರ್ಥವನರುಹಿದ ಜಗನ್ಮಿತ್ರ ಗಾಂಧೀಜಿ !
ಲೋಕ ಪ್ರಖ್ಯಾತಿ ಪಡೆದ ಮಹಾನ್ ಸತ್ ಸಾಹಿತಿ !
ರಾಜಕೀಯ ದುರಂಧರ. ಅನನ್ಯ ನ್ಯಾಯವಾದಿ.
ಪ್ರಚಂಡ ವಿಚಾರ ವಿಹಾರಿ ವಿಶ್ವನೇತಾ !
ಧೀಮಂತರೊಳತಿ ಧೀಮಂತ ವರ ದಾತಾ !
ಸಂಘ–ಸಂಘಟನೆಗಳ ಮೌಲ್ಯಮಂ ಬಲವಂದು
ಅರುಹಿ, ಜಡಮತಿ ಮಂಡಲಮಂ ಕಿಕ್ಕಿರಿ ತುಂಬಿ,

→

ಮನೆಮನೆಯ ಕತ್ತಲ ಗವಿಯಲಿರ್ದ ಸತಿಯರಂ
ಬೆಳಕಿನೆಡೆಗೆ ನಡೆಸಿದ ಪರಮಪಿತ ಗಾಂಧೀಜಿ !
ಆರಾರ್ ಕಂಡಿರದ ಶಾಂತಿಮಂತ್ರ ಯಜ್ಞದ
ಸಿರುಳಂ ಹಿರಿದು ಹಿಂಜಿ ಪ್ರಸಾದದೊಲ್ ಹಂಚಿ
ಸಂಜೀವನ ಮಾರ್ಗ ವಿಡಿಸಿದ ದೀನಜನ ಬಂಧು !
ಆತ್ಮಶ್ರೀವಿದೂರರಪ್ಪ ಆಂಗ್ಲೇಯ ಪ್ರಭುತ್ವ
ಪ್ರಭೃತಿಗಳ ಮುಂದೆ ಅನನ್ಯ ಗಾಂಭೀರ್ಯದಿಂ
ಸಂಧಾನುಸಂಧಾನಗಳ ಜಾಗಟೆಯಿಂ ಕಿವಿ
ಗಡಚಿಕ್ಕುವೊಲ್ ಬಡಿದು ಕಂಠಶೋಷಣೆಗೈದ
ವರ ಮಹಾನುಭಾವ ! ಜಗದೇಕೈಕ ಧೀಮಂತ !
ಭಾರತ ಗೌರವದ ಧವಳಕೀರ್ತಿಯುಂ ಕಿಂಚಿತ್
ಮಾಸದೊಲ್ ಮೇಣ್ ವಿಶ್ವಜಗತ್ ರಣಾಗ್ರಗಣ್ಯ
ರಾಷ್ಟ್ರಗಳಿಗೆ ಮಾದರಿಯಪ್ಪಂತೆವೊಲ್ ಶಾಂತಿ
ಮಹಾಸ್ತ್ರದ ನ್ಯಾಯನೀತಿ ಬಲಿಸಿದ ಸೇನಾನಿ !
ಪ್ರೇಮ ಬಾಂಧವ್ಯದಿಂ ಬಿಳಿಯರ ಮನವೊಲಿಸಿ
ಲೋಕ ಮೆಚ್ಚಿ ತಲೆದೂಗುವೊಲ್ ಸ್ವರಾಜ್ಯಮಂ
ಸಂಪಾದನೆಗೈದ ಅನುಪಮ ರಾಷ್ಟ್ರೀಯ ನಿಧಿ !
ರಾಜನೀತಿ ಶಾಸ್ತ್ರಜ್ಞ ! ವರ ಸತ್ಯಾವತಾರ !
ಜಾತಿಮತಗಳ ಹೊಟ್ಟತೂರಿ ಮೈತ್ರಿಗಳಿಸಿದ
ದಿವ್ಯ ಬಂಧು ! ತನ್ನ ಇಡೀ ಜೀವಮಾನವಂ
ಭಾರತ ಜನನಿಯ ಸೇವೆಯೊಳ್ ಮುಡಿಪಿಟ್ಟ ಘನ
ಪುಣ್ಯವಂತ ! ಲೋಕಾಲೋಕ ಪ್ರಜ್ಞಾವಂತ !
ಮನುಕುಲದ ಪರಮಪಿತ ! ಸತ್–ಚಿತ್ ವಿಶ್ವಾನಂದ !
ಉನ್ನತೋನ್ನತ ರಾಜಕೀಯ ಶಾಸ್ತ್ರ ಕೋವಿದ !

→

ಸರ್ವಧರ್ಮ ಸಮನ್ವಯ ಸಂಜೀವನಾಚಾರ್ಯ !
ದೇವಲೋಕದಿಂ ಧರೆಗಿಳಿತಂದ ಶುದ್ಧಾತ್ಮ !
ಸತ್ಯ–ಶಾಂತಿ–ಶಿಸ್ತುಗಳ ಸಂಗೋಪನಾಚಾರ್ಯ !
ಭಾರತ ಜನನಿಯ ಪರಮೌರಸ ಪುತ್ರರತ್ನರ
ಮಹಾ ಪಂಕ್ತಿಯಲಿ ತಾನಹುದು ಅಗ್ರಗಣ್ಯ !

ಓ, ಗಾಂಧೀ ಮಹಾತ್ಮ ! ಸ್ವರ್ಗೀಯ ಸಜ್ಜನನೆ !
ನಿನ್ನನೆನಿತು ಪಾಡಿ ಪೊಗಳ್ದೊಡಂ ಬತ್ತದೈ
ಬಾಯಿ. ಎನಿತೆನಿತು ಧ್ಯಾನಿಸಿದೊಡಂ ಸಾಲದೈ
ಮನಃಚಿತ್ತಕಲ್ಪಕೆ. ಭಾರತ ಜನನಿಯ ಘನ
ಪುಣ್ಯವೇ ಘನಿಸಿ ಬಂದವೊಲ್, ಧರ್ಮರಕ್ಷಣೆಗೆ
ಸಗ್ಗದಿಂದಿಳಿತಂದ ದೇವದೂತನವೊಲ್ ದರಿದ್ರ
ಸೇವೆ ಕೈಕೊಂಡು ಹಠ ಸಾಧನಾ ವೇಶದಲಿ
ಪುಣ್ಯಕಾರ್ಯವೆಸಗಿದ ದೀನಾತಿದೀನ ಬಂಧು !
ಸ್ವಕಾರ್ಯವ ಬದಿಗೊತ್ತಿ ಭಾರತದ ಬಡಜನ
ಬಂಧುಗಳಲಿ ಕಡು ಬಡತನವನಾರೈದು ರಾಷ್ಟ್ರ
ಕಾರ್ಯಮಂ ನಿರ್ವಹಿಸಿ ಗುರಿಮುಟ್ಟಿಸಿದ ವೀರ !
ಸರಳ ಜೀವನದ ತಿರುಳಂ ಧನಮಾನ್ಯರ ಮುಂದೆ
ತೆರೆದಿಟ್ಟು ಆಡಂಬರ ಜೀವನಕೆ ತೆರೆಯೆಳೆದು
ಓಜೆಯಂ ಓಜಿಸಿದ ಗಂಭೀರ ತೇಜಸ್ವೀ !
ಸಮತಾವಾದದ ದಿವ್ಯಜ್ಞಾನಿ, ವೇದಾಂತದ
ಸಾರವರಿತ ಚಾರುಮತೀ, ಚರಕ ಸೇವೆಯಲಿ
ದರಿದ್ರರ ಮುಂಬೆಳಕಿನೆಡೆಗೆ ನಡೆಸಿ, ಅನುಪಮ
ಸತ್ಯಶೋಧನೆಗೈದ ಚಿನ್ಮತಿಯ ಪ್ರಜ್ಞಾನಿ !
ಅಪರಿಗ್ರಹ–ಅಸಂಗ್ರಹಗಳ ಬಂಡನ್ನಿಳಿಸಿ

→

ರಾಷ್ಟ್ರೋದ್ಯಮದ ಗಮ್ಯಸ್ಥಾನದತ್ತ ರಾಷ್ಟ್ರೀಯ
ಕಾರ್ಯಕರ್ತರಂ ಮುನ್ನಡೆಸಿದ ತತ್ವಜ್ಞಾನಿ !
ಓ, ಗಾಂಧಿ ಮಹಾತ್ಮ ! ನಿನ್ನ ಅಗ್ನಿಪ್ರತಿಮೆ
ಎನ್ನಲೇ ? ಶೀತಶೀತಲಮೂರ್ತಿ ಎನ್ನಲೇ ?
ಕಾಂಚನ ಸಲಾಕೆ ಎನ್ನಲೇ ? ಅಥ ಶ್ರೀಗಂಧ
ಕಾಷ್ಠವೆನ್ನಲೇ ? ಏನೆಂದು ಪರಿಭಾವಿಸಲಿ
ಪೇಳ್ಳೈ ಮಮ ಪರಮಪಿತನೇ ! ದಯಗೈದೆನ್ನಯ
ಮನಃಚಿತ್ತಗಳಾಕರಕೆ ಸ್ವಾಂತನವ ನೀಡೈ !
ಕವಯತ್ರಿಯ ಹೃನ್ಮನಗಳ ಕಂಬನಿ ನಮನಂ
ನಿನ್ನ ಪಾದಪದುಮಗಳಿಗೆ ನಿಚ್ಚ ಸಲ್ಲುವೊಲ್
ಕೈಮುಗಿದು ಕಣ್ಮುಗಿದು ಭಕ್ತಿರಸ ಪಾನಗೈವೆ,
ನಿನ್ನ ನೆನವರಿಕೆಯಲಿ ಗಾಂಧೀ ಮಹಾತ್ಮನೇ !

— o —

ಸ್ವಚಿಂತನೆ

ತೃಷ್ಣಾ ಛಿಂದಿ ಭಜ ಕ್ಷಮಾಂ
ಜಹಿ ಮದಂ ಪಾಪ ರತಿಂ ಮಾ ಕೃಥಾಃ

ನಾನಡೆದೆನ್ನೈ ಬೂಂದು ಬನದ ಪಚ್ಚ ತೋಂಟದಲಿ,
ಅಂಕುಡೊಂಕಿನ ಕಲ್ಲುಮಣ್ಣಿನ ಕುಪಥವಿಡಿದು.
ಓಹೊ ! ಸಮನೋಹರ ಸುಸುಂದರ ಪಸುರ್ ಗಡಲ್ !
ಒಂದೇ ಪರಿಯಲಿ ಸಾಲ್ವಿಡಿದು ಸಾಲ್ಗೈಸಿ ನಿಂದ
ಬೂಂದು ಸಸ್ಯರಾಜಿಯ ಅನುಪಮ ಸಿರಿವಲಯಂ.
ಪಸುರು–ಪಸುರು ! ಪಸುರೇ ಪಸುರು ! ಭಾವನೆ ಹೆಪ್ಪು
ಗಟ್ಟುವನ್ನ. ಹೃದಯ ಘನಿಸಿ ವೈ ಮರೆವನ್ನ.
ಹಸುರುಕ್ಕಿ ಹರಿದ ಬೂಂದು ತೋಂಟದ ದಿವಿನಾದ
ಪಾರಾವಾರಮೆನ್ನಯ ಸ್ವಾಮಿತ್ವದಲಿರೆ ಏಂ
ಆನಂದ ಭಾಗ್ಯವೋ ! ಪೆರ್ಮೆಯುಳ್ಳ ಮಾನಸ
ಪಕ್ಷಿಗೆ ! " ನನ್ನದು " ಎಂಬ ಅಭಿಮಾನ ಉಕ್ಕುತಿರೆ
ನೋಡಿದೆ ಕಣ್ ಹಸುರುಂಡು ಹಸುರ್ಗಟ್ಟುವನಕಂ !
ನನ್ನ ತೋಂಟ ! ನಾನೇ ಸ್ವಾಮಿನಿ ! ಮರುಚಣದಲಿ
ಛೀಃ ! ಏನೀ ವಿಪರೀತ ! ಇದೆತ್ತಣ ಕಡುಸ್ವಾರ್ಥ ?
ಗುಳಿತೋಡಿ ಗಿಡಹೂಳಿದೊಡೆ ಎಂತೆನ್ನದಪ್ಪುದು ?
ಈ ಅಶಾಶ್ವತ ಶರೀರವನಾಶ್ರಯಿಸಿ ನಲಿವ
ಆಸೆ-ಆಕಾಂಕ್ಷೆಗಳ ಪರಿಪುಷ್ಟಿಗೆ-ಸ್ವಾರ್ಥದ
ಪರಮಾವಧಿಗೆ ಆದಿ-ಅಂತ್ಯವುಂಟೆ ಪ್ರಭುವೆ ?
"ನೀನೆಂಬುದು" ಎಂದಾದೊಡಂ ಬಪ್ಪುದೆ ಭವದಿ ?
ಸಂಗ್ರಹಕ್ಕೆ ಸಾವಿರ ಕೈಕಾಲ್ಗಳ್ ಮೊಳೆತು

→

ಒಡಲ ಪಸಿವೆ ಕಾರುತಿರಲ್ ದಿವ್ಯ ಮಿಥ್ಯೆಯಲಿ
ಮುಳುಗಿ ಕೊಚ್ಚಿ ಹೋಹುದಲ್ಲದೆ ಬೇರೆ ಗತಿಯಿಲ್ಲ !
ಮಾಯಾವಿ ದುರ್ವಿಧಿಯ ಆಶಾಪಾಶಕೆ ಸಿಲ್ಕಿ
ಮೋಹಮಾಯೆಯಲಿ ಮೈಮರೆತು-ಜಗಮರೆತು ತಾಂ
ಸ್ವಾರ್ಥಲೋಲುಪ್ತಿಗೆ ಒಳಗಾದೊಡೆ ಏಂಬಹುದು ?
ಭಾವಗಮ್ಯದ ಜಾಡು ಎಲ್ಲೊ, ನಾನಿನ್ನೆಲ್ಲೊ !
ವಿಶ್ವಬ್ರಹ್ಮಾಂಡ ಚಕ್ರಚರಣದ ರಣರಭಸ
ಧೂಳಿಯ ಕಣಕಣಮಂ ಜಡಿಕುಟ್ಟಿ ಹಾರಿಸದೆ ?
ಪ್ರಭುವೇ ! ನಾನು-ನನ್ನದು ಎಲ್ಲವಂ ನಿನ್ನ
ಪಾದಗಳಿಗೆ ಸಮರ್ಪಿಸಿ ನಿಶ್ಚಿಂತಳಾಗುವೆ
ಈ ಜಡ ಶರೀರದಲಿ ನೀನಿರುವನ್ನ.

— o —

ಉದಯ ಭಾನು

ಪೂರ್ವೀ ದಿಗ್ ತಟಾಂತಲಗ್ನದ ಉದಯಾದ್ರಿಯ
ಚೂಡದಲಿ ಮೂಡಿದಳ್ ಉಷೆ, ವಿರಂಚಿ ಕೈಯಿಂದ
ಚಿನ್ನದ ಕಮಂಡಲಂ ಮೆಲ್ಲನೆ ತುಳುಕಿದುದೊ
ಎನೆ ದಿವ್ಯ ಮುಂಬೆಳಕು ಹರಡಿತು ಭುವಿಯಮೇಲೆ.
ನೀಲ ಭಿತ್ತಿಯಲಿ ಗುಡಿಗೋಪುರ ಕಟ್ಟಿದುದು ವಿಧ
ವಿವಿಧ ವರ್ಣದ ಮುಗಿಲ್‌ಗಳ ಅದ್ಭುತ ಸತ್‌ಸಾಂದ್ರ.
ಮರ ಬಳ್ಳಿ ಗಿಡಗಳಲಿ ನಿದ್ದೆಗೈದಿರ್ದ ಸಕಲ
ತರ ಪಕ್ಷಿಗಳ್ ಎಚ್ಚೆತ್ತು ಎರೆಂಕೆಯ ಬಿದಿರ್ಚಿ
ಕೊರಳೆತ್ತಿ ಪಾಡಿದುವು ಆನಂದ ಮೋದದಿಂ.
ಎಲೆಗೊಂಚಲ ಹೊದರಿಂದೆ ಎಡವಿಡದೆ ಮೊಳಗಿತು
ಪಕ್ಷಿಗೊರಳ ಸುಪ್ರಭಾತಂ. ಪೊನ್ನಿನ ಸಹಸ್ರ
ವಗೆಯ ಕಿರುಗೆಜ್ಜೆಗಳ ಸರವಲುಗಿಸಿದಂತೆವೋಲ್
ಚಿಲಿಚಿಲಿಸಿ. ಆಃ ! ಪಕ್ಷಿಗೊರಳುಂ ದಿವ್ಯಾನಂದ
ತುಂಬಿ ಹರಿಸಿದ ಮೊಳಗು ! ಭಕ್ತಿರಸ ಉಕ್ಕಿಸುವ
ಧ್ಯಾನಮಯ ಮೊಳಗು ! ತದೇಕ ಚಿತ್ತದ ಶಾಂತ
ಸುಪ್ರೀತ ಸುಮನಸದೇಕಾಂತ ರೀತಿಯ ಮೊಳಗು !
ಪ್ರಾತಃಸಮೀರ ತಂಪೂಡುವೊಲ್ ತನಿಯೆರಚಿ
ತಣ್ಣಗೆ ಸುಳಿದು ಸುತ್ತುತ ಸುಯ್ಯನೆ ಸುಯ್ದುಯ್ದು
ತೀಡಿದುದು ಪುಷ್ಪಗಂಧಮಂ ಪೂಸಿ ಮಧುಮಯ
ತೋಷಾತಿರೇಕದಿಂ. ಮುಖಮೈಗಳಂ ಶೀತ
ಹಸ್ತದಿಂ ಮುಟ್ಟಿ ಮುಟ್ಟಿ ಮುದ್ದಿಪೊಲ್ ತನಿಮುದ್ರೆ
ಒತ್ತಿದತ್ತು ಮೈ ಚಿಲ್ಲನೆ ನಡುಗಿಸುವ ತೆರಂ.
ಅಸ್ತಗಿರಿ ಮಸ್ತಕದ ಮೇಲೆ ಚೆಲುವು ಚೆಲ್ಲಿದ

→

ತೋಯದಾಂಬರ ಶೋಬಿತಾಂತರಿಕ್ಷದ ನೀಲ
ರಾಮಣೀಯಕ ಭಿತ್ತಿಯಂ ಬಾಲ ಸುಕೋಮಲ
ರವಿಯು ರುಕ್ಮರುಚಿರ ಸುವರ್ಣಮಂಡಲವೇರಿ
ಉಜ್ವಲಿಸಿ ಕನಕ ಬಿಂದುವಿನೊಲ್ ಮೆರೆದಿರಲ್
ಭವ್ಯಾಂಬರ ಶೋಭೀ ಶಿರೋಮಣಿಯಾಗೆಸೆದಂ !
ಅಃ ! ನೋಡುತಿರೆಯಿರೆ ಸೌರಮಂಡಲ ಸೌಂದರ್ಯ
ರಾಶಿಯಲಿ ನೆರೆ ಮುಳಗಿ ಬೃಹದ್ ಮುಗಿಲ್ ಮಂಜು
ಸರಿಯುತಿರ್ದುದು ರವಿಗೆ ತೆರೆಯೊಡ್ಡಿ ಗುರಿಗೊಂಡು !
ಗುರಿಸಾಧನಾ ಯಾತ್ರೆಯಲಿ ಬೆಳ್ಮುಗಿಲ್ ಸದ್ದು
ಗದ್ದಲದ ಸೊಲ್ಲಿಲ್ಲದೆ ಸರ್ರನೆ ಮುಂಬರಿದು
ತೆರೆಯೊಡ್ಡಿದುದು ಉದಯರವಿಯ ಸಿರಿಮಂಡಲಕೆ !
ದೃಶ್ಯಮಾನ ಸೌಂದರ್ಯ ವಾರಾಶಿಯುಂ ತೆರೆ
ಮರೆಯಲಿ ಅಡಗಿ ಪ್ರಖರ ಕಿರಣಗಳ್ ಮುಗಿಲಿನ
ಸಿರಿಯಂಚಿಗೆ ಸುವರ್ಣ ಲೇಪವಂ ಒತ್ತೊತ್ತಿ
ಸುತ್ತಲ್ ಕಿರಣಂಗಳ್ ಸೂಜಿಯೊಲ್ ಚುಚ್ಚಿ ಹೊರ
ಬರುತಿರಲುರೆ ಮುಗಿಲಿನ ಮಿದುಮೈ ಉರಿ ಭರಿಸದೆ
ಅಲ್ಲಿಂದ ಸರಿದು ಹೋದುದು ಓಟ ಕಿತ್ತವೊಲ್ !
ದೃಷ್ಟಿ ಕಕ್ಷೆಯಲಿ ನೆಲೆಗೊಂಡ ಶಾಂತಿರಸವಂ
ಸವಿಯೆ ಪಜ್ಜೆ ಕೀಳದೆ ನಿಂತೆನಲ್ಲೆ. ಕಣ್ಮನ
ಸೌಂದರ್ಯದ ಸೊಬಗಿನಾರಾಧನೆಯಲಿ ಮುಮ್ಮಲ
ಮುಳುಗೆ ಭಾವನದಿಯುಂ ಉಕ್ಕುಕ್ಕಿ ಹರಿದತ್ತು
ಕೋಡಿವರಿಯುವೊಲ್. ಪ್ರಕೃತಿಯಾರಾಧನೆಯು
ಯದೃಚ್ಛಾ ಪ್ರವೃತ್ತಿ ಚಣಚಣಂ ಬಲಿದತ್ತು
ಘನಿತ ಮಾಗಿಮಂಜಿನ ಪಾಂಗಿನಲಿ. ಕರ್ರನೆಯ
ಕಾಮುಳ್ಳಿಗಳ್ ದಂಡುಗೊಂಡು ಪಾರ್ದುವು ನಭೋ

→

ದೇಶಕೆ, ವಿರಳವಾದ ಕರ್ಪುರಚುಕ್ಕಿಯ ಹೋಲಿ !
ಎರೆಂಕೆ ಬಿದಿರ್ಚಿ ಸಿಸ್ತಿನಿಂ ದೂರ ಗವ್ಯದ
ಪಥಮಂ ಗುರಿಗೊಂಡಂತೆವೊಲ್ ಪಾರ್ವ ಸುಂದರ
ಚಿತ್ತಾರ ! ತಂಗಾಳಿ ಅಲೆಪದಿಂ ಅತ್ತಿತ್ತ
ತುಯ್ಯಲಾಡುತೆ ಮರ್ಮರಿಸುವ ವನವಾರ್ದಿಯುಂ
ನಲ್‌ಶೃತಿಯುಂ ನಿಳಾಂಟೆದತ್ತು ಪಕ್ಷಿಗಳಿಂಚರದ
ರಾಗಾರುಣತಾನದ ವಿನೋದಾವಳಿಗೆಂದು !
ಮೋಣೆಲ್ಲೊ ಕೂಗಿತೊಂದು ಬನಗೋಳಿ ! ಊರಿನ
ಕೋಳಿ ತೆಕ್ಕನೆ ಎಳ್ಚತ್ತವೊಲ್ ಕೂಗಿತು ಅದಂ
ಅನುಕರಿಸಿ ಮತ್ತೆ ಮತ್ತೆ ತಾನೆಂಬಂತೆವೋಲ್ !
ಕಾಳು ಹೆಕ್ಕಲೆಂದು ಪೊದೆಯಿಂ ಪೊರಗುಯ್ದು ನಿದ್ದೆ
ಗಣ್ಣಿನ ನವಿಲ್‌ಗಳ್ ಕೊರಳ್‌ಕೊಂಕಿಸಿ ಕಂಗಳ್
ಹೊರಳಿಸಿ ಮುದದಿಂ ಕ್ರೇಂಕರಿಸಿದುವು ಬಾಯ್ದೆರೆದು.
ಕೋಗಿಲೆಗಳ್ ಕುಹೂ ಕುಹೂ ರಾಗ ಮಾಧುರ್ಯಂ
ಹರಿಸಿದುವು ಪ್ರಾತಃಸ್ಫೂರ್ತಿಯುಂ ಸ್ಫೂರ್ತಿಸುವವೊಲ್ !
ಓವೊ ! ಜಗವೆಲ್ಲ ಆನಂದ ಬಂದುರಮಯಂ
ಬಗೆಗಣ್ಣು ಮಲರಿ ಮಂದಾರವಾಗುವ ತೆರಂ !
ತಿರ್ರನೆ ತಿರುಗುವ ಚಕ್ರದೊಲ್ ತೋರ್ಚ ಉಜ್ವಲ
ಬಾಲರವಿ ಸಂಚಲಿಪ ಮುಗಿಲೇರಿ ನವನವೋ
ತೇಜದಿಂ ಶೋಭಿಸುತಿರೆ ಮನಮಂಡಲದ
ರಾಗಮಯ ರಸಾಬ್ಧಿ ಅಲೆಯುಕ್ಕಿ ಅಲೆಯೇರಿ
ಬಾವಾವೇಶದಿಂ ತೊಟ್ಟಕ್ಕಿತು ಹೃತ್‌ಕುಂಡಕೆ.
ಓ ! ದಿವ್ಯ ಜಗತ್ ಶಿರೋಮಣಿ ! ನಿನ್ನನ್ನೇನೆಂದು
ಬಣ್ಣಿಸಲಿ ? ಜಗದಾದಿಯಿಂ ನಿನ್ನ ಸುಯೋಗಕೆ
ಆದಿ-ಅಂತ್ಯಗಳಿಲ್ಲ. ಜನನ ಮರಣಗಳಿಲ್ಲ.

→

ರೋಗ ರುಜೆಗಳಿಲ್ಲ. ತವದರ್ಶನ ಮಾದೊಡಂ
ಅರ್ಥೈಸಲ್ ನಿಲುಕದ ಹಿರಿ ಸಮಸ್ಯೆ. ವಿಜ್ಞಾನ-
ಪ್ರಜ್ಞಾನಗಳ್ ಮುದುಡುತಿವೆ ನಿನ್ನಯ ಪ್ರಖರ
ಕಿರಣಗಳನರ್ಥೈಸುವ ಶಕುತಿಯಿಲ್ಲದೆಯೆ.
ವಿಶ್ವ ಬ್ರಹ್ಮಾಂಡದಾಲೋಕದಲಿ ಘನವೆತ್ತು
ಪರಿಶೋಭಿಸುವ ಗ್ರಹಕೋಟಿಗಳ ಶ್ರೀಚಕ್ರ
ಪ್ರತಿಷ್ಠಾನವೇ ನೀನಾಗಿರೆ ಗ್ರಹಗಳೆಲ್ಲ
ಬಹವು ಹಿಂದೆ; ನೀನಡೆಯೆ ಮುಂದೆ. ಸಕಲ ಗ್ರಹ
ಕೋಟಿಗಳ್, ಜೀಮೂತ ಪರಿವಾರಗಳ್, ಅಷ್ಟ
ದಿಗ್‌ಪಾಲಕರ್, ಸಿರಿಸಗ್ಗಿಗರ್, ಯಾವತ್ಕಾಲಂ
ಇರಿಸುಮುರಿಸಿರದೆ ನಿನ್ನನಿಯಮದಿ ಸಿಲ್ಕಿಹರ್ !
ಉದಯಾಸ್ತಮಾನಗಳ ಅದ್ಭುತ ಪರಿಭ್ರಮಣ
ಯಾನವದು ಸುಲಲಿತಂ ನಿನ್ನ ಸುಕುಮಾರತೆಗೆ.
ನೀನಿಲ್ಲದೊಡೆ ಬ್ರಹ್ಮಾಂಡಮಿಲ್ಲವೆಂಬುದದು
ಸತ್ಯ ! ಬ್ರಹ್ಮಾಂಡಮಿಲ್ಲದಿರ್ದೊಡೆ ನೀನಿಲ್ಲ
ಎನಲದು ಸತ್ಯವೇ ! ಹಗಲೆಲ್ಲ ಇರುಳೇ ಇರುಳು !
ಆಸೆಯ ಕೊರಳಿಗೆ ಉರುಳು ! ಮತ್ತಂ ಜೀವನದ
ಪಾಪಪುಣ್ಯಗಳ ದಿವ್ಯ ಮರಣವು ಸತ್ಯವೇ.
ಓ ವಿಶ್ವಲೋಕದೇಕೈಕ ಉಜ್ವಲ ತೇಜವೇ !
ದೃಷ್ಟಿ ಕಕ್ಷೆಯುಲಿ ನೀನಲಿದಿಹೆ ಅಜ್ಞಾನವ
ಜಡಿಕುಟ್ಟ ಝಾಡಿಸುವೊಲ್ ನಿತ್ಯ ನಿರಂತರಂ.
ನಿನ್ನ ನೆನೆಯಲರಿಯದೆ ನೊಂದು ಬೆಂದೆನಯ್ಯಾ,
ಭವಧಿಯೊಳ್ ಸಿಲ್ಕಿ. ನಿನ್ನ ಕಿರಣಕೋಟಿಗಳ್
ದಹಿಸಲೆಮ ಅಜ್ಞಾನದ ಬೃಹದ್ ಕೋಂಟೆಯಂ
ನಮೋಜಗತ್ ಪ್ರಾಣಪದಕನೇ ! ನಮೋನ್ನಮಃ

— o —

ಥಿಯಾಸೋಫಿಕಲ್ ಸೊಸೈಟಿ

ಸಾವಿರದೆಂಟನೂರೆಪ್ಪತ್ತೈದರ ಕಾಲಮಾನದ
ಮನುಕುಲದಲಿ ಅಂತಃಸತ್ವವಿನಿತು ಇಲ್ಲದ
ಜಡಮತಿಯ ಜಡಬಾಳು ನೀತಿ ನ್ಯಾಯಗಳಿಂಗೆ
ಹೊರತಾಗಿ, ಧರ್ಮ ಕರ್ಮಗಳಿಂಗೆ ಮಿತ್ರಾಗಿ,
ಮಾನವೀಯತೆಯ ದಿವ್ಯ ಪರಮೋಚ್ಚ ಹುರುಳಂ
ಕಂಡರಿಯದ ತೆರದಲಿ ಮನುಕುಲ ಬರಡೈಸಿರೆ ;
ಆಚಾರ ಸುವಿಚಾರಗಳಿಂ ದೂರವೆನೆ ಅನು
ದಿನಂ ಪಶು ಜೀವನದೊಡಂ ಸ್ಪರ್ಧೆಗೆತ್ತವೊಲ್
ಅಮಾನವೀಯತೆಯ ಧಾರಣ ಗತಿಯೆ ಎಲ್ಲೆಲ್ಲೂ !
ತಮ್ಮವರ ಸ್ಥಿತಿಗತಿಗಾಗಿ ಮರುಗಿ ಕರಗಿದ
ಧೀಮಂತ ಸಹೃದಯತೆ ಮನುಕುಲದುದ್ಧರಣ
ಕಾರ್ಯಕ್ರಮವಂ ರೂಪಿಸಲುದ್ಯುಕ್ತವಾದುದು
ತನುಮನಗಳಲಿ ಚಿಂತನ ಮಂಥನಂಮೆರಸಿ.
ನರಜನುಮವೆತ್ತಿ ಬೌದ್ಧಿಕ ಸುಯೋಗಂಬಡೆದು
ಬಾಳಿಗೆ ಸುಸುಂದರ ಚೌಕಟ್ಟರದೆ ಬದುಕಿಯುಂ
ವ್ಯರ್ಥಮೆನಿಸಿ ಮನಮತಿಗಳ್ ನೊಂದು ನೀರಾದುದು
ನಾಗರಿಕ ಕಾಲಮಾನದ ನಾಗರಿಕ ಜೀವ
ರಾಶಿ. ತಮ್ಮ ತಾವರಿಯದ ಸ್ಥಿತಿಗತಿಯಲ್ಲಿ
ಸುಪ್ತ ಚೇತನವದು ನಿರಾಳ–ನಿರಾತಂಕಿತ
ಸ್ಥಿತಿಯಲಿ ಮುಗ್ಧದುಗ್ಧಂ. ನೂಯಾರ್ಕ್ ನಗರಿಯ
ಚಿಂತನಾಶೀಲೆ, ಸೂಕ್ಷ್ಮಮತಿ ಮದಾಮ್ ಹೆಚ್. ಪಿ.
ಬ್ಲಾವಾಟ್ಸ್ಕಿಯುಂ ನಿಚ್ಚ ಸಾಮಾಜಿಕರ ಘನತೆ
ಗೌರವಗಳಂ ಸಮ್ಯಕ್ ದೃಷ್ಟಿಯಿಂದೀಕ್ಷಿಸುತೆ

→

ತನ್ನ ಗೆಣೆಯ ಬಂಧುಗಳಂ ಕಂಡು ವಿಷಯಮಂ
ಕೂಲಂಕಶವಾಗಿ ಚರ್ಚಿಸಿ ಮನಮಥಿಸಿದಳ್ ;
ಮುಗ್ಧದುಗ್ಧ ಮನಮತಿಯ ವಿಕಸನಮಂ ನೆನೆದು
ಜ್ಞಾನ ಪ್ರಸರಣದ ಸಲುವಾಗಿ ಮುಂದಾದಳ್.
ವಿಶಾಲ ಜಗತ್ತಿನ ಮನುಕುಲದ ಜ್ಞಾನ ಜ್ಯೋತಿಯ
ಉರಿಸಿ ಕುಡಿಕಟ್ಟಿದೊಲ್ ಬೆಳಗಿಸುವ ಮನೋಭವ
ವಿಚಾರ ವಿಮರ್ಶೆಯುಂ ಅವ್ಯಾಹತ ನಡೆದುದು
ಪಗಲಿರುಳ್. ಸಂಜೀವನೋಚಿತ-ಸೃಜನಾತ್ಮಕ
ಆಚಾರ-ಸುವಿಚಾರಗಳಂ ಬದುಕಿಗಳವಡಿಸಿ
ಉಜ್ಜೀವನಗೊಳಿಸುವ ಗುರಿಯುಲಿ ತನುಮನದೊಳ್
ಚಿಂತನದಿ ಮಂಥನಮೆಸಗಿದತ್ತು. ಜಗತ್ತಿನ
ಲೌಕಿಕರೊಳ್ಪಿಗೆ ಮೇಣ್ ಜಗದೊಳ್ಪಿಗೆ ಸರ್ವತ್ರ
ಸದಾ ಸಾಧನೆಯಿಂದೆ ದಿವ್ಯ ಸಂಕಲ್ಪಮಂ
ಪುಷ್ಟೀಕರಿಸುವಂತೆವೊಲ್ ಜ್ಞಾನದೀವಿಯುಂ
ಉರಿಸಲುರೆ ಜ್ಞಾನ ಕೇಂದ್ರವೆನೆ ಸಂಸ್ಥೆಯೊಂದಂ
ಸಂಯೋಜಿಸಿ ಕಾರ್ಯಕ್ರಮಗಳ ಪ್ರಣಾಳಿಕೆಯುಂ
ರಚಿತವಾದತ್ತು. ಬಲು ದಿನಗಳ ಗೆಣೆಯರಪ್ಪ
ವಿಲಿಯಂ ಕ್ವಾನ್ ಜಡ್ಜ್ ಮೇಣ್ ಹೆನ್ರಿ ಎಸ್.
ಅಲ್ಕಾಟ್‌ರವರ ಪೂರ್ಣನೆರವಿಂ ಸಹಕಾರ-
ಸಂಬೋಧನೆಯಿಂ "ಥಿಯಾಸೋಫಿಕಲ್ ಸೊಸೈಟಿ"
ಎಂಬ ನಲ್ ನಾಮಧೇಯುವನೊತ್ತ ಸಂಸ್ಥೆ ತಾಂ
ಸಾವಿರದೆಂಟನೊರೆಪ್ಪತ್ತೈದರಲಿ ಮೈದಾಳಿ
ವಿಜೃಂಭಿಸಿತು ಸರ್ವ ಕಲ್ಯಾಣ ಕಾರ್ಯಂ
ಮನಗೊಂಡು. ಅಜ್ಞಾನಿಗಳೆರ್ದೆಯುಲಿ ಮುಚ್ಚಿದ

ಗುಡಿದ್ವಾರಮಂ ತೆರೆದು ಜ್ಞಾನದ ಕಿರಣಗಳಂ
ಪುಗಿಪುದೊಂದೇ ಗುರಿಯಲಿ. ಜೀವಜ್ಯೋತಿ ಮದಾಮ್
ಹೆಚ್. ಪಿ. ಬ್ಲವಾಟ್ಸ್ಕಿ ರೂಪಿಸಿದ ಕಾರ್ಯಕೆಂದು
ಸಂಸ್ಥೆಯೊರೆದ ಪ್ರಣಾಳಿಕೆಯಲಿ ಸಂಘೋಷಣಾ
ಸುವಿಚಾರ ವಾಹಿಯಿಂತಿರ್ದುದೆನೆ ಗಮನಿಸೆಲೆ
ಹೇ, ಚಿಂತನಶೀಲ ಮನವೆ! "ಮನುಕುಲಜರ್ ಪರಸ್ಪರ ಪ್ರೇಮ
ಸ್ನೇಹಗಳ ಮಧುರ ಬಾಂಧವ್ಯದಿಂದಿರುವುದೇ
ಸಂಸ್ಥೆಯ ಗುರಿ. ಜಾತಿ ಮತ ವರ್ಗಗಳ ಪ್ರಭೇದ
ಮೇಲು ಕೀಳು ವರ್ಜ್ಯಂ. ವಿದ್ಯೆ ಸಾರ್ವತ್ರಿಕಮಕ್ಕು.
ಸ್ತ್ರೀಪುರುಷರೊಗ್ಗಿನಿಂ ಪ್ರಗತಿ ಪಥವಿಡಿವುದೇ
ನಾಗರಿಕ ಪ್ರಜ್ಞೆ ಮೇಣ್ ನಾಗರಿಕ ಶೋಭನೆ.
ಮನುಕುಲದ ಪಾರಸ್ಪರಿಕ ದ್ವೇಷ ಅಸೂಯೆಯ
ಪುಟ್ಟಳಿಸಿ ನೆರೆಹೊರೆಯ ದೇಶಗಳ ಬಾಂಧವ್ಯಕೆ
ನೆರಂಗೊಡುವ ಸಂಜೀವನೋತ್ಕರ್ಷತೆಗಾಗಿ
ಬದುಕು. ಸಕಲ ವಿಶ್ವಾತ್ಮಕಮಪ್ಪ ಪುರಾತನ
ಮೇಣ್ ವಿನೂತನ ಧರ್ಮಗಳ ಅಧ್ಯಯನದಿಂ
ಹುರುಳ್ ಹಿಂಜಿ ಸಾರವ ಕ್ರೋಢೀಕರಿಸವೇಳ್ಕು.
ಮೂಢ ನಂಬಿಕೆಗಳ ಜಡಿಕುಟ್ಟಿ ಬದಿಗೊತ್ತಿ,
ಮನಶುಕ್ತಿಯ ಶುದ್ಧೀಕರಣಂಗೈವುದು. ಲೈಂಗಿಕ
ಭೇದದ ಕ್ಷುದ್ರ ನೀತಿಯುಂ ವ್ಯರ್ಜ್ಯ. ಮಂತ್ರ-ತಂತ್ರ
ಪವಾಡಗಳ ಕೀಳರಿಮೆ ಕೀಳ್ಚಿಂತನೆಗಳಂ
ಕಡೆಗಣ್ಚಿ ಜಡಿಕುಟ್ಟಿ ಪ್ರಕೃತಿ ನಿಯಮದೊಳ್
ಜೀವನ ನಡೆಸುವುದೇ ಧರ್ಮ. ಮನುಜರೆದೆಯಲಿ
ಸುಪ್ತ ಸ್ಥಿತಿಯೊಳ್ ಅಡಗಿಹ ಶಕ್ತಿ ಸಮಸ್ತದ

→

ಉದ್ದೀಪನೆ. ತಾನೊಂದು ವಿಶೇಷ ವರ್ಗಕ್ಕೆ
ಸೇರಿದವನೆಂಬಹಂಕಾರ ದಮನ. ಪ್ರಕೃತಿ
ನಿಯಮಗಳ ಯೋಜನೆಯಲಿ ಜಗತ್ತಿನ ನಿರ್ವಹಣೆ
ಎಂಬ ಅದ್ಭುತ ಸತ್ಯಮಂ ಮನಮನಂಗಳಿಗೆ
ಮುಟ್ಟಿಸುವ ಪ್ರಚಾರ ಭಾಷಣಗಳ್, ಲೇಖನ,
ತತ್ವಚಿಂತನೆ ನಿತ್ಯ ಕಾರ್ಯಕ್ರಮದೊಳಕ್ಕು."

ಇಂತಿಂತಹ ವಿವೇಚನೆಯುಕ್ತ, ಅನುಪಮ ಸಾರ
ಸರ್ವಸ್ವಮುಳ್ಳ ಧ್ಯೇಯೋದ್ದೇಶಮಂ ಕೈಕೊಂಡ
ಥಿಯಾಸೋಫಿಕಲ್ ಸೊಸೈಟಿ ಧೀಮಂತ ಸಮಾಜ
ಸಂಪುಟಮಂ ಆಕರ್ಷಿಸಿದುದು ಸೂಜಿಗಲ್ಲಿನೊಲ್ !
ಕಾಲೋಚಿತಮಪ್ಪ ಅನನ್ಯ ಆಕರ್ಷಣೀಯ
ಪಾಂಗಿನಲಿ ಜನಕೋಟಿ ಎಳೆಎಳೆಗಳ ಸೇರಿಸಿ
ಹುರಿಹೊಸೆದವೊಲ್ ಕೂಡಿದತ್ತು ಸಂಸ್ಥೆಯ ಮಹತ್
ಧ್ಯೇಯೋದ್ದೇಶಗಳನೊಪ್ಪಿ, ಬೆಲ್ಲದ ಸವಿಯಂತೆ
ಮೆಚ್ಚಿ ಮಾನಿಸಿ. ಕಾಲಾಂತರದಿ ಬೆಲ್ಲದ ಸವಿಗೆ
ಸುತ್ತಣಿಂ ಮುತ್ತಬಹ ಇರುವೆಗಳ ವೋಲಾಯ್ತು
ಜನಕೋಟಿ. ಬಹುಮುಖ ಸೇವೆಗೆ ನೆರೆನಿಂದು
ವಿಶ್ವಮಾನ್ಯತೆಯುಂ ಪಡೆದು ಅಲ್ಲಲ್ಲಿ ಸಂಸ್ಥೆಯ
ಶಾಖೋಪಶಾಖೆಗಳ್ ಪೊದಳ್ದುವು, ಅಣಬೆಗಳ
ಪಾಂಗಿನಲಿ. ಜ್ಞಾನಜ್ಯೋತಿ ಮದಾಮ್ ಬ್ಲವಾಟ್ಸ್ಕಿಯ
ಪರಿಶ್ರಮದಿಂ ಸಂಭವಿಸಿ ಪರಮ ಯೋಚನಾ
ಶೀಲರಂ ಪೊಂದಿ ಕಾಲೋಚಿತ ಕಾರ್ಯಕಾರಣ
ಸಂಯೋಜನೆಯಿಂ ವಿಜೃಂಭಿಸಿದುದು ಅದ್ಭುತ
ಜಗತ್ ಮೈತ್ರಿಯಲಿ. ಕರ ದೀವಿಯಿಂ ದೀವಿಗೆಯಂ

→

ಉರಿಸುವೋಲ್, ಕತ್ತಲೆಗವಿಗೆ ಬೆಳಕು ತಂದವೋಲ್,
ಸುಪ್ತಚೇತನಮಂ ಬಡಿದೇಳಿಸುವೊಲ್ ಮೇಣ್
ಕಣ್ಣಿರ್ದ ಕುರುಡಿಗೆ ಬೆರಳಿಂದೆ ಚುಚ್ಚುವೊಲ್
ಭುಗಿಲೆದ್ದು ಲಿಂಗಭೇದ ನ್ಯಾಯವ ಬದಿಗೊತ್ತಿ
ಅಂಗನೆಯರಿಂಗೆ ಸ್ವಾತಂತ್ರ್ಯವ ನೀಡಿದತ್ತು !
ಮದಾಮ್ ಬ್ಲವಾಟ್ಸ್ಕಿ ಮನದಿ ಸಂತಸಗೊಂಡಳೆನೆ
ಉರುಳಿದುದು ಕಾಲಮಾನ, ಎನಿತೆನಿತೋ ಸುಪ್ತ
ಚೇತನಗಳ ಏಳಿಸಿ ಜ್ಞಾನಸರಿಯಂ ಹರಿಸಿ. ಏಗಳುಂ
ಕಹಿಸಿಹಿಗಳ ಒಡನಾಟವಿಲ್ಲದ ಬಾಳಿರ್ಪುದೆ ಭವದಿಯಲಿ ?
ಕಿರುಮನದ ಪ್ರಜೆಗಳೆನಿತೋ ಎದುರ್ವೆತ್ತು ಕರಕರೆ
ಕಿನಿಸಿಗೆಯುನಿತ್ತು ಕಾಡಿದರ್ ವಿಷಸರ್ಪದೋಲ್ !
ಸಂಸ್ಥೆಯಲಿ ಲೈಂಗಿಕ ಪರಿಭೇದವಿರದ ಸ್ನೇಹ
ಧೋರಣೆಯಲಿ ಸ್ತ್ರೀಪುರುಷರೊಗ್ಗಿನಿಂ ಗೈವ ಕಾರ್ಯ
ಕಲಾಪಗಳ್ ಮುಂದ್ವೈದು ನಿತ್ಯ ಸರಸ ಸಲ್ಲಾಪ
ಆನಂದ ಭೋಗಗಳಿಗೆಡೆಯಿತ್ತು ವೀಕ್ಷಕರ
ಕೆಂಗಣ್ ಕಿಡಿಕಾರುತೆ ಕೋಲಾಹಲವೆದ್ದಿತು
ಜನಜಂಗುಳಿಯಲಿ ! ಅಹಿತ ಘಟನೆಗಳೊದವಿಬರೆ
ನಗೆಪಾಟಲಿಗೆ ಕಾರಣವಾದತ್ತು ! ಅಂತಿಂತು
ಏಳು ಬೀಳಿನ ಹಾದಿಯಲಿ ಹೊಯ್ದಾಟದಿಂ ಬಲ್
ದಿಕ್ಕೆಟ್ಟವೊಲ್ ನಡೆದುದಾ ಮದಾಮ್–ಳ ಸಂಸ್ಥೆ
ಉದಾತ್ತ ಭಾವನೆಯನುದಾತ್ತೀಕರಿಸಿ ನಿಜ
ಸಂಜೀವನಿಯಾದ ಥಿಯಾಸೋಫಿಕಲ್ ಸೊಸೈಟಿ.
    ಅತ್ತಿತ್ತಲ್ ಹರೆಗೈ ಚಾಚುತ್ತ ಪ್ರಪಂಚ
ವ್ಯಾಪ್ತಿಯಾದ ಸಂಸ್ಥೆಯ ಶಾಖೋಪಶಾಖೆಗಳ್

→

ಭಾರತವಂ ಪ್ರವೇಶಿಸಿ ಡಾ|| ಆ್ಯನಿಬೆಸೆಂಟರ
ಕೃಪಾಶ್ರಯದಲಿ ಮುಂಬಯಿ–ಮದರಾಸುಗಳಲಿ
ಜನಸೇವೆಯುಂಗೈದತ್ತು ಕಾರುಣ್ಯಭಾವದಿಂ.
ಜಗದೊಳಲ್ಲೆಡೆಗಳಲಿ ಸತ್ಕಾರ್ಯ ಅಡೆತಡೆಯ
ಅಡ್ಡಗಾಲಿಗೊಳಪಡುತಲಿರೆ ಕೈಪರೆಗುಟ್ಟಿ
ನಗುವರ್ ಒಡಲುರಿಯ ಮತಿಮಾಂದ್ಯರ್ ! ಮದಾಮ್–ಳಾ
ಥಿಯಾಸೋಫಿಕಲ್ ಸೊಸೈಟಿಯ ಚರಿತೆಯುಮಿಂತೆ.
ಕಣ್ಣಿರ್ದು ಕುರುಡಾದ, ಮತಿಯಿರ್ದು ಮೂಢಾದ
ಜನರಾಶಿ ಸಂಸ್ಥೆಯ ಸುಖಾಶ್ರಯ ಬಯಸಿ ನೆಚ್ಚಿ
ಬಾಳಿತೇಂ ? ಓ ! ಅದರ ಕೈಕಾಲ್ ಮುರಿದು, ಕಣ್
ಕಿತ್ತು, ಮುಖಮಂಡಲಕೆ ಮಸಿಯೊರೆದು ಧ್ಯೇಯಮಂ
ಹೊಟ್ಟು ತೂರಿದೊಲ್ ಗಾಳಿಯಲಿ ತೂರಿದರ್ ! ಲೋಕ
ಸಂಸ್ಥೆಯು ಮೈಮುದುಡುವೊಲ್, ಮೇಣ್ ಸಂಸ್ಥೆಯೊಡತಿ
ಮದಾಮ–ಳ ಆತ್ಮ ಸಗ್ಗದಲಿ ನರಳುವೊಲ್, ಸ್ಥಿತಿ
ಗತಿ ಹಣ್ಣೆಲೆಯೊಲ್ ಹಣ್ಣಾಯ್ತು. ಶತಮಾನವೊಂದು
ಉರುಳಿ ಸಗ್ಗದ ಪಥವಿಡಿದೊಡಂ ಮದಾಮ್–ಳಾ
ದಿವ್ಯ ನಾಮಧೇಯಕೆ ಚ್ಯುತಿಯಿಲ್ಲ. ಹೇತಾಯೆ !
ನೀನೆಲ್ಲೇ ಇರು. ನಿನಗೆನ್ನ ನಮನಂ !

— o —

ಕಾಶ್ಮೀರದ ಶಾಲು

ಕಿಂ ವಾಸಸಾ ತತ್ರ ವಿಚಾರಣೀಯಂ
ವಾಸಃ ಪ್ರಧಾನಂ ಖಲು ಯೋಗ್ಯತಾಯಾಃ ।

ಕಾಶ್ಮೀರ ! ಭಾರತದ ಭೂಸ್ವರ್ಗ ಕಾಶ್ಮೀರ !
ವರ ಭಾರತವರ್ಷದ ಮಣಿ ಮುಕುಟ ಕಾಶ್ಮೀರ !
ಉನ್ನತೋನ್ನತ ಗಿರಿಗಳ ಸುಂದರ ಕಾಶ್ಮೀರ !
ರಜತ ಮಂಜುಮಾಲಾ ಮಾಲಿನೀ ಕಾಶ್ಮೀರ !
ತುಷಾರ ಮಯೀ ಪುಷ್ಪವೇಶಿನೀ ಕಾಶ್ಮೀರ !
ಸಕಲ ಜನ ದಾಯಿನೀ, ಮಮ ಪ್ರಾಣ ಮೋದಿನೀ,
ಜೀವನ ತರಂಗಿಣೀ, ಆನಂದ ದಾಯಕೀ,
ನಿತ್ಯ ಹರ್ಷೋಲ್ಲಾಸಮಯೀ ಎನೆ ಮೈಯೊಳ್
ವಿದ್ಯುತ್ ಝುರಿ ಪ್ರವಹಿಸುವ ಸ್ವರ್ಗ ಕಾಶ್ಮೀರ!
ದಿವ್ಯ ನಾಮಾಂಕಿತ ಸುರಬಂಧುರ ಕಾಶ್ಮೀರ !
ತರತರದ ದ್ರುಮಗಳ್, ಗಿಡ ಮರ ಬಳ್ಳಿಗಳ್ ಬೆಳೆದ
ಬಿತ್ತರದ ವನರಾಜಿಯಲಿ ಬೆಳ್ದಳಿರ್, ಪಚ್ಚ
ದಳಿರ್, ಕೆಂದಳಿರ್, ಹೊಂದಳಿರ್ ನಳನಳಿಸುತಿರೆ
ಮಿಸುನಿಯಂ ಹಾಲಿನಲಿ ತೇಯ್ದು ಲೇಪಿಸಿದವೊಲ್
ವನವಾರ್ಧಿಯ ಸುರಸುಂದರ ದೃಶ್ಯಂ, ಹೃದ್ಯಂ.
ನಿಚ್ಚ ಸಂಚರಣಲೋಲಶೀಲ ಮಧುರ ಪವನ
ಒಯ್ಯೊಯ್ಯನೆ ತೀಡಿ ಬರೆ ನುಗ್ಗಿ ಸಪ್ರಾಣತೆಯಿಂ
ಉಸಿರೆಳೆದು ಬಿಡುವೊಲ್ ತೆರೆಗಳೆಳ್ದು ತೆರೆಬಿಳ್ದು
ಎಲೆಎಲೆಗಳಾಡಿ ಮರ್ಮರ ಶೃತಿಯನೂಡಿಸಿ,
ಬೀಸಿವೀಸಿ, ಸುಯ್ಯನೆ ಸುಯ್ದು ಸುಯ್ದನಿ ಸೂಸಿ

→

ಚಿತ್ತರದ ಶಾಲಿವನವುಂ ನಲಿಸಿ ತೆನೆತೆನೆಗೆ
ಉಜ್ಜಿಯುಜ್ಜಿ ಕಾಳುದುರಿಸಿ ತೂರಿ ಚೆಲ್ಲಾಡಿ
ಕಾಡಾಡಿ ಚರಿಸುವುದು ಬಾನಿನಗಲ ತಾನ್ನೈಸಿ.

ಕಾಶ್ಮೀರದ ಸೌಂದರ್ಯ ಶಿಖರವನೇರ್ದ ಮನು
ಕುಲಕೋಟಿ ಕರ ಕುಶಲ ಕಲೆಯಲಿ ಮುಳುಗೆದ್ದವೊಲ್
ಸುಜ್ಞಾನಸ್ತರದಲಿ ಚೆಲ್ವಾಂತ ಮನಃಚಿತ್ರ
ಕಲ್ಪವುಂ ಕಡೆದು ಬಹಿರ್ಸೌಂದರ್ಯ ನಿಗಮಕೆ
ಆಂತರಂಗಿಕ ಪರಮ ಭಾವನೆವೆರಸುವೊಲ್
ಕಲಾ ಸಂಪತ್ತಿಯುಂ ನೆರೆ ಕೈಗೂಡಿಸಿದತ್ತು.
ಶ್ರಮದಿಂ ಶ್ರದ್ಧೆಯಿಂ, ಸಡ್ಡೆಯಿಂ ಆಸ್ತೆಯಿಂ
ಲೋಕ ಮೆಚ್ಚುವ ಪಾಂಗಿನಿಂ ಅನುಪಮ ಕುಶಾಗ್ರ
ಮತಿಯಿಂ ಕಲಾಭಿಜ್ಞಾನದಿಂ ಕುಶಲ ಕಾರ್ಯದಿಂ
ಕಲಾರಾಜ್ಞಿಯರೆನಿಸಿಯುಂ ಗೃಹ ಜ್ಯೋತಿಯುಂ
ಬೆಳಂಗುವ ದೀಪದಾನಿಗಳೆ ತಾವಾಗಿಯುಂ
ಎಲ್ಲಮಿರ್ದೇನಿಲ್ಲದ ನಿರ್ಲಕ್ಷ್ಯದುಂಬಳಿ
ಮನೆಮನೆಯ ಪರಮೋಚ್ಚ ಗೃಹಿಣೀ ಸಂಪದಕೆ!
ಕರಕುಶಲ ಕಲೆಯೊಳ್ ಪಳಂಗಿ ದಿವ್ಯ ಕರಕಲಾ
ಶಂಕರಿಯರ್ ನೆರೆ ಬಂಧಾನುಬಂಧನದೊಳಿರೆ
ಬದುಕಿನಂತರಾಳದಲಿ ನರಳಿ ಬಳಲಿ ನಲುಗಿ
ಈಸಾಡಿ ದೂರಗಮ್ಯದತ್ತ ನಡೆವೆಣ ಮಾತ್ರಂ!
ಆವ ದೈವ ಕೃಪೆಯೊ ಮತ್ತಾವ ಜನುಮ ಫಲಮೊ
ಮೈದುಂಬಿ ಮನದುಂಬಿ ಬಾಳ್ದರೆ ಪರಮ ಪುಣ್ಯ
ಜೀವಿಗಳ್ ಎಂಬುದೊರ್ ಸಮಾಧಾನ ಅನನ್ಯ

→

ಕಲೋಪಾಸನೆಗೆ; ಸಂಜೀವನ ಪರಾಕಾಷ್ಠೆಗೆ !
ಕೈಬಿಡುವಿನಲ್ಪವೇಳೆಯಲಿ ಕರ ಕುಶಲತೆಯೊಳ್
ಮನವಿಟ್ಟು ನವುರಾದ ಉಣ್ಣೆರನ್ನಗಂಬಳಿ
ಮೇಣ್ ಶಾಲುಗಳ ನೇಯ್ದು ಕಸೂತಿಯುಂ ಅಂದ
ಚೆಂದದಿಂ ತುಂಬಿ ಲೋಕೋತ್ತರವೆನಿಪ ನಿತ್ಯ
ಸೌಂದರ್ಯದಾಗರವೈಸಿದ ಕಲೆಯುಂ ನೆರೆ
ಬೆಳೆಸಿದ ಪರಿಪುಣ್ಯ ಕನಕರಾಗ ರಂಜಿತ
ಸುಂದರಾಂಗಿಯರ್ ಕಾಶ್ಮೀರೀ ಕಣ್ಮಣಿಗಳ್ !

ಕಾಶ್ಮೀರಿ ದಿವ್ಯ ಕುಶಲ ಕಲೆಯುಂ ಪ್ರಸಿದ್ಧಿ
ಮಾತ್ರವಲ್ತು, ಬಹೂಪಯುಕ್ತವೆನಲ್ ಸತ್ಯಂ.
ಮನೆಮನೆಯ ಪ್ರಾಣ ಸಂಜೀವಿನಿಯೈಸಿ ದುಡಿಯುವ
ಸತೀಮಣಿಯರ ಗೋಳರಿತು ನಿಃಸ್ವಾರ್ಥ ಪ್ರೇಮದಿಂ
ದಯಾಭಾವದಿಂ ಸಂವರ್ತಿಪ ಮಹನೀಯರ್
ನೆನೆವರೇಂ ಸುದತಿಯರ ಭಂಗ ? ಯಾವತ್ಕಾಲಂ
ಸ್ವಾತಂತ್ರ್ಯ ಹೀನ ಪರಿಸ್ಥಿತಿಯೇ ಸುದತಿಯರ್ಗೆ !
ಅಪರಿಮಿತ ಪರಿಶ್ರಮದ ಪ್ರತಿಫಲಂ ಮೊಗೆದು
ಒಡಲ್ದುಂಬುವ ಕಿರಿಮನದೊಡೆಯರ ಕಡು ಸ್ವಾರ್ಥಕೆ
ಒಪ್ಪಂತೆ ಕ್ಷುದ್ರತನದ ಬಾಳು ಬದುಕೆನಲ್ಕೆ
ಸತಿಯರ ನಯನ ಕೋರಕಗಳ್ ನಿಸ್ಸಹಾಯಕ
ಸ್ಥಿತಿಯಲಿ ನೋಳ್ಪುದಲ್ಲದೆ ಬೇರೆ ಗತಿಯಿಲ್ಲ;
ಮತ್ತೆ ಮೈಕೈ ಕಣ್ ಸೋತು ನಿಗುರ್ದೊಡೆ ಸುಂದರ
ಕಾಶ್ಮೀರದ ಮೃತ್ತಿಕಾ ತಲ್ಪದ ಸುಖವೇ ಗತಿ !

— o —

ತುಂಗಾ ನದಿ

ಸಹ್ಯ ಪರ್ವತರಾಜ ಪದತಲ ಪರಿಪೋಷಿತ
ಸುನೀಲ ಸಲಿಲವಾರಿ ರಾಶಿಯು ಜಲ ತರಂಗೆ !
ನಿಚ್ಚ ಜುಳುಜುಳು ಜುಳು ಮಂಜುಳಗಾನ ಲಹರಿಯೊಗೆವ
ದಿವ್ಯ ಮೊಳಗು ನಿನ್ನಯ ಅಭಿರಾಮ ಭಂಗಿಯಲಿ.
ನಿನ್ನ ತನಿಯುಂಡ ವನಧಿ ಮುಂಬೆಳೆದು ಪಚ್ಚನೆ
ಪಸುರಿನುಡೆಯುಟ್ಟ ಘನನಿಬಿಡ ವನಮಾಲಿನಿಯೆ !
ತವ ಸ್ವಚ್ಛ ಸ್ಫಟಿಕಜಲಧಿಯು ನಿತ್ಯ ಯಾತ್ರೆಯಲಿ
ನೊರೆ ಮುತ್ತಿನ ರಚನಾ ಸ್ಖಾಲನಾ ಆನಂದ
ಮೋದದೈಸಿರಿಯಲಿ ಪೊದಳ್ದ ಹನಿ ರಾಶಿಯುಂ
ತಟನಿಗೊತ್ತಿಯೊತ್ತಿ ರವಿಸಿರೆ ಮಣಿಮಣಿಯಾಗಿ.
ನೊರೆ ಮುತ್ತುಗಳ್ ಮೂಡಿ ಮೂಡಿ ಮಾಯವಾಗುವ
ಮಂತ್ರದಾಟವದು ಮನಮೋಹಕಂ. ನೋಳ್ಪ ಕಣ್
ಆಕರ್ಷಿಪ ಮಾಳ್ಕೆಯಲಿ ರಾಗರಸ ವಾಹಿನಿ.
ವನಧಿಯೊಳ್ ಪುಲ್ಲುಂಡು ಬಾಯಾರಿ ಬರ್ಪತರ
ತರದ ಹಿರಿಕಿರಿಯ ಭೂಚರಗಳ್ ಪರಮ ಸರಸ
ಸಮುಲ್ಲಾಸದಿಂ ನಲಿದಾಡುತ ಹರಿದಾಡಿ
ನಿನ್ನೊಡಲ ಕೀಚಿ ಗುಳುಗಾಡಿಸುವುವೇ ತಾಯಿ ?
ಪರಿಸರದ ಜನ ಕೋಟಿಯದು ನಿನ್ನೊಡಲ ಪವಿತ್ರ
ಪರಮೋಚ್ಚ ಸ್ವಚ್ಛತೆಗೆ ನೆರೆ ಕಲ್ಮಶವನೂಡಿ
ಗೋಳ್ಗುಡಿಸಿಯುಂ ನೀಂ ಕಿನಿಸುಮುನಿಸುಗೊಳ್ಳದೆ
ತೊಳೆದು ಜಾಲಾಡಿ ಶುದ್ಧೀಕರಿಸುವೆಯಲ್ತೇ ?
ನಿನ್ನ ಜಲಮೂಲದಲಿ ಮಿಂದು ಪರಮ ತೀರ್ಥ
ಪಾನಗೈದು ಪುನೀತಗೊಳ್ವ ಪಂಬಲದಿಂದೆ

→

ರುಂದ್ರಾಟವಿಯುಲಿ ಭಂಗಬನ್ನಗಳಂ ಸಹಿಸಿ
ಸೇರುವರ್ ಪುಣ್ಯ ತೀರ್ಥವ ಭಕ್ತ ಜನಕೋಟಿ.
ನಿನ್ನ ತೀರ್ಥದ ಸ್ನಾನ-ಪಾನಗಳಿಂ ಮತ್ತಮುನ
ಪುನೀತತೆಯ ಸಮುಲ್ಲಾಸ ರಸಮುಂಡು ನಲಿವುದು
ಧ್ಯಾನಮಯ ಯೋಗದಿಂ; ತೋಷಮಯ ಭೋಗದಿಂ.

ಹೇ, ಪರಮ ಪವಿತ್ರ ಜಲನಿಧಿಯೇ ! ತವ ಒಡಲ
ಸಿರಿ ಉಡಿಯುಲಿ ಸಕಲ ಚರಾಚರಂಗಳ ದಿವ್ಯ
ವಾರಾಶಿ ! ತರ ತರದ ಮತ್ಸ್ಯರಾಶಿಯ ವರ್ಣ
ವರ್ಣಾಂತ ವರ್ಣಮಯ ಹೇರಾಶಿ ! ಬಲ್ ಸೂಕ್ಷ್ಮ
ಮತಿಗತಿಯುಲಿ ಸರಕ್ಕನೆ ಜಾರಿ ನುಸುಳಿ ತೀವ್ರ
ಸಂಚಲಿಪ ಮೀಂಗಳಿಂ ಮೈಮನ ನೋಯದೇ ?
ವಿವಿಧ ವರ್ಗೀಯ ಚರಗಳಮಿತೋತ್ಸಾಹದಿಂ
ನಿನ್ನೊಡಲ್ ಕೀಸದೆ ? ನೋವು ನಿಡಿಗಳನೀವ
ಜೀವಿಗಳನೆನಿತು ನಲ್ಮೆಯಿಂ ಸಂಪೋಷಿಸುವೆ ?
ನಿನ್ನೊಳೆನಿತು ಸಸ್ಯಾಳಿ ಜೀವಾಳಿ ರತ್ನಾಳಿ
ಲೋಹಾಳಿ ಶಂಖಾಳಿಗಳ ದಿವ್ಯ ಗಡಣವೋ ?
ದಿನದಿನಂ ಮತ್ಸ್ಯಗಾರ ಹಡಗುಪಡೆಯೊಗ್ಗರಂ
ಮೈಕೊರೆಯದೇ ಗರಗಸದೊಲ್ ? ನಿನ್ನುಪಕಾರ
ಪಡೆದ ಜೀವಕೋಟಿಯೀವುದು ಪ್ರತಿಕಾರಮಲ್ತೆ ?
ಎಂತೆಲ್ಲವಂ ಸಹಿಪೆ ತಾಯೇ ! ನಿನ್ನೊಳೇಂ
ಭೇದಪ್ರಭೇದಗಳ ದುಷ್ಟತರ ಸೋಂಕಿಲ್ಲ.
ತಟಿಯ ಕೊಳಕು ಕೊಚ್ಚೆಗಳಂ ಕಿನಸಿಗೆಯಿಲ್ಲದೆ
ತೊಳೆದು ಸ್ವಚ್ಛಗೊಳಿಪೆ ? ನಿನ್ನ ಮತಿಗತಿಯುಣಂ
ಗಮ್ಯದ ಗುರಿಯುತ್ತಲಲ್ಲದೆ ಬೇರೆ ಪಥವಿಡಿವ

→

ಗೋಚಿಲ್ಲ. ಎಡೆಎಡೆಯೊಳಮಿತ ಜೀವ ರಾಶಿಗೆ
ಜಲ ಸೇಚನೆಗೈದು ಉಪಕರಿಸಿ ಜೀವದಾನಂ
ಗೈವ ಮಹೋನ್ನತ ಪರೋಪಕಾರಿಣಿಯೇ ! ನಿನ್ನ
ದಯೆಯಿಂದೆಮ ಜೀವನ ಸರಾಗಂ, ಪುನೀತಂ.
ನಿನ್ನಯ ಮಹಿಮೆಯನೆನಿತು ನೆನೆದೊಡದು ಅಲ್ಪವೇ
ಗಂಗಾಸ್ನಾನ ತುಂಗಾಪಾನ ಎಂಬ ರೂಢಿಯ
ಗಾದೆವಾತು ಪುರಾತನದಿಂ ಕೇಳಿವಪ್ಪುದು.
ನಿನ್ನ ಜಲಪಾನ ಅಮೃತ ರುಚಿರ. ನಿನ್ನಯ
ಜಲಸ್ನಾನ ಸ್ನಾತ ಜೀವ ಪವಿತ್ರ ಪರಂಧಾಮ !
ನೀನಹುದು ಸರ್ವ ಮಾನಿನಿ ! ಮಂಗಳದಾಯಿನಿ !
ಹೇ, ತುಂಗೆ ! ಜೀವನ ತರಂಗೆ ! ಪರಮ ಕಲ್ಯಾಣಿ !
ಇದೊ ನಿನಗೆ ಕವಯಿತ್ರಿಯ ವಿನಮ್ರತ ನಮನಂ !
ಮತ್ತೆ ಮತ್ತೆ ಪುನಃ ಪುನಃ ನಮನಂ !

— o —

ಗ್ಯಾಲರಿ ಆಫ್ ದಿ ಅಕಾಡೆಮಿ

ರೈನ್ ಮಾನದಿಯ ಪರಮ ಸುಂದರ ತೀರದಲಿ
ಸುರಮ್ಯತೆಯಿಂದೊಪ್ಪಿ ಜೃಂಭಿಸುವ ಫ್ಲಾರೆನ್ಸ್
ನಗರದ ಹೃತ್ ಕರಂಡದೊಳ್ ಮೂಡಿ ನಳನಳಿಪ
ಬೆಳ್ದಾವರೆಯೊಲ್ ಕಂಗೊಳಿಸಿ ಮನರಂಜಿಸುವ
ಗ್ಯಾಲರಿ ಆಫ್ ದಿ ಅಕಾಡೆಮಿ ಸುಂದರ ಕಲೆಗಳ
ಬೀಡು ! ಶತಶತಮಾನಗಳ ಬಿಸಿಲ್ ಮಳೆಗಾಳಿ
ಚಳಿಗಳೊಲವಿನ ಮುದ್ರೆಯೊತ್ತಿಯುಂ ಸೊಗಮಿನಿತು
ಕುಂದಿ ಕೆಡದೆ ನವೋದಿತ ಭವ್ಯ ಘನತೆಯಲಿದೆ,
Gallery of the Academy ನೋಳ್ಪ ಕಣ್
ಭ್ರಮರದ್ಭ್ರಮರಂಗಳಂತೆ ಮತ್ತಾಗುವೊಲ್ !
ಹಾ, ಏನೆಂದೊರೆವೆನೊ ಕಲಾ ಕ್ಷೇತ್ರಂ ಪಡೆದ
ಅತ್ಯಮೂಲ್ಯ ಕೃತಿಗಳ ವಿಶೇಷಮಂ ? ದಿವ್ಯ
ಕೃತಿಗಳ್ ಸುರಸೌಂದರ್ಯವನಾಂತ ಅಪೂರ್ವ
ಅನನ್ಯ ಕಲಾ ಪ್ರೌಢಿಮೆಯಂ ? ಕಲೆ-ಕಲೆ ! ಸರ್ವ
ಪ್ರಕಾರಗಳ ದಿವ್ಯಕಲೆ ! ಪರಮ ಶ್ರೇಷ್ಠ ಕಲೆ !
ಅಃ ! ಮನುಕುಲದಲಿ ಜನಿಸಿ ಕಲೆಯ ಮೌಲ್ಯಮಂ
ಅರಿಯದೊಡೆ ಜನ್ಮವೇ ವ್ಯರ್ಥ ! ಪಶುವಿಗಿಂ ಕಡೆ
ಎನೆ ಅನ್ಯಮಲ್ತು. ಪರಿಭಾವಿಸೈ ಹೇ ಮನುಜ !
ಎಲ್ಲಿ, ಯಾವೆಡೆ ತಿರುಗಿದೊಡಂ ಸೂಜಿಗಲ್ಲಿನ
ಮಾಳ್ಕೆಯಲಿ ಹೃನ್ಮನಗಳಂ ಸೆಳೆವ ಕಲಾಶ್ರೀ !
ದೇವ ಶಿಲ್ಪಿ ನಿರ್ಮಿಸಿದನೊ ಜಕಣಾಚಾರಿಯೋ
ಇಲ್ಲಿಗೈದಿದನೊ ಮೇಣ್ ಸೌಂದರ್ಯ ಲಕ್ಷ್ಮಿಯೋ

ಧರಣಿಗಿಳಿತಂದಳೊ ಎನೆ ಸುರಮ್ಯ ಹೇರಾಶಿ !
ಪ್ರತಿದಿನ ಅಪರಿಮಿತ ಸಂದರ್ಶಕರ ಸಂತೆ
ತುಂಬಿ ತುಳುಕುವೊಲ್ ಜೃಂಭಿಸುವುದು ಕಲಾಕ್ಷೇತ್ರ !
ದರ್ಶಕರ ಮೊಗದೊಳ್ ಅಚ್ಚರಿಯುಕ್ಕುತಿರೆ ತುಟಿ
ಬಿರಿಯದು ನುಡಿಯೆ ಮಂಕು ಮಾಯೆ ಕವಿದು ಬಿಗಿದೊಲ್ !
ಮನಃಕಲ್ಪ ಮಾಯಾ ಮಮ್ಮಲಂ ! ಪ್ರಪ್ರಥಮ
ಆಕರ್ಷಣೆಯದು ನಿತ್ಯ ಸ್ವಚ್ಛ ಶುಭ್ರತಾ ಶೈಲಿ.
ಬುದ್ಧಿಮಾನ್ಯರೊಲವಿನ ಭಾವನಾತ್ಮಕ ಮಧುರ
ಮನೋಜ್ಞಂ ; ಹೃದ್ಯಂ. ಪರಮ ಅಮೃತ ಶಿಲೆಗಳ
ತರತರದ ರಂಗುರಂಗಿನ ಶಿಲ್ಪ ಕಲೆಯ ನೆಲೆ !
ವಿವಿಧ ಭಂಗಿಯ ಅಸಂಖ್ಯ ಶಿಲಾ ಸನ್ಮೂರ್ತಿಗಳ
ವೈಭವೋಪೇತ ಸಂಗ್ರಹಂ ! ಮನಮೋಹನೀಯ
ಲಿಖಿತ ಚಿತ್ರಗಳ್, ಕೌಶೇಯ ವಸ್ತ್ರಂಗಳಲಿ
ನವುರಾಗಿ ನೇಯ್ದ ಸುಂದರ ಚಾರಿತ್ರ್ಯವಾಹಿಯ
ಚಿತ್ರಂಗಳ್ ನಯನಾಕರ್ಷಿತಂ ! ಇದೀಗಳ್
ಚಿತ್ರಿಸಿದವೊಲ್ ಪೊಚ್ಚಪೊಸತನವನು ಅನೇಕ
ಶತಮಾನಗಳಿಂದುಳಿಸಿಕೊಂಡಿಹ ಪ್ರಾಚೀನ
ಮಹೋನ್ನತ ಕಲಾಕೃತಿಗಳ್, ನಯನ ಬಂಧುರ
ಪರಿವೇಶದಲಿ ಪೊದಲ್ದಿರೆ ಕಣ್ ಭ್ರಮರಗಳ್
ಅಲ್ಲಿಂದಿಲ್ಲಿಗೆ ಸುಳಿದು ಹರಿದಾಡಿ ದಣಿದಪವು.
ಕಲಾಮಂದಿರದ ಮುಂಬಾಗಿಲಿಗೆದುರ್ವೆತ್ತು
ಒಳಚಾವಡಿಯಲಿ ನಿಂದಿಹ ಡೇವಿಡ್–ನ ಪ್ರತಿಮೆ
ಬೆಣ್ಣೆಯಲಿ ಕಡೆದುದೊ ಎನಲ್ ಬಣ್ಣಿಸಲಾಗದ
ಸತ್ಯ ಸುಂದರಂ ! ನಿಂತನಿಲುವು, ವೈಯಮಾಟಂ,

→

ಮುಖಕಮಲದ ಸುಶೋಭೆ ನಿಜ ಶೋಡಷ ಕಳೆಯಂ
ಸೂಸುತಿರೆ ನಿಂತು ವೀಕ್ಷಿಸದಲ್ಲಿಂದ ಚಲಿಸವು
ಪಜ್ಜೆಗಳ್.   ಏಂ ಚೋದ್ಯವೊ ಎಂದಚ್ಚರಿ ಕುಂಡ
ಬಿರಿಯುವೊಲ್ ನಯನಾಕರ್ಷಣೀಯ ಮದನ ಮೂರ್ತಿ !

ಆ ಕಲೆಯೊ ಕಲೆಯ ನೆಲೆಯೊ ಕಲೆಯ ಬಲೆಯೊ ಮೇಣ್
ಕಲಾಕೃತಿಗಳ ಸಮ್ಮೋಹನವೊ ಸೆಳೆದಿರೆ ಹೃನ್ಮನಂ
ನೋನೋಡಿದೆ ಬೆಪ್ಪಾಗಿ ಮೈಮರೆತು.   ಬೃಹದ್
ಕೊಠಡಿಯ ನಡುವೆ ವೇದಿಕೆಯ ಮೇಲೆ ಡೇವಿಡ್-ನ
ದಿವ್ಯ ದಿಟ್ಟತನದ ಅಸ್ಖಲಿತ ನಗ್ನ ಮೂರ್ತಿ !
ಸುಶಾಂತ ಪ್ರಶಾಂತ ಶೋಭಾ ಶೈಲಿಯ ಬಂಧುರ
ಸರ್ವಾಂಗ ಸುಂದರ ಧವಳ ಕಾಂತಿಯ ಡೇವಿಡ್ !
ಮನುಕುಲದಿ ಮೈವೆತ್ತು ಕಲೆಯ ಬೆಲೆಯರಿಯದ
ಕಲಾಲಕ್ಷ್ಮಿಯಿಂ ದೂರವಾದ ಬದುಕು ಬಾಳು
ಇದ್ದರೇನು ?   ಇಲ್ಲದಿದ್ದರೇನು ?   ಯೋಚಿಸೈ !
ಕಲೆಯ ಸೋಂಕಿಲ್ಲದೆ ಸಂಸ್ಕೃತಿ ಹೀನವಾದ
ಮನುಕುಲವು ದೇಶ ಪ್ರಗತಿಗೆ ಮಾರೊಡ್ಡು ಕಣ !
ಬಂಧು !   ಸಗ್ಗವೇರುವ ಮುನ್ನ ನೋಡೊಮ್ಮೆ ಆ
Gallery of the Academy !

— o —

ದೂರ ಸಂದೇಶ ಪ್ರಸ್ಥಾನ

ಕಾಲವಾಹಿನಿ ಝುಳಝುಳಿಸಿ ಭೋಂಕನುರುಳುರುಳಿ
ಚಣಚಣಗಳನೊದ್ದು ಗಳಿಗೆಗಳಿಗೆಗಳ ತಳ್ಳಿ
ದಿನ ವಾರ ಮಾಸ ವರ್ಷಾನುವರ್ಷಗಳ ಜಡಿ
ನೂಂಕುತಲಿ, ಆರಾರ ಸುಖದುಃಖವನಿನಿತು
ಲೆಕ್ಕಿಸದೆ ನಿರ್ದಯೆ ನಿರಾತಂಕ ನಿರ್ವಿಘ್ನ
ನಿರ್ಯೋಚನೆಗಳಿಂದೆ ಜಾನದಿಂ ಯೋಗದಿಂ
ಆನಂದ ಮೋದದಿಂ ಧಾವಿಪುದಲ್ತೆ, ಲೋಕವ
ಪಿಂತಿಕ್ಕುವೊಲ್ ಸ್ಪರ್ಧಾ ಭಂಗಿಯುಲಿ ! ಓಜೆಯಂ
ಓಜಿಸುವ ಕಾಲಾಧಿಪನ ಮಾಳ್ಕೆ ಮನವಿರಿಯೆ
ಕಣ್ತೆರೆದ ಹುಲುಮನಂ ಜಾಗ್ರತಗತಿಗೆತ್ತುದು
ಲೋಕ ಪ್ರಜ್ಞೆಯುಂ ಇನಿದಿನಿದಾಗಿ ಬಲಿಯುತಿರೆ.
ಜಾಗೃತಮತಿಗತಿ ಕಾಲನೊಡನೆ ಸರಿಗೂಡುತೆ
ಬಲಿವುದೆ ಚಿರಸತ್ಯಂ ಸುಜೀವನ ಯೋಜನೆಗೆ
ಎಂಬುದನರಿತುನುರಿತು ಊರ್ಧ್ವಮುಖಿಯಾದತ್ತು !

ಮುನ್ನೆ, ಜಗದೊಳ್ ದೇವಗಣಂ ಎಡೆಯಿಂದೆಡೆಗೆ
ಸಂದೇಶಮಂ ಮುಟ್ಟಿಸುವೊಡೆ ಯಕ್ಷ–ಗಂಧರ್ವರ್
ಮೇಣ್ ದೂತಗಣಮಂ ನಿಯೋಜಿಸುತಿರಲವರ್
ದೂರದೂರ ರಾಜ್ಯಗಳ ಕಾಲ್ಪಥಂವಿಡಿದು
ಗಿರಿ ವನ ಹೊಳೆ ಗುಡ್ಡಗಾಡುಗಳ ಅದ್ಭುತ
ನಿಮ್ನೋನ್ನತ ಪ್ರದೇಶಗಳಂ ಹರಿಹಾಯುತ್ತೆ
ಪತ್ರ ಸಂದೇಶಮಂ ಮುಟ್ಟಿಸಿ ಮಾರೋಲೆಯಂ
ತರುತಿರ್ದರ್ ಪ್ರಯಾಸದಿಂ ಪರಿಶ್ರಮದಿಂ.

→

ಪುರಾತನ ಕಾಲದೊಳ್ ತ್ರಿಲೋಕ ಸಂಚಾರ
ವ್ರತವಿಡಿದ ಶ್ರೀನಾರದ ಮಹರ್ಷಿಗಳ್ ಮಿಗೆ
ದೈವ ಧ್ಯಾನದಾಮೋದದಿಂ ವ್ಯೆಮರೆತು ಚಣ
ಚಣಂ ನಾರಾಯಣನೆನುತೆ ಗಾಳಿಯೊಲ್ ಸಾಗಿ
ಗೌರವದಿಂ ಸಂದೇಶ ವಿತರಣೆ ಗೈಯುತಿರ್ದರ್
ಎಂಬೆಲ್ಲ ವಿಚಾರಗಳಂ ಪೌರಾಣಿಕ ಧರ್ಮ
ಗ್ರಂಥಾವಲೋಕನದಿಂ ತಿಳಿದಿರ್ಪುದೈಸಲೇ ?

ತರುವಾಯಿ, ವಿವಿಧ ಸಂದೇಶವಾಹಿಗಳ್ ನೆರೆ
ಮೊಳೆತುವು ಜನ ಮನೋಗತಿಗೊಪ್ಪುವ ಪಾಂಗಿನಿಂ.
ದಿನದಿನಂ ಕಾಲಮಾನಂ ಪಣ್ತು ಮನದುಂಬೆ
ಸತ್ ಚಿಂತನದಿ ಜಾನರಸನೆಯಂ ಬಲಿಯುತ್ತೆ
ಮುಂಬರಿಯುತಿರಲ್ ಸಂದೇಶವಾಹಿಗಳ್ ಬಗೆ-
ವಗೆಯಲಿ ಬಲಿತು ರೂಪುಗೊಳುತಿರ್ದುದು ಲೋಕದ
ಕಣ್ತೆರೆಸುವಂದದಲಿ.

ಪ್ರಾಚೀನ ಕಾಲದಲಿ
ವಿದರ್ಭ ನಗರಿಯ ಭೀಮರಾಜ ಸುತೆ ಶೋಡಷಿ
ದಮಯಂತಿ ಎಳೆಯ ಸುಳಿ ಬಾಳೆಯೊಲ್ ಬೆಳೆದಿರೆ
ವರಸಖಿಯರ ಮಧ್ಯೆ ನಲಿನಲಿಯುತ್ತೆ. ಏಗಳ್
ಉದ್ಯಾನದ ಸುಮಕೋಟೆಗಳಲಿ, ಸರಸ್ತೀರದಲಿ,
ವನದೇಶದಲಿ, ನದೀತೀರದಲಿ ಆನಂದ
ಭಾಗ್ಯದಿಂ ಹಾಡಿಪಾಡಿ ನಲಿದಾಡಿ ಕಳೆಯುತಿರೆ
ಕಾಲಮಾನಂ ಚೆಂಗಟ್ಟು ಬಿಗಿದೊಲ್ ಚೆಲುವಾಯ್ತು;
ರಮ್ಯವಾಯ್ತು; ಕನಕಮುಖಿಯರ ಸಂಗರದಲ್ಲಿ.

ಒರ್ವೆಳ್, ಶುಭಗಳಿಗೆಯಲಿ ಅರಮನೆಯಿಂದೈದ ಸಖಿ
ಪಿತೃವರ ದಿವ್ಯ ಸಂದೇಶವನೊರೆದಳಿಂತು,
"ನೆರೆಯ ನೈಷಧೀಯ ಯುವರಾಜ ಕುಮಾರನುಂ
ತಕ್ಕ ವರ ದಮಯಂತಿಗೆ, ನಮ್ಮ ಮನವೊಪ್ಪುವ
ಮಾಳ್ಕೆಯಲಿ ಇರ್ಪನಾ ನಳ ಚಕ್ರವರ್ತಿ ! ನೀಂ
ತಿಳಿಪುದವಳಿಗೆ, ಎಂದರೌ ಚಿನ್ನರಸಿ !" ಎನಲಾ
ಪ್ರಿಯಗೆಳತಿ ತೋಷಾತಿರೇಕದಲಿ. ಮಿಣ್ಣನೆ
ನಸುವೊಳ್ತು ಯೋಚಿಸಿದಳ್ ತನ್ನೊಳ್ ದಮಯಂತಿ,
ಭವಿಷ್ಯದ ವಿಚಾರ ವಿಮರ್ಶೆಯಲಿ ಮನವಿಟ್ಟು.
ಪಿತೃವರ್ ಒಪ್ಪುತೆನಗೆ ಶುಭಾಶಯಂ ಕಳಿಪೆ
ಸಾಲ್ಗುಮೇ ? ಬಾಳಿನಾ ಭಾಗ್ಯಮಂ ನಿರ್ಧರಿಪ
ದೃಢಾಭಿಪ್ರಾಯಕೆ ಸಲುವೊಂದು ಸಮಾಧಾನ
ತರ್ಪ ವಿವರವೇಳ್ಕುಮೆನುತೆ ಭಾವಿಸಿ ಸರಿದಳ್
ಸರಸ್ತೀರಕೆ. ಆಗಳಲ್ಲಿ ಒಯ್ಯನೆ ತೇಲಿ
ನಲಿದಾಡಿ ಜಲಕ್ರೀಡೆಯೊಳ್ ಮೈಮರೆತಿರ್ದಾ
ಧವಳ ಕಾಂತಿಯ ಹಂಸೆಯುಂ ಕಂಡು ತೋಷದಿಂ
ಬಳಿ ಸಾರ್ದು ನಲ್ಮೆಯಿಂ ಕೇಳಿಸಿದಳಿಂತು "ಎಲೆ
ಹಂಸರಾಜ ! ನಿನ್ನೊಂದು ಮಾತಂ ಕೇಳುವೆಂ.
ಬೇಸರಿಸದೆ ಕೋಪಿಸದೆ ಉತ್ತರಿಸುವೆಯೇನ್ನೈ ?"
ಆಗಳಾ ಹಂಸ ಪ್ರಸನ್ನತೆಯಲಿ ನುಡಿದುದು
"ರಾಜಕುಮಾರಿ ! ಏಕಿಂತು ಆಸಂಕೆ ನಿನ್ನೊಳ್
ಆನರಿಯೆ. ನಿನ್ನ ಮನದೊಳೇನಿರ್ದೊಡಂ ಸಂಕೆ
ಇನಿತಿಲ್ಲದೆಯೆ ಪೇಳ್ ತಾಯೆ ! ಆನದ ಪೂರ್ಣ
ಮನದಿಂ ಭರಿಸುವೆಂ !" ಎನಲ್ ಪ್ರೀತ ದಮಯಂತಿ

→

ನಸುನಾಣ್ಚಿ ನುಡಿದಳ್ "ಎಲೆ ಬಂಧುವೆ ! ನಮ್ಮ ನೆರೆ
ರಾಜ್ಯದ ನಳನೃಪನರಿತೆಯಾದೊಡೆ ಪೇಳ್,
ಅವನ ಸತ್ಯ ಸಮಂಜಸ ವಿಚಾರಮಂ ಎನಗೆ"
ಹಂಸರಾಜ ಕೊರಳೆತ್ತಿ ಮಿಂಚಿನ ಕಣ್ಗಳಿಂ
ನೋಡಿ ಕಲಕಂಠದಿಂ ನುಡಿದನಿಂತು "ರಾಣಿಯೆ !
ಕೇಳ್, ನಳನೃಪನುಂ ಸತ್ಯಸಂಧಂ ಮೇಣ್
ಧೀಮಂತನೆಂದು ಬಲ್ ಪ್ರಸಿದ್ಧಿ ಪಡೆದಿಹನ್ !"
ಆ ದಿವ್ಯ ವರ್ತಮಾನದಿಂ ಸಂತುಷ್ಟಳೆನೆ
ದಮಯಂತಿ ಪ್ರೀತ್ಯಾದರದಿಂ ತನುಮನ ತುಂಬಿ
ಹೃದಯಾಂತರಿತ ಪ್ರೇಮಾಮೃತಮಂ ಹಂಸ
ರಾಜನ ಮುಖೇನ ನಲ್ ಮಾತುಗಳ ಮುತ್ತಿನೊಲ್
ನಳಚಕ್ರವರ್ತಿಗೆಕಳುಪಿದಳೆಂಬೊಂದು ಕವಿ
ಮನೋಭವ ಕಥಾನಕಮಿಹುದು ಕಾವ್ಯರಸನಾ
ಮಾಹಿಯಲಿ. ಕಾಲಾನುಕಾಲದಿಂ ಓದಿತಿಳಿದು
ಕರ್ಣಾಕರ್ಣಿಯಾಗಿಹ ಚರಿತೆಯಂ ಕೇಳುತಿರೆ
ಮನಃಮತಿ ರೋಚಕಂ ! ಮೇಣ್ ರೋಮ ಹರ್ಷಕಂ !

ಅಂದು, ಬಲ್ಲಿದರ್ ಆತ್ಮ ಸಂದೇಶವಾಹಿಯಂ
ಕಳುಪಲ್ ಬಗೆವಗೆಯ ವಿಧಿ ವಿಧಾನಗಳಂ ಮನ–
ಮೊಪ್ಪಂತೆ ನಡೆದತ್ತು ಜೀವನಂ ಬೆಳಗುವಾ
ಮಾಳ್ಕೆಯಲಿ.

ಮಹಾಕವಿ ಕಾಳಿದಾಸನ 'ಮೇಘ
ಸಂದೇಶ' ಕಾವ್ಯನಿಧಿ ಜಗತ್ ಸುಪ್ರಸಿದ್ಧಂ.
ಯಕ್ಷ ಪುರುಷ ತಾಂ ಉಗ್ರಶಾಪಗ್ರಸ್ತನಿರಲ್ಕೆ

→

ದೂರ ದೇಶದ ಮಾವನರಮನೆಯೊಳಿರ್ದ ತನ್ನ
ಪ್ರಿಯ ಪ್ರೇಯಸಿಗೆ ಆತ್ಮ ಸಂದೇಶಂ ಕಳಿಪೆ
ಗಿರಿ ಶಿಖರಮಂ ಏರ್ದು ಬೆಳ್ಮುಗಿಲ ಸೇವೆಯಂ
ಬೇಡಿ ಸಂದೇಶಮಂ ಕಳಿಪಿದಂ ಎಂದೆಂಬ
ಕಥಾನಕಮಂ ಕೇಳ್ದುದು ಭಾರತ ಜನಪದಂ.
ಇಂತಪ್ಪ ಮಹತ್ಕೃತಿಗಳಿಂ ಧೀಮತಿ ಮಸೆದುದು
ಲೋಕ ಪ್ರಜ್ಞೆಯಂ ದಿನದಿನ ದಳದಳ ಅರಳಿಸುವ
ಮಾಳ್ಕೆಯಲಿ ! ದೂರದೂರದ ಬಂಧು ವರ್ಗಮಂ
ಸಂಪರ್ಕಿಸುವ ಯೋಜನೆಯಂ ರೂಪಿಸುವೊಂದು
ಚಿಂತನಾವೇಶಂ ಸಂವೇದ ವಾಹಿಗಳಿಂಗೆ
ಬೆನ್ನಟ್ಟಿದತ್ತು ಕಾಲನೊಡಂ ಸ್ಪರ್ಧಿಸುವೊಲ್.
ಕ್ರಮಾನುಕ್ರಮದಲಿ ಬಗೆವಗೆಯ ಸಂದೇಶ
ವಾಹಿ ಮೂಡಿದುವು ಜನಮನೋಗತಿಗನುಸಾರಂ.
ಬುದ್ಧಿ ಮಾನ್ಯರ್ ಮನಂ ಮಥಿಸಿಮಥಿಸಿ ತಂತಮ್ಮ
ಸಂದೇಶ ವಾಹಿಗೆನೆ ಕಪೋತಮಂ ಲಾಲಿಸಿ
ಪಾಲಿಸಿ ಕಲಿಸಿ ದೂರ ಪ್ರದೇಶಕೆ ಹಾರಿಸಿ
ಕೊಡುಕೊಳುತಲಿರ್ದ ಪರಿಯುಂ ಚರಿತ್ರಾರ್ಹಂ.
ದೂರದೂರ ಸಂದೇಶಗಳಂ ಒಯ್ಯುವೊಡೆ
ಸಂಚರಣೆಗೆ ಕಾಡುಮೇಡುಗಳ ವನ ಪಥವೆ ಗತಿ.
ರಾಷ್ಟ್ರದಾದ್ಯಂತ ಹಾದಿಬೀದಿಗಳ್ ಮೂಡದ
ಕಾಲಮಾನ. ಅಕ್ಕರದಕ್ಕರೆಯು ಪುಟ್ಟಿರದ
ಜನ ರಾಶಿ. ಮುಂಬರಿವ ಪಜ್ಜೆಗಳ ಪಿಂದೆಳೆಯೆ
ಎಲ್ಲಂ ಸವಾಲಾದತ್ತು ಪರಿಪರಿಯೊಳ್.
ಪರಸ್ಪರ ಓಲೆಗಳ ವಿನಿಮಯಂ ಜನಗತಿಯ

→

ಸ್ನೇಹ ಸಂಬಂಧ ಸಂಪರ್ಕ ಸಂಮೃದ್ಧಿಯೆನೆ
ಎಳೆ ಸೇರಿಸಿ ಹೊಸೆದೊಲ್ ರಾಜ್ಯರಾಜ್ಯದನುಬಂಧ
ವಿವಿಧ ರೂಪದಲಿ ಬೆಳೆದು ಬರುತಿರೆಯಿರೆ ಬಾಳು
ಬದುಕಿನಲಿ ಜಡಿದಾರ್ದು ಹೋರಿ ಗೆಲ್ಲದೆಮ್ಮಗೆ
ಬೇರಿಲ್ಲ ಗತಿಯೆಂಬರಿಕೆ ಮನಃಚಿತ್ರದಲಿ
ಸಾಗನೊಲ್ ಹೆಡೆಯೆತ್ತಿ ನಿಲ್ಲೆ, ಜಾಗೃತ ವೃತ್ತಿ
ಪ್ರವೃತ್ತಿ ಕಿರಣಗಳ್ ವಿರಾಜಮಾನಮಾದುವು
ಜನ ಮನೋಗತಿಯಲಿ ಅದುಭುತ ಶಕ್ತಿ ಶ್ರೀಯೊಲ್
ನವನವೀನ ಪ್ರತಿಕೃತಿ ಮಿಂಚಿದತ್ತು ಚಿತ್ತ
ಭಿತ್ತಿಯಲಿ.

ಭಾರತ ಇತಿಹಾಸದೊಳ್ ಪ್ರಥಮ
ಸಂದೇಶವಾಹಿಯ ಜನುಮಯೋಗದಾ ಪುಣ್ಯ
ಕಾಲ ಹದಿಮೂರನೆ ಶತಮಾನದ ಪೂರ್ವಾರ್ಧಂ
ತಾನೈಸಲೆ ? ರಾಷ್ಟ್ರದ ಜನಮನಮತಿಯಂ ಮುಟ್ಟಿ
ತಟ್ಟಿ ಬೋಳೈಸಿ ಮುಗ್ಧದುಗ್ಧ ಬದುಕಿಗೆ ಮಿಸುನಿ
ಎಳೆಗಳಂ ಕೋದು ಕಣ್ಣೆವೆಗಳಂ ತೆರೆಸುವೊಲ್
ನಾಗರಿಕ ಸಾಮ್ರಾಜ್ಯದ ನೆರಳ್ ಮೈ ಚಾಚಿದತ್ತು !
ಅಂದು, ಪ್ರಸಿದ್ಧ ಮೊಗಲ್ ಚಕ್ರವರ್ತಿ ಮಹಮದ್
ಬಿನ್ ತೊಗಲಖ್‌–ನ ಚರಿತ್ರಾರ್ಹ ರಾಜ್ಯಭಾರಂ
ವಿಜೃಂಭಿಸಿದುದು ಧೀರೋದ್ಧಾತ ವೇಶದಲಿ.
ರಾಜ ಕಾರ್ಯ ಚಾತುರ್ಯಂ ಭರದಿ ಸಾಗಲ್ಕೆ
ಮನಮನಗಳಂ ಬೆಸೆದು ಅನುಬಂಧವೊದಗಿಬರೆ
ಅಲ್ಲಲ್ಲಿ ದೌವಾರಿಕರ ಕಾಲ್ದಳ ಸಂದೇಶ
ಪತ್ರಾವಳಿಯಂ ಪೊತ್ತು ಕೈಯೊಳ್ ಜಿಣಿಜಿಣಿಪ

ಗೆಜ್ಜೆ ಗೋಲ್ವಿಡಿದು ಜಿಣಿಜಿಣಿರೆನೆ ನಡೆವುದಂದು
ರೂಢಿಗೆತ್ತುದು ಜನಮನವನಾಕರ್ಷಿಪ ಮೇಣ್
ಪ್ರಚುರಪಡಿಪ ಮಾಳ್ಕೆಯಲಿ. ಜಿಣಿಜಿಣಿ ಶಬುದಮಂ
ಕೇಳ್ದು "ಓ, ಬಂದ ಬಂದ!" ಎನುತೆ ಪುಳಕಿತಗೊಳೆ
ಸಾಧನಂ ಗೆಜ್ಜೆಗೋಲಿನ ಸಂದೇಶವಾಹಕ!
ನಗರದೇಶದಲಿ ಹಳ್ಳಿಹಳ್ಳಿಗಳಲಿ ದೂರ
ಪ್ರದೇಶಗಳಲಿ ಪತ್ರೋಲೆಗಳ ಸಂಚರಣ
ಮಂದಗತಿಯಲಿ ನಡೆದೊಡಂ ಹರ್ಷಸೂಚಕಂ.
ಅದಾಗಳ್, ಕಣ್ತೆರೆದ ಪಸುಳೆ ಸಂದೇಶವಾಹಿ
ಉಂಬ ಭಂಗ ಬನ್ನಂ ಸಾಮಾನ್ಯವಲ್ಲಮೆನೆ
ಹಳ್ಳಿ ಹಳ್ಳಕೊಳ್ಳ ಅರಣ್ಯಗಳ ತಾಣದಲಿ
ಕುಪಥವಿಡಿದು ನಡೆವವನೊಂಟಿಗನಿರೆ ನಿರ್ಜನ
ನಿರ್ವಸತಿಯ ತಾಣಂ ಭಯಭೀತಿ ಭರಿತ ನಿಡು
ಗೋಂಟೆ. ಆವಗಳಿಗೆಯಲಿ ಪುಲಿ ಕರಡಿ ಬಪ್ಪುದೊ
ಎಂಬುದೊಂದಾದೊಡೆ ಮಳೆ ಬಿಸಿಲ್ ಚಳಿಗಾಳಿಯು
ಅವ್ಯಾಹತ ಜಡಿಮೆಯುದೇಂ ಕಡಿಮೆಯುದಲ್ಲಂ.
ಮೇಣ್ ಕಳ್ಳಕಾಕರ ಕಾಕದೃಷ್ಟಿ ಸತತಂ.
ಇಂತೊಂದು ಭಂಗಗಳ ಕೋಟಿಯುಂ ಪೊಕ್ಕಲುರಿ
ಭಯದಿಂದೆ ಮನಃಬುದ್ಧಿಯ ಅಘೂರ್ಣನ ವೇಗ-
ವೆರ್ಚಿಸೆ ವರವೀಳ್ಯವನಿತ್ತವೊಲ್ ಪುರುಷಾಯುತ್ತು.
ಎಲ್ಲಿಯುಂ ನಿಲದೋಟಕ್ಕೆ ಪಕ್ಕಾದುವಾ ಪದ
ಯುಗ್ಮಗಳ್ ಭಯಭೀತಿಯ ಗಾವರ ಜಡಿದೌಂಕೆ!
ಇಂತಿರಲ್, ಕಾಲಕಾಲಾಂತರದೊಳ್ ಪ್ರಗತಿ
ಹೆಜ್ಜೆಗಳ್ ಅತ್ತಿತ್ತ ಚದರಿದೊಲ್ ದಶದಿಶೆಯ

→

ಹಾದಿಗೆತ್ತು ಪರಿಸರದ ಸ್ನೇಹಾನುಬಂಧಂ
ಆರ್ಜಿಸುತಿರೆ ದೇಶ ವಿದೇಶಗಳ ಸಂದೇಶ
ವಾಹಿಯುಂ ಮುಂಪಥಪಿಡಿದತ್ತು ಸುಜ್ಞಾನಮಂ
ಏಕತ್ರ ಹರಿಸಿ. ಮತ್ತಮಾ ದಿಶೆದಿಶೆಯಲ್ಲಿ
ರಾಷ್ಟ್ರೀಯ ಪ್ರಜ್ಞೆ ದಳದಳ ಅರಳಿ ಕಲ್ಯಾಣ
ಪುಷ್ಪಮಾದುದು ರಂಗುರಂಗಿನಿಂ. ಏಗಳುಂ
ವ್ಯವಹಾರ ಕುಶಲತೆ, ನೀತಿನಿಯಮ ಪಾಲನೆ
ಗುರುತರಮಿರೆ ಜ್ಞಾನನಿಧಿ ಮುಂಕೊಂಡು ಬರಲುರೆ
ದೂರವಾಸಿಗಳ ಪತ್ರೋಲೆಗಳ್ ಸಂದೇಶ
ಪ್ರಸ್ಥಾನದ ಮುಖೇನ ಪ್ರಥಮ ಅಂಕದೊಳ್
ಬಂಧು ಬಾಂಧವರ ಹಸ್ತಗತಮಾದ ಅಮೃತ
ಚಣಮಂ ನೆನೆಮನವೇ ! ಆಗಳೇಂ ಪೊಚ್ಚಪೊಸ
ವಿಷಯ ಜನಜನಿತಮಾಗಿ ಪುಳಕಿತಮಪ್ಪಂತೆ
ಕೋಲಾಹಲವೆದ್ದಿತು ಜನವಾರ್ಧಿಯಲಿ. ಬಳಿಕ,
ಸಂದೇಶ ವಾಹಿಯಂ ಗುರುತಿಸಲ್ ಸುಲಭಮಿಸೆ
ಗೆಯ್ದಾ ಜಣಿಗೋಲದು ನಿರಕ್ಷರಿಗಳನೇಳಿಸೆ
ಸರಿಯಪ್ಪ ಮಂತ್ರಮೆನೆ ಅತ್ಯಾಕರ್ಷಣೀಯ
ವಿಷಯಮಾದತ್ತು ಸಾಮಾನ್ಯರ ಮನೋದಧಿಗೆ.
ಚಿಣ್ಣಚಿಣ್ಣ ಮಕ್ಕಳ ಮನಕೆ ಮುದವೀವಂತೆ
ಜಣಿಜಣಿಸಿ ಶಬುದಂ ಮೊಳಗೆ ನಸುದೂರದಲಿ;
ಅಲ್ಲಲ್ಲಿ ಆಡುತ್ತಲಿಹ ಚಿಣ್ಣರ್, ಮೇಣೊಳಗೆ
ಉಣ್ಣುತಿಹ ಚಿಣ್ಣ ಮಕ್ಕಳ್ ಓಡಿ ಬಂದಪರ್
ಸಂದೇಶವಾಹಕನ ಚಣಿಗೋಲ ನೀಕ್ಷಿಸಲ್.
ಸುತ್ತಮುತ್ತ ಮುತ್ತುವರ್ ಕಿಲಿಕಿಲಿ ನಗೆಹರಿಸಿ.
ಆಮೋದ ಪ್ರಮೋದಗಳ್ ನಡೆವುವು ಮಕ್ಕಳ

→

ಚಿನ್ನಾಟವೆರಸಿ, ಮುಗ್ಧಸ್ತ್ರೀಕುಲ ಪೊಸತೊಂದು
ಅಧ್ಯಾಯ ತೆರೆದುದೇನೆಂದೀಕ್ಷಿಸರ್ ಕೊರಳ್
ಆನಿಸುತೆ, ಹಂಸೆಗಳ್ ಅತ್ತಿತ್ತ ಈಕ್ಷಿಪೊಲ್ !
ಅಂತಪ್ಪ ಪರ್ವಕಾಲವದು ಪತ್ರವಾಹಿಗೆ.

ಅನಂತರದೊಳ್, ಹದಿನೈದನೆಯ ಶತಮಾನದ
ಪೂರ್ವಾರ್ಧ ಕಾಲದಲಿ ಭಾರತ ಸಾಮ್ರಾಜ್ಯದ
ಗಾದಿಗೆತ್ತು ಮಹೋನ್ನತ ವೈಭವದಿಂದೆ ನೆರೆ
ವಿಜೃಂಭಿಸಿದ ಧೀರ ಚಕ್ರವರ್ತಿ ಶೇರ್‌ಷಹ
ಆಡಳಿತ ಸೂತ್ರದಲಿ ಸಂದೇಶ ವಾಹಿಯಂ
ಚಾಕಚಕ್ಯತೆಯಿಂ ಬಿಗಿದು ಮುಂಬರಿಸಿದ ಧನ್ಯ
ವ್ಯಕ್ತಿ ! ಕಾಲ್ದಳದ ವಿತರಣೆ ಕೂರ್ಮಗತಿಯಲಿರೆ
ಮನದೆ ಕಸಿವಿಸಿ ಮೂಡಿಸೆ, ಅಶ್ವಾರೋಹಿಯಂ
ನಿಯಮಿಸುವ ಮಹದಿಚ್ಛೆಯುಂ ಮೂಡಲಾಗಳ್ತಿ
ಕಾರ್ಯಾಸಕ್ತನಾದನ್ ಚಕ್ರವರ್ತಿ ಶೇರ್‌ಷಹ.
ಅಶ್ವಾರೋಹಿಗಳ್ ದಿನದಿನ ಪ್ರತಿದಿನ ದೂರ-
ದೂರದೂರುಗಳಿಂಗೆ ಪತ್ರೋಲೆಗಳನೊಯ್ದು
ಮುಟ್ಟಿಪುವ ಸಂಯೋಜನೆ ಮೆರೆದುದು ಜನಪದಂ
ಮೆಚ್ಚುವೊಲ್ ! ತರುವಾಯಿ ಭಾರತ ಸಾಮ್ರಾಜ್ಯಮಂ
ಆಳಿದ ಅನೇಕ ಚಕ್ರವರ್ತಿ ಮಹೋದಯರ
ಕಾಲವೊಗೆದ ಧೀಮಂತಿಕೆಯ ಸೂತ್ರಸಾರಂ
ರಾಷ್ಟ್ರದಾದ್ಯಂತ ನಾಳನಾಳಂ ಬೊಕ್ಕವೊಲ್
ಪಸರಿಸಿತ್ತೊಡನೊಡನೆ ಕಾಲ ಪಕ್ಷಿಗೆ ಸ್ಪರ್ಧೆ
ಕಲಿಪುವ ತೆರದಿ. ಮೊಗಲ್ ಸಾಮ್ರಾಜ್ಯ ಶಾಹಿಯಂ
ಮುಕುಟ ಪ್ರಾಯದಿಂದೊಪ್ಪಿ ವೈಭವೋಪೇತ ಚಕ್ರ-

→

ವರ್ತಿಯೆನೆ ಅಭಿಷಿಕ್ತ ಗಾದಿಯಲಿ ರಾಜಿಸಿದ
ಅಕ್ಬರ್ ಮಹಾಶಯಂ ರಾಷ್ಟ್ರರಥಮಿಣಿವಿಡಿದು
ಪ್ರಗತಿ ಪಥದೊಳ್ ಜ್ಞಾನದಿಂ ದರ್ಪದಿಂ ವರ
ಆಸ್ಥೆಯಿಂ ಮುನ್ನಡೆಸಿದ ಪರಿಯುಂ ಕಾನನದ
ಕೇಸರಿಯ ರಾಜತೇಜಮಂ ಮೀರಿ ಮೆರೆದುದು.

ಆಗಳಾ ಕಾಲಕ್ರಮದೊಳ್ ರಾಷ್ಟ್ರವ್ಯಾಪೀ
ದೂರ ಸಂದೇಶ ವಾಹಿಯುಂ ದಿನದಿನ ಪರಮ
ಸೇವಾವ್ಯೈಖರಿಯಲ್ಲಿ ಕುದುರೆಗಳ ಸಾರೋಟು,
ಒಂಟೆಗಳ ಸವಾರರ್, ಎತ್ತುಗಳ ಬಂಡಿಗಳ್
ಮುಂತಪ್ಪ ಬಗೆಬಗೆಯ ವಾಹಿಗಳ್ ಮಿಂಚಿದುವು,
ಕಲಿತನದಲಿ ಅಭಿನವ ಕಲ್ಕಿಯುಂ ಮಿಾರ್ವವೊಲ್,
ರಾಷ್ಟ್ರೀಯ ಜೀವನಂ ಸುಸುಂದರಗೊಳಿಪಂತೆ !
ಅಪರಿಮಿತ ಆಸೆ ಆಕಾಂಕ್ಷೆಗಳ ಹೆಬ್ಬಳ್ಳಿ
ಹಬ್ಬ ತೊಡಗಿದುದು ಆಪನಿತು ಮಾರ್ಗ್ಗಗಳ ಚಾಚಿ !
ಯುರೋಪಿನ ಬ್ರಿಟಿಷ್ ಚಕ್ರಾಧಿಪತ್ಯದಲಿ
ಜ್ಞಾನವೇತ್ತರ್ ಮುಂದೈದು ಕ್ಷಿಪ್ರಗತಿಯ ಕಾರ್ಯ
ಕಾರೀ ಚೌಕಟ್ಟನಲಿ ಸಂದೇಶ ವಾಹಿಯಂ
ನಲ್ ಅಳವಡಿಸಿ ಬಹೂಪಯೋಗದ ಶ್ರದ್ಧೆಯಿಂ
ಅಂಚೆ ಚೀಟಿಯಂ ಪಡಿಮೂಡಿಸಿದರ್ ಸುಂದರ
ಸಾಮ್ರಾಜ್ಞಿಯ ವರ್ಣಮಯ ಚಿತ್ರವಂ ಮುದ್ರಿಸಿ.
ಅಲ್ಲಿಂದೆ ಅಧಿನಿಯಮ ಕ್ರಮವತ್ ರೂಢಿಯೊಳ್
ನಿಂದು ಶೋಭಿಸಿದತ್ತು ಅಗ್ರಪಂಕ್ತಿಯಲಿ. ಆ
ಪುಣ್ಯದಿನ ಸಾವಿರದೆಂಟನೂರನಲವತ್ತಾರರ
ಮೇ ತಿಂಗಳಿನ ಆರನೇ ತೇದಿ ! ಅಂತೊಂದು

→

ಚೆಲುವಿನೂಟೆಯ್ಸೈಸಿ ಪೊದಳ್ದ ಚಿಣ್ಣ ಚಿಣ್ಣನೆ
ಅಂಚೆ ಚೀಟಿಗಳ ಮೌಲ್ಯ ಎರಡೇ ಪೆನ್ನಿಯೆನೆ
ಜಾನಮಯ ಸಿದ್ಧಾಯತನಂ ಕಂಚುಮಿಂಚಿನ
ಸಪ್ರಾಣಮೆನೆ ಜಗದೊಳ್ ಪ್ರಸಿದ್ಧಿಯಾದುದು
ದೂರ ಸಂದೇಶ ಪ್ರಸ್ಥಾನ.
ದಿನದಿನಂ ಜ್ಞಾನ
ಸುಜ್ಞಾನಗಳ್ ಮಲೆತು ಬಲಿಯುತಿರೆ ಅಲ್ಲಲ್ಲಿ
ಎಲ್ಲೆಲ್ಲಿಯುಂ ಧರಾಮಂಡಲದ ವ್ಯಾಪ್ತಿಯಲಿ
ಬುದ್ಬುದಗಳೊಲ್ ದೂರ ಸಂದೇಶ ಪ್ರಸ್ಥಾನ
ಮೈದೋರ್ದುವು ಸ್ನೇಹಾನುರಾಗದ ಸಂಬಂಧ
ಊರ್ಧ್ವಮುಖಿಯಪ್ಪಿ ಕಾರ್ಯಸಿದ್ಧಿಗೆ ಮಾಪ್ರಾಣ
ತಾನಾದವೊಲ್. ರಾಷ್ಟ್ರರಾಷ್ಟ್ರಂಗಳ ಒಮ್ಮನ
ಒಮ್ಮತಗಳ ಸಹಯೋಗದಿಂ ರೋಷ ದ್ವೇಶ
ವಿದೂರತೆಯಿಂದೆ ಭಾವಾಗ್ನಿ ಅಲೆಗಳ್ ಉಕ್ಕಿ
ಭೋರನೆ ಹರಿವವೊಲ್ ಸುಜ್ಞಾನ ಭಂಢಾರಕ್ಕೆ.

ವಿಶ್ವಪ್ರಪಂಚದೊಳ್ ಪರಮೋಚ್ಚ ಭಾವೈಕ್ಯ
ರಾಷ್ಟ್ರೀಯ ಸಮತೋಲನದೋಜೆಯನೋಜಿಸುವ
ಭವ್ಯ ಸೂತ್ರಸಾರಮಿದೆಂದು ತುಂಡುಗಡಿಯದ
ಪ್ರಸ್ಥಾನ! ರಾಜ್ಯಗಳಳಿಯಲಿ, ರಾಜ್ಯಗಳುದಿಸಲಿ
ದೂರ ಸಂದೇಶ ಪ್ರಸ್ಥಾನಕೆ ಚ್ಯುತಿಯಿಲ್ಲ.
ಸತ್ ಸೇವೆಯನುಭಾವದಲಿ ಅನನ್ಯ ನೇಹದ
ರೀತಿಯಲಿ, ಪ್ರಚ್ಛನ್ನ ಜೀವನದ ಸಮರದಲಿ
ಮುಂಚೂಣಿಯೊಳಿಹ ಅಂಚೆಯು ಭವ್ಯ ಚಾರಿತ್ರ್ಯ

→

ಸ್ವರ್ಣಾಕ್ಷರಗಳಲಿ ಲೇಖಿಸುವೊಲ್ ಸತ್ಯ ಸುಂದರಂ !
ಅನುದಿನಂ ಎಲ್ಲೆಡೆಯು ಜನಕೋಟಿಯು ತನುಮನ
ತೆಕ್ಕನೆ ಪುಳಕಿತಮುಪ್ಪುವೊಲ್ ಸಮಯೋಚಿತ
ವಿಚಾರ ಸಮಸ್ತಮಂ ಅನುಕ್ರಮದಲೀಯುವ
ನಿಚ್ಚ ಕಾಯಕವೇ ಕೈಲಾಸವೆಂಬ ಅದ್ಭುತ
ಧ್ಯೇಯ ಧೋರಣೆಯ ಕಾರ್ಯಕಾರಣೇ ಪ್ರಸ್ಥಾನ !
ಮುಚ್ಚುಮರೆಯ ಕೀಳ್ತರಗತಿಯ ರಂಗುರಂಗಿನ
ಕಿಡಿಗೇಡಿತನಂ ದೂರದೂರ ಗಾವುದ ದೂರ
ತಳ್ಳಿ ಚಣಮಿನಿತು ಹಿಂಚುಮುಂಚಾಗದೆ, ಚಣಂ
ತಳುವದೆ ಅನುಪಮ ಸೇವೆ ಸಲಿಸುವ ಪ್ರಸ್ಥಾನ !
ಸುದ್ದಿಸಾರದ ಬೇವುಬೆಲ್ಲಗಳ್ ಒತ್ತೊತ್ತಿ
ಬಹವು ಭೇದ ಪ್ರಭೇದಗಳ ತಾಡನಮಿನಿತು
ಇಲ್ಲದೊಲ್ ಪತ್ರಾಳಿಯ ವಿರಾಟ್ ರಾಶಿಯುಲಿ.
ದುಷ್ಟ ವೃತ್ತಿಯ ನೆರಳ್ ಮೈಚಾಚದವೊಲ್
ಅತ್ತಿತ್ತಲೆನ್ನದೆಯೆ ಇತ್ತಿತ್ತಲೆನ್ನದೆಯೆ
ಮುಂಬೆಳೆಯುತಿಹ ದಿವ್ಯ ಜೀವನಾಡಿಯ ಮಹಾ
ಕಾರ್ಯಕಾರಣಂಗಳ ತೇಜಿಯಂ ತೇಜಿಸುವ
ಮಾಳ್ಕೆಯಲಿ ಮೈಗೊಂಡ ಚಿರಂಜೀವ ಸತ್ಯದ
ಮಹಾ ಪ್ರಸ್ಥಾನ ಅಂಚೆಯಾ ಕಾರ್ಯಸ್ಥಾನಂ !
ಸುದ್ದಿ ಸೇವೆ ಮಾತ್ರವೆ ? ಅಗಾಧ ದ್ರವ್ಯನಿಧಿ
ಹರಿವುದು ದಿನನಿತ್ಯ ಜಣಿಜಣಿಸುತ ಹೊಳೆಯಾಗಿ,
ವರ್ಷಾಕಾಲದ ಶ್ರಾವಣಧಾರೆಯ ಮಾಳ್ಕೆಯಲಿ !
ಹಾಸುಹೊಕ್ಕೆನಿಪ ಶ್ರದ್ಧಾನಿಷ್ಠೆಗಳ ತಳಹದಿ
ಭದ್ರಮಿರೆ ಮಂಟಪದ ಕಳಸ ಕುಸಿಯಲಕ್ಕುಮೆ ?

→

ಕಾಲೋಚಿತವುಪ್ಪ ನವನಾಗರಿಕ ಶೈಲಿಗೆ
ಕ್ಲೆಸ್ರಯೋಜನೆಯು ತಾನಪ್ಪುದು ನಿಜ ವಾದರಿ.
ರಾಷ್ಟ್ರರಾಷ್ಟ್ರಗಳ ಅನುಬಂಧವುಂ ಬಿಗಿಗೊಳಿಸಿ
ವಿಶ್ವಸ್ಥಭಾವವಂ ಬೆಳೆಸುವೊಲ್ ಜೀವನಕೆ.
ಇಂದಿನೀ ನಾಗರಿಕ ಜೀವನ ಯೋಗದಲಿ
ಅಂಚೆಯ ಕರಕುಶಲ ಕಲೆಯುವಿಲ್ಲದಿರ್ದೊಡೆ
ಎಲ್ಲವಿರ್ದು ಏನಿಲ್ಲದ ವಕ್ರಗತಿಯಕ್ಕು.
ತ್ರಿಲೋಕಗಳನುಭವ ಸುಳ್ಳಕ್ಕು-ಪೊಳ್ಳಕ್ಕು !

— o —

ಪಕ್ಷಿ

ಯಥಾ ಚಿತ್ತಂ ತಥಾ ವಾಚೊ
ಯಥಾ ವಾಚಃ ತಥಾ ಕ್ರಿಯಾಃ ।

ಜಗತ್ ಸೃಷ್ಟಿ ಕೋಟಿಯುಲಿ ಮೃದು ಮಧುರತೆಯಿಂ
ಮೈವೆತ್ತು ನೀಲ ವರ್ಣಾಂತ ಸುಂದರ ಪಕ್ಷಿಯೆ !
ಏಗಳುಂ ಕೊರಳೆತ್ತಿ ಊರ್ಧ್ವಮುಖಿಯಾಗಿ ನೀ
ಹಾಡದೇನ ಹಾಡುವೆ ಹೇ, ಚತುರ ಮತಿ ರಥಿಯೆ !
ನಿನ್ನ ರಾಗವಂ ಕೇಳ್ದಾಸು ಮನದಿ ಮುದಮಂ
ತಾಳ್ದೊಡೇನ್ನೈ ? ಆ ಮಧುರ ರಾಗದೊಳುಣ್ಮುವ
ಅಂತರಾರ್ಥವರಿಯೆ ತಿಣುಕುವುದೀ ಮತಿಮನಂ.
ಸದಾ ನೇಮದಿಂ ಭಕುತಿಯಿಂ ಧ್ಯಾನಿಸಿ. ನುತಿಸಿ
ಪಾಡಿ ಪರಬ್ರಹ್ಮ ಪ್ರಿಯರಾಣಿಯ ಮನವೊಲಿಸಿ
ಪಡೆದಿಹೆ ಸುರಸುಂದರ ದನಿಯುಂ ಎರವಲಾಗಿ.
ನೀಂ ನಲಿನಲಿಯುತ ಪಾಡುವೆ ಸರಾಗದಿಂದಲಿ
ಸಗ್ಗದೊಡೆಯ ವಿತ್ತೇಶನಂ ಧ್ಯಾನಿಸುವವೊಲ್ !
ನಿನ್ನ ಭಕ್ತಿರಸಧಾರೆ ಅಲೆಯಲೆಯಾಗೇರಿತು
ಸಗ್ಗದರಮನೆಯ ಸ್ವರ್ಣದ್ವಾರಂ ತಟ್ಟುವೊಲ್ !
ಎನ್ನಂತಿನಿತು ಬಾಳ್ ಬಂಧನದ ಭಂಗಮಂ
ಕಾಣದ ನಿನ್ನಗೆಲ್ಲಂ ಸರಾಗದ ಯೋಗವಿರೆ
ನೀಹಾಡು ಮನತುಂಬಿ ಭಕ್ತಿರಸ ಧಾರೆಯುಂ
ನೆರೆ ಹರಿಸಿ.
ಓ ! ಎನ್ನ ಪರಮ ಸಂಗಾತಿಯೇ !
ನೀನಲ್ಲದಾರಿಲ್ಲೆನಗೆ ಈ ಕಡು ನೋವಿನ
ಭವದಿಯಲಿ. ನಿನ್ನ ಸವಿಗೊರಳ ಸುಪ್ರಭಾತಂ

→

ಮೊಳಗದಿರೆ ನಿನ್ನ ಕಲಕಂಠದೊಳ್, ಎದೆಯೆನ್ನ
ತಳಮಳಿಸಿ ಕಣ್ಣಾಲಿಗಳ್ ತವಕಿಪುವು ನಿನ್ನ
ದರ್ಶನಂ ಬಯಸಿ, ಓ ! ರಾಗ ಬಂಧುವೇ ! ನೀಂ
ದಯೆದೋರಿ ನೆಲೆಸೆನ್ನ ಮಲ್ಲಿಕಾ ಬನದೊಳ್.
ನಿನ್ನ ದರುಶನಮಿಲ್ಲದಿರೆ ತಾಳದೀ ಮನಂ;
ಕೇಳೆನ್ನ ಹೃದಯದ ಪರಮಪ್ರಿಯ ಬಂಧುವೇ !
ಇಲ್ಲ ಕುಟಿಲತೆ ನಿನ್ನಲಿ. ಒಳಹೊರ ಮನಸುಗಳ
ಪರಿಭೇದಮಿಲ್ಲ. ನೀನಹುದು ಅನುರಾಗಿಣೀ !
ನಿನ್ನ ಸವಿಗೊರಳ ರಾಗ ರಸಮಂ ಕೇಳದಿರೆ
ಈ ಬದುಕೆ ನೀರಸ ಮೆನಲ್ ನೆನೆಯದಿರೆ ನಿನ್ನ.
ನಿನ್ನ ಕಾಣಲ್ ತಪಕಿಪುದು ಮನಂ. ನೀನೆನ್ನ
ನಿಜಬಂಧು ! ನೀನೆನ್ನ ಆತ್ಮೀಯ ನೇಹಿಗಂ !
ನಿನ್ನ ದಿವ್ಯ ದರುಶನಕಾಗಿ ಕಾದಿರುವೆನ್ನೈ
ಓ ಎನ್ನ ಹೃದಯ ನಿಧಿ ! ನೀನೇ ಬಂದೆನ್ನ
ಸಂತೈಸಿ ಮನಃಕ್ಲೇಷವ ಪರಿಹರಿಸೆ ಹಾಡುತಿರು !
ನಿನ್ನ ದನಿಯ ಕೇಳಿ ಮರೆವೆ ಇಹ ಪರಗಳ ಚಿಂತೆ !

— o —

ಯಮುನಾ ನದೀ ಕಿನಾರೆ

ವದನಂ ಪ್ರಸಾದಸದನಂ ಹೃದಯಂ
ಸುಧಾ ಮುಚೊ ವಾಚಃ ।
ಕರಣಂ ಪರೋಪಕರಣಂ ಯೇಷಾ ಕೇಷಾಂ
ನ ತೇ ವಂದ್ಯಾಃ ॥

ಸುನೀಲ ಜಲಧಿಯಗಾಧ ಪ್ರವಾಹ ಹರಿದಿರೆ
ಜಳಜಳಿಸಿ ಸಮುದ್ರಾಭಿಮುಖವಾಗಿ, ಜುಳುಜುಳು
ಮಂಜುಳರವದ ಮಧುರ ಗಾನರಸ ಧಾರೆಯದು
ಅಂತರಂಗಕಿಳಿವನಿತು ಮನೋಜ್ಞಂ. ಸುತ್ತ
ಮುತ್ತಲೆಲ್ಲಂ ಗ್ರಾಮ ಶ್ಯಾಮಲಾಂಗಿಯ ಸುಂದರ
ಪರಿಸರಂ ಮೇಣ್ ವಿಪಿನ ಪರಿವೃತ ವಿಸ್ತರಂ
ಮೌನ ಶಾಂತಿಯಲಿ ಮಿಂದು ನಿದ್ರಿತವಾದತ್ತು.
ಮಹಾನದಿಯ ಇಕ್ಕೆಲಗಳಲಿ ಸಾಲ್ಗೈಸಿ ಬೆಳೆದು
ಗಗನ ಚುಂಬಿಯಾಗಿ ನಿಲ್ದ ದ್ರುಮಂಗಳ್ ಪಚ್ಚ
ಪಟ್ಟುಡೆಯನುಟ್ಟವೊಲ್ ಸುಸುಂದರ ಸಮುದಯಂ.
ತಗ್ಗು ತಾವಿನಲಿ ದಟ್ಟೈಸಿ ಮುಂಬೆಳೆದು ನಿಲ್ದ
ಶಾಲಿವನ ಹಳದಿ ವರ್ಣಾಂತು ಅಲೆಯಲೆಯಾಗಿ
ತಲೆದೂಗುತಿರ್ದುದು ಮರುತನನೊಲಿದು. ಮೋಹಕ
ರೂಪಿನ ಮಯೂರಗಳ್ ಮಿಥುನಕೆಳಸಿ ಹಲುಬುತ
ಬಾಯ್ದೆರೆದು ಕ್ರೇಂಕರಿಸಿದುವು ಮನದಿ ಮುದತುಂಬಿ.
ಸಕಲತರ ವನವಿಹಂಗಮು ಕೋಟಿ ಪಾಡುತಿರೆ
ರಸಭರಿತವಾಗಿ ಉದಯರಾಗವಂ, ಬೆಳಗಿನ
ತನಿವೊಳ್ತು ಮನೋಜ್ಞಂ.

ಪೂರ್ವೀ ದಿಗಂತದಲಿ

ಬಾಲಕೋಮಲ ರವಿ ಅರುಣಾರುಣ ತೇಜದಿಂ
ನೀಲ ಭಿತ್ತಿಯನೇರಿದಂ ಬೆಳ್ಮುಗಿಲ್ ಮಂಜು
ವಾಹಿನಿಯ ತೆರೆ ಹರಿದು. ಕೃತ್ತಿಕೆ ವನದಿಯುಟ್ಟ
ಪಚ್ಚನೆಯ ಪಟ್ಟುಡೆಯು ಮಿಸುನಿಲೇಪವೊರೆದೊಲ್
ಸುವರ್ಣಮಯಮಾದುದು. ನೈರುತ್ಯ ಮಾರುತಂ
ಬೀಸಿವೀಸಿ ಸುಯ್ಯನೆ ಸುಯ್ದುಯ್ದು ಮಂಜುಮಯ
ಶೀತಲಾತಿಶೀತಲ ಮುದ್ರೆಗಳನೊತ್ತುತಿರೆ
ಪೈಮನ ಮುದುಡುವಂತೆ ಕಮನೀಯ ಕಠೋರಂ !
ಯಮುನೆಯಲಿ ಗೆಣೆಯರ ಬಣದೊಡಂ ಮುಳುಗಿ ಮಿಂದು
ಮಡಿಯುಟ್ಟು ಹರ್ಷಚಿತ್ತದಿಂ ಬಾಲಕೃಷ್ಣಂ
ಮುರುಳಿಗಾನವಂಗೈದನ್ ಸುಖಾನಂದದಿಂ.
ನಾದಸ್ವರಂ ಗಿರಿವನಗಳಲಿ ಮರುದನಿಯಂ
ಪಡೆದು ನಾದಮಯಮಾದತ್ತು ಕಿವಿಗಿಂಪಾಗಿ.
ಮುದ್ದುಮುದ್ದಾದ ಗೋಪಗೋಪಿಯರೊಗ್ಗೂಡಿ
ನರ್ತಿಸಿದರಲ್ಲಿ ಕಿರುಪೊನ್ನ ಗೆಜ್ಜೆಗಳ ಜಿಣಿ
ಜಿಣಿರೆನಿಸಿ. ತನಿವೊಳ್ತಿನ ಮಾಧುರ್ಯವೊತ್ತಿದ
ಸ್ಫೂರ್ತಿಯಿಂ ಬಾಲವಳಗದ ತೋಷ ಕೂಟದಿಂ,
ಪುಳಕಗೊಂಡು ಹರಿದಳ್ ಯಮುನೆ ಜುಳುಜುಳುರಾಗ
ಹರಿಸಿ. ಮುಚುಕುಂದನಂ ಸುತ್ತುವರಿದರೆಳೆಯರ್
ಸಂತಸ ಮೋದದ ಕಳೆಯಂ ಸೂಸಿ ಪಾಡುತ್ತೆ
ಕುಣಿದರೊಗ್ಗಿನಲಿ, ಕೊಳಲದನಿ ಪುಗುತಿರಲೆದೆಯ
ಅಂತರಾಳಮಂ ಮಾದಕಮಾಗಿ. ಸಗ್ಗಸಿರಿ
ಧರೆಗಿಳಿದವೊಲ್ ಎಳೆಯರ ಕೂಟ ನಲಿದತ್ತು
ಯಮುನಾ ನದೀ ಕಿನಾರೆ. ಎಳೆಗರಿಕೆಯ ಪಚ್ಚ

→

ಪಸುರ ಪರ್ಬವನುಂಬ ಗೋವಮಂದೆಯುಂ ಕೊಳಲ
ನಾದ ಸ್ವರಮಂ ಕೇಳುಕೇಳುತ್ತೆ ಮುದಗೊಂಡು
ಮೇವುದಂ ಮರೆತು ಕಿವಿಗಳಂ ನಿಮಿರಿಸಿ ನಿಲ್ದು
ರಾಗಮುಗ್ಧವಾದುವಾಗಳಿಗೆಯುಲಿ. ನಳನಳಿಪ
ಬೃಂದಾವನದಿ ಅರಳಿದ ಸುಮಕೋಟಿ ಸುಗಂಧಂ
ಪಸರಿಸಿತು ಪರಿಸರದಿ ಮನಃಕಲ್ಪ ಅರಳುವೊಲ್ !
ಗಿಳಿವಿಂಡಿನ ಗಳವು, ಮಧುರ ಸ್ವರದ ಕೋಗಿಲೆ
ಕಾಮಳ್ಳಿಗಳ ಕೂಜಿತಂ ಶೃತಿಯೂಡಿದತ್ತು.
ಎದೆಯೋತು, ಹಂಡುಂಡ ಪಶುವೊಂದು ತಲೆಯೆತ್ತಿ
ನೋಡುತ್ತೆ, ರಾಗ ಮಾಧುರ್ಯಕೆ ಮನಂ ಸೋಲ್ದು
ಅಂಬೆ ಅಂಬೆಯೆನೆ, ಎಳೆಗರುಗಳ್ ಜಿಗಿದಾಡುತೆ
ಆಡಾಡಿ ದನಿಗೂಡಿದುವು ಅಂಬೆಯಂಬೆಂದು.
ಬಿಳ್ಪಿನ, ಕರಿಗಪ್ಪಿನ, ಕಂದು, ಬೂದ, ಕೆಮ್ಮನೆ
ಕೆಮ್ಮಣ್ಣ ವರ್ಣಗಳಲಿ ಗೋವುಗಳು ಮೆರೆದುವು
ಕರುಗಳೊಡನೆ ಮೇಣ್ ಎಳೆಯರೊಡನೆ ಒಗ್ಗೂಡಿ.
ಯಮುನಾ ನದೀತೀರ ರಾಗಮಯವಾಗಿ ನೆರೆ
ಪ್ರೇಮಮಯವಾಗಿ ಧ್ಯಾನಮಯವಾಗಿ ರಂಜಿಸಿ
ಬೃಂದಾವನ ಗೋಷ್ಠಿಗೆ ಸುಂದರ ಮೆರಗು ನೀಡಿತು.
ಕೋಲಾಟವನಾಡಿದರೆಲ್ಲ ಗೋಪಗೋಪಿಯರ್
ಜಾನಪದ ಗೀತೆಯಂ ಪಾಡುತಲಿ ಮುಕುಂದನ
ಸುತ್ತುವರಿದು. ಕೋಲ್ಗಳ್ ಪಟಪಟಪ ನಲ್ ಸದ್ದು
ಗೀತಗಾನದ ಸವಿಗೆ ಶೃತಿಯೂಡಿಸಿತು ತಾಳ
ಲಯಗಳ ತೆರದಿ ಗೆಜ್ಜೆ ಕಾಲಂದಿಗೆಗಳ ಜಣಿ

→

ಜಿಣಿ ಸದ್ದನು ಮೀರಿ. ಎಳೆವಿಸಿಲ ಎಳೆಗಾಂತಿಯ
ಸಮ್ಮೋಹ ವರ್ಣಾಂತು ತಂಗಾಳಿಯಾಟದಿ
ತಲೆದೂಗುತ ಮೆರೆವ ಸುಮಕೋಟಿಯಲಿ ಬೆರೆತು
ತಾನೊಂದೈಸಿದುದು ಪರಮ ಜೀವ ರಸಾಯನಂ
ಯಮುನಾ ನದೀ ಕಿನಾರೆ !

— o —

ಜನನಿ

ದೂರದಲಿ ನಿಂತೇಕೆ ಅನುಮಾನಿಸುವೆ ಜನನಿ
ಅಜ್ಞೆ ಎಂಬುದನರಿತ ಮೇಲಿದೇಂ ಬರಿ ಮಾಯೆ ?
ರೆಕ್ಕೆ ಬಲಿಯದ ಹಕ್ಕಿಯೆನೆ ಮನ್ನಿಸೆಲೆ ತಾಯೆ !
ತೈಲವಿಲ್ಲದ ದೀಪವೆನೆ ದಯದಿಂದನುಗ್ರಹಿಸು.
ತಾಳಲಯ ರಹಿತ ರಾಗದಲಿ ಪಾಡಿದೆನೆಂದು
ನೀ ಮುನಿದೊಡೆ ಆನೇಂಗೈವೆ ಪೇಳ್ ಜನನಿ !
ಆನರಿದುದು ನಿನಗೊರೆವೆ ಪಾಡುವ ಆಸೆಯಲಿ
ನಿನ್ನ ನುತಿಸದಿರಲಾರೆ ಕೇಳೆನ್ನಯ ತಾಯೆ ?
ರಾಗರಸಮಿಲ್ಲದಿರಲೇನು ? ಹೃನ್ಮನ ತುಂಬಿ
ಉಲಿವೆ ಪರಮ ಭಕ್ತಿಯ ನೇಮದಲಿ ಮಮ ಜನನಿ !
ತಾಯೊಲ್ಮೆಯಿರೆ ತಾಳಲಯವೇಕೆ ಗಮನಿಸಲಿ ?
ನೀನೆ ನೇಮ, ನೀನೆ ವ್ರತಮೆನೆ ಕೋಪವೇಕೆಲೆ ?
ನಿನ್ನ ಪೂಜೆಯೆನ್ನ ಅಳಿಲಮಳಲ ಸೇವೆ ಕಣ !
ಎನ್ನ ಭಂಗ ಬವಣೆಯರಿತು ನೀನೆ ನೀಡೆನಗೆ,
ಜ್ಞಾನದಾ ಪರಮ ಬುತ್ತಿಯಂ ಕರುಣೆಯಿಂದಲಿ,
ಅಂ ಸಲಿಸುವೆನ್ನ ರಿಣಂ ಕೊನೆವರಂ ತಾಯೆ !
ಹೇ ಮಾಯೆ ! ನೀನೇ ಅಜಜಾಯೆ ! ಮಮತಾಯೆ !
ನಿನ್ನ ನುತಿಸಲೆಂದಲ್ತೆ ಎನ್ನ ಕವಿತಾರಚನೆ ?
ರಾಗ ರಸರಹಿತಮಿರೆ ಸಲ್ಲದೆ ನಿನಗೆ ಪೂಜೆ ?
ತಾಳಲಯವರಿಯದಾನು ಧ್ಯಾನಿಸೆನೆ ನಿನ್ನ ?
ಅವಮಾನಮಿಲ್ಲೆನೆಗೆ ತಪ್ಪಿದೊಡೆ ನಿನ್ನ ಬಳಿ.
ಹೇ, ತಾಯೆ ! ಪಾಡುತಿರುವೆನಿಂತೆ ಕೊನೆವರಂ.
ತೆಗಳುವವರ್ ತೆಗಳಲಿ ! ಹೀಯಾಳಿಪರ್ ಇಂತೆ

→

ಹೀಯಾಳಿಸಲಿ ! ನಿನ್ನ ನುಡಿಯುಲ್ಲದೆ ಬೇರೇಂ
ಬಯಸೆನ್. ಅನೇಕವಗೆಯ ಕರಕುಶಲತೆಯಂ
ನೀನೇ ನೀಡಿರ್ದೊಡಂ ನಿನ್ನ ಸೇವೆಯೆ ನಿಚ್ಚ
ಕುಶಲ ಕಲೆಯೈ ಶ್ರೀಮಾತೆಯೆ! ನಿನ್ನ ಕರುಣೆಯಿರೆ
ಸಾಲ್ಗು ಮೆನೆಗೆ, ಲೋಕ ಲಜ್ಜೆಯು ಗೋಳು ಬದಿಗಿರಲಿ !
ಕಲಿಯುಲಿಲ್ಲ ಶಾಲೆಯುಲಿ, ಗುರುವಿಲ್ಲ ಮುಂಗಡೆ
ತೆಗಳುವವರಿಹರ್ ಪಿಂಗಡೆ ! ನೀನಿಹೆ ದೂರದಿ !
ಆರವೊರೆ ಪೋಗಲಾನು ತಾಯೇ ! ಆರೆನಗೆ
ಸರಿದಾರಿ ತೋರುವರ್ ? ಎಂತರಸಲಿ ನಿನ್ನಯ
ಪೀಠವಂ ? ನೀಕೈ ಹಿಡಿದು ನಡೆಸೆನ್ನನು ತಾಯೆ !
ನೀನೇ ಬಂಧು ? ನೀನೇ ರಕ್ಷೆ !

— o —

ಅಸಮತೆ

ಧರಣಿಯೊಳ್ ವಾಯುವೇಗದಿಂ ರೊಯ್ಯನೇರುವ
ಧೂರ್ತ ಸಾಹಸದಿಂ ಇನಿತು ಇರಿಸುಮುರಿಸಿಲ್ಲದ
ಮಾಳ್ಕೆಯಲಿ ಪ್ರಗತಿ ಪಥಂವಿಡಿದು ಸಗ್ಗಿಗರ್
ನಾಣ್ಬುವೊಲ್ ಸರ್ವತ್ರ ಸತ್ ಸಾಧನೆಯಿಂದಲಿ
ರಾಷ್ಟ್ರ ನಿರ್ಮಾಣಗೈದ ಪಾಶ್ಚಾತ್ಯ ಭೂಮಿಜರ್
ಜ್ಞಾನ–ವಿಜ್ಞಾನ–ಶ್ರದ್ಧೆಗಳ ಆರಾಧಕರ್ !
ಮಂತ್ರಮಾಯದಾಟದೊಲ್ ನಿರ್ಮಿತ ರಮಣೀಯ
ಮಾಯಾನಗರಿಗಳ್ ಅತಿ ಸಂಕುಚಿತ ಭಾವದ
ಸೊತ್ತಲ್ಲ ! ಸ್ತ್ರೀ ಪುರುಷರ ಪರಸ್ಪರ ಸಹಕಾರ
ಪ್ರೇಮಾದರ ಮೇಣ್ ಧೈರ್ಯ ಸಾಹಸದ ದ್ಯೋತಕ.
ಕಾಲಪುರುಷನೊಡನೆ ನಿಜ ಸ್ಪರ್ಧೆಗಿಳಿದ ಪರಮ
ವಿಜ್ಞಾನಿಗಳ್ ದಿನದಿನಂ ಸಗ್ಗದೇಣಿಯಂ
ಏರುತಿಹರ್ ಸಗ್ಗಿಗರ ಝಾಡಿಸುವ ಪಾಂಗಿನಲಿ !

ಅಂತೊಂದು ದಿವ್ಯ ಸಾಹಸ ಕಾರ್ಯಮಂ ಕಂಡು
ಕಾಣುತ್ತೆ ಕಣ್ಣಿರ್ದು ಕುರುಡಾದ ಪಾಂಗಿನಲಿ
ನಮ್ಮನಾಳ್ವ ಅಸಮತೆಯು ಸಾಹಸ ವಿಶೇಷಂ
ತಾನಲ್ತೆ ? ಜಾತಿಮತಗಳಲಿ ಅಸಮತೆ ಮೇಣ್
ಒಂದೇವಸಿರಿಂದ್ವೈವ ಸ್ತ್ರೀ ಪುರುಷರಲಿ ನಿತ್ಯ
ಹೀನಾತಿಹೀನ ಅಸಮತೆ. ತತ್ತಳ ತುಳಿತದ
ಧೂರ್ತ ನೀತಿ ! ಒರ್ವರನೊರ್ವರ್ ತುಳಿದು ಹೊಸಕಿ
ಬದಿಗೊತ್ತಿ ಸ್ವಾರ್ಥ ಸಾಧನೆಗೈವುದರಲ್ಲಿಯೆ
ಕಾಲಯಾಪನೆ ಎನಲ್ ಎಲ್ಲಿಯ ಮಹತ್ವಾದನೆ?

ಸ್ತ್ರೀಕುಲದ ಬಾಳು ದುಃಖ ದುಗುಡದ ಪಾಲಿನೆ
ಕಣ್ಣೀರಿನ ಕಡಲೇ ಪ್ರಗತಿಗೆ ಮಾರೊಡ್ಡು.
ಸಾಮಾಜಿಕ ಶೋಷಣೆ ರಾಜಕೀಯ ಶೋಷಣೆ
ಮೇಣ್ ಅಸಮತೆಯ ರಣಗೋಳು ಹೆಜ್ಜೆಹೆಜ್ಜೆಯ
ಪ್ರತಿಬಂಧಕ; ಹಿಂಸೆಯಾ ಕರಾಳ ರೂಪಕ.
ರಾಷ್ಟ್ರದ ಬಡತನಕೆಂದೆ ರೂಪಿಸಿದ ನಾಟಕ !
ಈ ಘೋರ ಪಾಪಕೃತ್ಯ ಇಂದು ನಿನ್ನೆಯದಲ್ಲ.
ಕಾಲಾನುಕಾಲದಿಂ ನಡೆಯುತಿದೆ ಸ್ವಾರ್ಥಿಗಳ
ಇಚ್ಛಾನುಸಾರಂ. ಪುರುಷ ಪ್ರಧಾನತೆಯಿಂದೆ
ಸ್ತ್ರೀಯರ ದಮನ. ಮಠಾಧಿಪತಿಗಳ ಸ್ವಾರ್ಥದಿಂ
ಜಾತಿಮತ ಮೇಲುಕೀಳುಗಳ ಸೃಷ್ಟಣೆ ಮೇಣ್
ದಮನಾತ್ಮಕ ನೀತಿಯ ಸಾರ ಸಂಗ್ರಹ ಕಣ !
ಯುಗಧರ್ಮದ ಶ್ರದ್ಧಾನಿಷ್ಠೆಯಿಂ ದೂರಾಗಿ
ಅಜ್ಞಾನ ಅವಜ್ಞೆಗಳಿಂಗೆ ಪಕ್ಕಾಗಿ ನಿಜ
ಬಡತನದೊಡಂ ಜಡತ್ವವ ಬೆಸೆದು ಬಾಳ್ವವರ್
ಸರಸ್ವತೀ ದೇಗುಲಂಬೊಕ್ಕೊಡಂ ವ್ಯರ್ಥವೇ !
ವಿಜ್ಞಾನ ಯುಗೀಯ ಪರಮೋಚ್ಚ ಸಾಧನಾ
ವೈಖರಿಯ ಬಿಸಿಯುಂ ಮನಮತಿಗಳ ಸೆಳೆಯದಿರೆ
ಏನೆನ್ನಲಕ್ಕುಮೋ ? ಮೂಢಮತಿಯ ಅದ್ಭುತ
ಕಿಂಕುರ್ವಾಣತೆಯ ಇಕ್ಕಳದಲಿ ಸೆರೆ ಸಿಲ್ಕಿರೆ
ಲೋಕವೇ ಜಡವಕ್ಕು. ಪರಮ ಜಂಜವಕ್ಕು.
ಜನಜೀವನದಲಿ ಹಾಸುಹೊಕ್ಕಾದ ಅನನ್ಯ
ಅಸಹನೀಯಮಾದ ಅಸಮತೆಯೇ ಎಲ್ಲೆಲ್ಲು !
ಮನುಕುಲದ ಬಾಳಿನಲಿ ಕಣ್ಣೀರಿನ ಕಡಲು

→

ಎಂತಪ್ಪ ಸ್ವಯಂಕೃತಪರಾಧ ? ಮತಿಯಿದ್ದು
ತಿಳಿವಿದ್ದು ಗೈವ ಘೋರ ಅಪರಾಧ ! ಕುಪಥದಿ
ಕಣ್ಮುಚ್ಚಿ ಹಾಯ್ವವರ ಹೇಸುವೃತ್ತಿಯು ನಾಟಕ !
ಅವಿದ್ಯೆ–ಅಜ್ಞಾನಗಳ ಬೇವುಂಡು ಮರವಟ್ಟು
ಅಸಮತೆಗೆ ತಲೆಬಾಗಿ ಬದುಕಿನ ಬೆಲೆಯಿದೆನುತೆ
ನೆರೆ ನಂಬಿದರ ಕಂಬನಿ ಬತ್ತುವುದೇಂ ಇಂದು ?
ಸಮ್ಯಕ್‌ಜ್ಞಾನ ಸಮ್ಯಕ್‌ಬಾಳು ಬೆಳಗಿ ದಿವ್ಯ
ಪ್ರಜ್ಞಾನ ಜ್ಯೋತಿಯುು ಕುಡಿ ಕಟ್ಟಿದೊಲ್ ಉರಿಯಲ್
ಅಸಮತೆಯ ಜಡಿಕುಟ್ಟಿ ಅಳಿಸಿರೈ ಬಂಧುಗಳೆ !

— o —

ಶಾಂತಿ ಜ್ಯೋತಿರ್ಧಾರಿಣಿ ಸ್ವಾತಂತ್ರ್ಯದೇವಿ

ಮಂಜುಮಯಿ ಪರಿವೇಶದಲಿ ಶೀತಲ ವಾತಂ
ತಣ್ಣನೆಯ ತಣ್ಪೊರೆದು ಭುವಿ ಪಚ್ಚ ಪಸುರೊತ್ತಿ
ಪಚ್ಚ ಪಡಲಿನೆ ಪಸುರ್ ಬಲಿತು ಮಲೆತು ತಲೆಯಂ
ತೂಗುತಿರೆ ಸುರಲೋಕವೆ ಧರೆಗಿಳಿದು ಬಂದವೊಲ್ ಬಲ್
ಸುಂದರಂ ಪಾಶ್ಚಾತ್ಯ ನೈಸರ್ಗಿಕ ಧಾತ್ರಿಯಲಿ !
ಪ್ರಕೃತಿಯ ಸಕಲೈಶ್ವರ್ಯದತ್ತ ಭುವಿಯೊಳ್
ಪುಣ್ಯದಿಂ ಸಂಭವಿಸಿ ಶಾಂತಿರಸ ಮೊಗೆದುಂಡ
ಜನಕೋಟಿಯ ಮನೋಗತಿಯಲುಕ್ಕುವ ಕೆಚ್ಚಿನ
ರಣದಾಹ ಸಾಮಾನ್ಯಮಲ್ಲಂ. ನೆರೆಹೊರೆಯಲಿ
ರಾಜ್ಯಗಳ ಗೆಣೆತನವನಳಿಸಿ ಕಿಚ್ಚಿನ ಕಿಡಿಯು
ಉರಿಯುತಿರೆ ಧಗಧಗಿಸಿ. ವಿವಿಧ ಶಸ್ತ್ರಾಸ್ತ್ರಗಳ್
ಅಣ್ವಸ್ತ್ರಗಳ್ ಭವಿಸೆ ಕಾರಖಾನೆಗಳ್ ದಿನ
ದಿನಂ ಭುಗಿಲೆಳ್ದಪವು ನವೋನವ ವೈಖರಿಯಲಿ !
ಮೂರ್ಖತನ ದ್ವೇಷ ರೋಷ ದುರಾಸೆಗಳ ಕೋಂಟೆ
ಮುಂಬೆಳೆಯುತಿರೆ ಜಟಿಲತೆ ಹೆಚ್ಚಿ, ಯಾವತ್ಕಾಲಂ
ರಣದಾಹ ! ಹೊನ್ನು ಮಣ್ಣು ಕಬಳಿಪ ಹೇರಾಸೆ !
ರಾಷ್ಟ್ರರಾಷ್ಟ್ರಗಳ ನಡುವಣ ದ್ವೇಷ ಭುಗಿಲೆದ್ದು
ವಿಜೃಂಭಿಸಿ ನಲಿವಳ್ ರಣಕಾಳಿ ಬಾಯ್ದೆರೆದು !

ಸನ್ ಸಾವಿರದೆಂಟನೂರೈವತ್ತೊಂದರ ಕಾಲ
ಮಾನದಲಿ ಸುಜ್ಞಾನಿಗಳ್ ಒಗ್ಗೂಡಿ ವಿಶ್ವದ
ಶಾಂತಿಯಂ ಬಯಸಿ; ಯುದ್ಧದಾಹದ ಪೆಮ್ಮಾರಿ

→

ನೆಪೋಲಿಯನ್ ವಿರುದ್ಧ ಸೊಲ್ಲೆತ್ತಿ ಸುಶಾಂತಿಯ
ಪತಾಕೆವಿಡಿದು ಸ್ತ್ರೀಪುರುಷರೊಗ್ಗಿನ ಪ್ರಭಾತ್
ಫೇರಿ ನಡೆಸಿರ್ದರಾ ವನವಾರ್ಧಿಯು ತಣ್ಣನೆ
ತಣ್ಪುಂಡು; ಸಾಲ್ವರಿದ ಸಹಸ್ರಾರು ಜನಗಳ
ಮೆರವಣಿಗೆ ಬೃಹದ್ ಅಜಗರಂ ಪೋಲ್ದುದು. ಅಂಕು
ಡೊಂಕಿನ ಪಥದೊಳ್ ಒಕ್ಕೊರಲ ಘೋಷಂ ಮೊರೆದುದು
ಹೃದಯಹಾರಿಯಾಗಿ! "ಪರಮ ಮಿತ್ರರೇ ಕೇಳಿ!
ನಮ್ಮೀ ನಿಜ ಹೋರಾಟ ಸತ್ ಶಾಂತಿಗಾಗಿಯೆ!
ಮತಿಗೆಟ್ಟು, ಬಟ್ಟೆಗೆಟ್ಟು ವಾಮಮಾರ್ಗವನಿಡಿದು
ಜಗತ್ ಶಾಂತಿಯಂ ಕಲಕದಿರಿ! ಶಾಂತಿಯಿಂದಾವು
ಬದುಕಿ, ಪರರಂ ಶಾಂತಿಯಿಂ ಸಂಬಾಳಿಸಲಕ್ಕು!"
ಎಂಬ ದೃಢ ಕಂಠಗಳ ಘೋಷ ಗಗನ ಭೇರಿ–
ಯಾಗುತಿರೆ ದೂರವೆಟ್ಟುಮರುದನಿಗೈದತ್ತು!
ತಂಗಾಳಿ ಬೀಸಿವೀಸಿ ಬಲ್ಗಾಳಿಯಾಗುತೆ
ಸುಳಿಸುತ್ತಿ ಸುಯ್ದುಯ್ದು ಸುಯ್ಗಾಳಿಯಾದವೊಲ್
ವಾತಾವರಣಂ ಚಣಚಣಂ ಸ್ಥಿತಿಗತಿಯಂ
ಮಾರಿ ನಡೆದುದು ಜಗದ ಸುಖದುಃಖಮಂ ಕಡೆ
ಗಣಿಸಿ; ತನ್ನ ಧೀರಗತಿಯನಿನಿತು ಬದಲಿಸದೆ.

ಪ್ರಭಾತ್ ಫೇರಿಯಲಿ ನಸು ಮಾತ್ರ ಮುಂದಿರ್ದ
ಮುಂಬಿನ ಹದಿಹರೆಯದ ಲಲನೆ ಬಲಗೈಯೆತ್ತಿ
ಹಿಡಿದಿರ್ದಳ್ ಧಗಧಗ ಉರಿವ ಶಾಂತಿದ್ಯೋತಕ
ಜ್ಯೋತಿರ್ದಾನಿಯಂ! ಎಡಗೈಲಿ ಶಾಂತಿ ಮಂತ್ರಗಳ
ಪುಸ್ತಿಕೆ! ಧವಳವಸನೆ ಅನುಪಮ ಸುರಸುಂದರಿ

→

ತಾಂ ಲಲಿತ ಕಲಾನಿಧಿಯೊಲ್ ಕಣ್ಗೆಸೆದಿರ್ದಳ್ !
ಪಕ್ಷಿ ಸಂಕುಲಂ ಆವ ಕಾರಣವೊ ಕಲಕಂಠ
ವಾಹಿನಿಯಲಿ ದುಃಖವೊತ್ತಿ ಗದ್ಗದಿತವಾದೊಲ್
ಚೀರ್ದಿತ್ತು ಚೀರುದನಿಯಿಂಲಿ. ಬೆಳಗುವೊಳ್ತಿನಾ
ತಣ್ಣನೆಯ ತಣ್ಪುಗುವ ಪಚ್ಚ ಬಯಲಿನ ಮಧ್ಯೆ
ಮೃಗ ಚರಣಗಳ್ ಬರೆದ ರೇಖಾ ಬಟ್ಟೆಯೊಳ್
ಪ್ರಶಾಂತ ಚಿತ್ಚೇತನ ರಸಸ್ಫೂರ್ತಿಯುಗುತಿಹ
ಜೀವ ನದಿಯು ಪಾಂಗಿನಲಿ ಮುಂಬರಿದುದು ಸಾಲ್ಗೆಸಿ;
ಲೋಕದೊಳ್ಪಿಗೆ ಶಾಂತಿ ಜ್ಯೋತಿಯಂ ಒಯ್ಯುತಿಹ
ಶಾಂತಿವಾದಿಗಳ ಪರಿಪುಣ್ಯ ಮೇಳದ ಫೇರಿ !
ನೀರವ–ನಿರಾತಂಕ ತಲದಲೇನಾ ಜನರ
ಉದ್ಘೋಷ ! ಸಡಗರದ ಮುನ್ನಡೆ ! ಪರಮ ಶಾಂತಿ
ದ್ರವ್ಯವೇ ದ್ರವಿಸಿ ಹರಿದೊಲ್ ಸಾಲ್ವರಿದುದಾ
ಮಾನವೀಯತೆಯ ದಿವ್ಯವಾರಿಧಿ ! ಸೌಂದರ್ಯ
ನಿಧಿಯಂ ಸುಸುಂದರಗೊಳಿಪ ಜೀವನೀ ಶಕ್ತಿ
ಸಂಚಯನಂ ಜ್ಞಾನ ಮಂಡಲಕೆ ಪೂರಕವಾಗಿ !

ಉದಿತೋದಿತ ಅರುಣಾರುಣನ ಚೆಂಗಾಂತಿ ಸಿರಿ
ಮುದ್ದಿಡುತಿರೆ ಮುದ್ದು ಮುಖಮಂ ವರ ಲಲಿತಾಂಗಿ
ಸಗ್ಗದಿಂದಿಳಿತಂದ ಅಪ್ಸರೆಯೊ ಎನೆ ದಿವ್ಯ
ಪುತ್ಥಳಿಯೊಲ್ ಕಣ್ಗೆಸೆದಳ್ ಜ್ಯೋತಿರ್ಧಾರಿಣಿ !
ಆವೊಂದು ಸಮಯಸ್ಫೂರ್ತಿಯಂ ಅರ್ಥೈಸದಿರ್ದ
ಕಟುಮನದ ಶತೃಗಳ ಗೃಧ್ರ ಕಣ್ ನೋಟಕ್ಕೆ
ಮುಗ್ಧ ಶಾಂತಿ ಸ್ವರೂಪಿಯೆಂತು ತೋರ್ದಳೋ

→

ಕೂರಿಯಾಗಿ ? ತೆಕ್ಕನೆ ಆಚಣದೊಳಾವ ನಿಜ
ಶತೃವೊ ಒಗೆದನೊಂದು ಸುಡುಗೋಲಿಯಂ ! ಆ
ನವಕೋಮಲೆಯ ಶಾಂತಿಪೂತ ಹೃದಯಕ್ಕೆ !
ಆಗಲೇನಾ ಶಾಂತಿದೂತರ ಗಲಿಬಿಲಿಯಾ ?
ಆಕ್ಷಣ ಬಾಲೆ ಭೂಶಾಯಿಯಾದಳ್ ಎಡಬಲದಿ
ಜ್ಯೋತಿರ್ದಾನಿ ಮೇಣಾ ಪುಸ್ತಿಕೆಯ ಕೈವಿಟ್ಟು !
ಹೃದಯ ಬಿರಿವೊಲ್ ನಡೆದತ್ತು ಘೋರ ದುರಂತ,
ಸಹಸ್ರಾರು ಜನರ ತೆರೆದ ಕಣ್ಣುಗಳ ಮುಂತೆ !
ಜಯಲಕ್ಷ್ಮಿಯೊಲ್ ಉಲ್ಲಸಿತೆಯಾಗಿರ್ದ ಬಾಲೆಯ
ಅಂತ್ಯದಿಂ ಹಾಹಾಕರಿಸಿತು ಅಖಿಲ ಜನಗಣಂ,
ಆ ದುಃಖ ಪೂರ್ಣ ಚಿತ್ತಾರಮಂ ಕಣ್ಗಳಿಂ
ನೋಡಿರ್ದ ಇತಾಲಿಯ ಪ್ರಸಿದ್ಧ ಕಲಾವಿದ
ಫ್ರೆಡರಿಕ್ ಬಾರ್ದೋಲ್ಡಿ ಚಿಂತನಾವೇಶದಲಿ
ಮನ ಮಥಿಸಿದಂ. ಹಗಲಿರುಳ್ ಚಿತ್ತಭಿತ್ತಿಯಲಿ
ಮುಗ್ಧಮತಿಯ ಅಮಾಯಕ ಬಾಲೆಯ ಚಿತ್ರ ನೆಲೆ
ನಿಂದಿರೆ ; ಅಂತೊಂದು ಶಾಂತಿರಸ ಧಾರೆಯಂ
ಸೂಸುವ ಪರಮ ಶಾಂತಿ ಜ್ಯೋತಿರ್ಧಾರಿಣಿದೇವಿ
ಮೂರ್ತಿಯಂ ಕಡೆದು ಕಾಲಾನುಕಾಲಮಿರ್ಪೊಲ್
ಸ್ಥಿರೀಕರಿಪ ಇಚ್ಛೆಯಣಂ ಪಣ್ಣಿದು ಮನದೊಳ್.
ತನ್ನಯ ಚಿರ ನೇಹಿಗ ಪೆಸರಾಂತ ಯಂತ್ರರ್ಷಿ
ಫ್ರಾನ್ಸ್ ದೇಶೀಯ ವರಕಲಾವಿದ ಆಯ್‌ಫೆಲ್
ಮಹೋದಯನೊಡಗೂಡಿ ಮನ ಮಥಿಸಿದಂ. ಚಿತ್ತ
ನೇಹ ರಸಧಿಯಲಿ ಮುಳುಗೇಳೆ ಭರವಸೆಯ ತನಿ
ಎರ್ದೆ ಕಲಶಮಂ ತುಂಬಿದತ್ತು ಅಮೃತಮಾಗಿ.

→

ಶಾಂತಿ ಜ್ಯೋತಿರ್ಧಾರಿಣಿಯ ಶಿಲ್ಪಮೂರ್ತಿಯಂ
ನಿಜರೂಪಕಿಳಿಪ ಸಂಯೋಜನೆಯೊಳ್ ಮಾದರಿ
ಪ್ರತಿಮೆಗಳೆನೆ ಬಗೆವಗೆಯ ಭಂಗಿಯ ಆರೇಳು
ಕಿರುಕೃತಿಗಳ್ ಮೂಡಿದುವು. ಪ್ರಜೆಗಳ ಮನಃ
ಚಿತ್ರಗಳನೋದಿ ಕಲೆಯ ಬೆಲೆಯರಿತುಕೊಳ್ಳಲ್.
ಕಲಾಸಕ್ತರ್ ದೃಷ್ಟಿ ಹರಿಯಲತ್ತ ಮೆಚ್ಚಿಗೆ
ದೊರಕಿದುದು ಅನನ್ಯ ಅನುಪಮ ಆಸಕ್ತಿಯಿಂ.

ಆ ಸಮಯದೊಳ್ ಫ್ರಾನ್ಸ್ ಮೇಣ್ ಪೋಲೆಂಡ್‌ಗಳ
ವೈರತ್ವ ಘನಿಸಿ ದ್ವೇಷದ ಕಿಡಿಕೆರಳೆ ಕಿಚ್ಚು
ಹುಚ್ಚೆದ್ದುದು ಜಿದ್ದಾಜಿದ್ದಿನಿಂ ಯುದ್ಧಮಂ
ಸಾರ್ದು ತೆಕ್ಕನೆ ಅಖಾಡಕಿಳಿದುವು ರಾಷ್ಟ್ರಗಳ್ !
ಆಗಳಾ ಶಾಂತಿಪ್ರಿಯ ಫ್ರೆಡರಿಕ್ ಬಾರ್ದೋಲ್ಡಿ
ತಾನಲ್ಲಿರಲಿಚ್ಛಿಸದೆಯೆ ಚಿಂತಿತನಾದಂ.
ರಾಷ್ಟ್ರದೊಳ್ ರಣಯುದ್ಧದ ಬಲ್ಗಾಳಿ ಬೀಸಿತು !
ಶಾಂತ ಜನಕೋಟಿಯ ಮನಃಬುದ್ಧಿಗಳಂ ನೆರೆ
ಕಲಕುವಂದದಲಿ ! ಯುದ್ಧದ ರಣದೇವತೆಯಂ
ಅಕಾಂಡತಾಂಡವ ನೃತ್ಯ ನಡೆಸಲುರೆ, ಮನನೊಂದು
ವರಶಿಲ್ಪಿ ಫ್ರೆಡರಿಕ್ ಬಾರ್ದೋಲ್ಡಿ ಅಲ್ಲಿಂದೆ
ಸುದೂರವಿರಲಿಚ್ಛಿಸಿ ಸಾಗರೀ ಯಾನಮಂ
ಕೈಕೊಂಡು ಪಯಣಿಸಿದನ್ ನ್ಯೂಯಾರ್ಕ್ ನಗರಕೆ.
ಮನದ ಬೇಗುದಿ–ಬೇವಸಗಳಿಗೆ ಕಡಿವಾಣ
ವಿಕ್ಕಿ ಸಾಗರಯಾನದಲಿ ಸ್ವಾಂತನ ಪಡೆದಂ.
ಹಿಂದೆ ಮುಂದೆ ಎಲ್ಲೆಲ್ಲಿಯುಂ ಜಲವೇ ಜಲಂ !

→

ಜಹಜನತ್ತಿತ್ತ ನೂಂಕಾಡುವೊಲ್ ನುಗ್ಗಿಬಹ
ಚಂಡಪ್ರಚಂಡ ಅಲೆಗಳೋಲಿಯಲಿ ಹರಿದುದು
ಜಹಜು ಸೆಲೆ ತುಯ್ಯಲಾಡುತ್ತೆ. ಕೆಲವಾನು ದಿನ
ಮಾನದಲಿ ದೂರ ಪಯಣಂ ತೀರ್ಚಿ ನ್ಯೂಯಾರ್ಕ್
ಬಂದರಂ ಸಮಿಾಪಿಸುತಿರೆ ದೂರದಿಂ ಕಣ್ಗೆ
ಕಂಡಿತ್ತೈ ಸುಂದರ ಸುಮನೋಹರ ದ್ವೀಪ ಸ್ತೋಮ !
ಇದೇಂ ನಿಜ ಸ್ವರ್ಗಧಾಮವೊ ಮೇಣ್ ಆಶುಕವಿಯ
ಕಲ್ಪನಾಲೋಕವೋ ಅಥ ಸ್ವರ್ಗ ಲಕ್ಷ್ಮಿಯಿಲ್ಲಿ
ಆವಿರ್ಭವಿಸಿಹಳೊ ಎನಲಾ ಅನನ್ಯ ನಿಸರ್ಗ
ಸೌಂದರ್ಯ ಕಗ್ಗೆಡ್ತವಾಗಿರ್ದುದು ವ್ಯೋಮನಂ
ಸುಖ ಮೂರ್ಛೆಯಿಂದೆ ಮತ್ತಾಗುವೊಲ್ ! ಆಗಳಾ
ಕಲಾವಿದ ಅಚ್ಚರಿಯಲೆಗಳಲಿ ಸಿಲುಕಿ ಕೊಚ್ಚಿ
ಹೋಗುವ ತೆರದಲಿರೆ "ಏನೀ ಸೌಂದರ್ಯ ರಾಶಿ !"
ಎಂದುದ್ಗರಿಸಿದಂ ! ಅಮಿತ ಸಂತಸ ರಸಮುಂಡು !
ಆ ದೃಶ್ಯಮಾನ ಸೌಂದರ್ಯಮಂ ಕಣ್ಗಳೆವೆ
ಚಂಚಲಿಸದೆ ನೋನೋಡಿ ಮನವಂ ತುಂಬಿದಂ !
ಫ್ರೆಡರಿಕ್ ಬಾರ್ದೋಲ್ಡಿ ದ್ವೀಪದಲಿಳಿದು ಸುತ್ತಿ
ಅಡ್ಡಾಡಿ ತಾಣಮಂ ಸಂವೀಕ್ಷಿಸಿದಂ ನೆರೆ
ಮನಃಪ್ರಾಣ ಮೆಚ್ಚಿ ನಲಿಯುವನ್ನ. "ಹೃದ್ದೇಶ
ಆನಂದದಿಂ ತುಂಬಿ ತುಳುಕುವನ್ನ. "ಹಾಂ ! ಇದೇ
ಶಾಂತಿ ಜ್ಯೋತಿರ್ಧಾರಿಣಿ ಸ್ವಾತಂತ್ರ್ಯದೇವಿಯಂ
ಮೂರ್ತಿಗೊಳಿಸಿ ಸಂಸ್ಥಾಪಿಸಲ್ ಸರಿಯಾದ ತಲ !"
ಎನುತೆನುತೆ ಹರ್ಷಚಿತ್ತನಾದನ್ ವರಶಿಲ್ಪಿ !
ಹೃನ್ಮನಗಳ್ ಮೆಚ್ಚಿರಲ್ ಅಮೆರಿಕ ದೇಶೀಯ
ಉನ್ನತೋನ್ನತ ಅಧಿಕಾರೀ ವರ್ಗಮಂ ತಾಂ

→

ಕಂಡು ತನ್ನ ಮನೋಭಿಲಾಷೆಯ ನಿವೇದಿಸಿದಂ.

ಅಮೆರಿಕ ಅಧಿಕಾರ ವರ್ಗಂ ವಿಷಯಮರಿತು
ಪರಮ ತೋಷದಿಂದೊಪ್ಪಿ ಜನಧನ ಸಹಾಯಂ
ಒದವಿಪ ಭರವಸೆಯಿತ್ತು ಉಪಕರಿಸಿತು ; ಅತೀ
ಪ್ರೇಮ–ಸ್ನೇಹಗಳ ಜೆಂಗಟ್ಟು ಬಿಗಿದು. ಆಗಳ್,
ಮಹಾಶಿಲ್ಪಿ ಫ್ರೆಡರಿಕ್ ಬಾರ್ದೋಲ್ಡಿ ತನ್ನಯ
ತಾಯ್ನಾಡಿಗೆ ಪಿಂದಿರುಗಿ ಕಾರ್ಯಾರಂಭದೊಳ್
ಮನವಿಡೆ ಗೆಣೆಯ ಶಿಲ್ಪಿಗಳ್ ಕೂಡಿದರ್ ಭರದಿ
ಅಭೂತಪೂರ್ವ ಕೃತಿಗಸ್ತಿವಾರಂ ಇಡಲ್.
ಲೋಕ ಪ್ರಖ್ಯಾತಿವೆತ್ತ ಯಂತ್ರಜ್ಞ ಆಯ್‌ಫೆಲ್‌ನ
ಆತ್ಮೀಯ ಗೆಣೆತನ ಒಗ್ಗೂಡಿತು ಶಿಲ್ಪಕಲಾ
ವೈಭವೀಕರಣಕೆ. ಜನಶಕ್ತಿ ಧನಶಕ್ತಿ ಕೈ
ಗೂಡಿ ಬರೆ ಪ್ರತಿಮೆಯ ರೂಪುರೇಶೆಯ ನಯನ
ಬಂಧುರತೆ ಜನಮನವ ಆಕರ್ಷಿದುದು ನಿಚ್ಚ
ಸೂಜಿಗಲ್ಲಿನೊಲ್. ಸುಂದರ ಮೂರ್ತಿಯ ಸುಸುಂದರ
ವದನ ಚಂದ್ರಮಂಡಲಕೆ ಉಪಮಾನಮಾದುದು;
ಕಿರೀಟದಲಿ ಪೊದಳ್ದ ಶಪ್ತ ಮೊನಚು ಮುಳ್ಳುಗಳ್
ಶಪ್ತ ಸಾಗರದ ಗುರುತಿನ ಸೂಚಿಯೆನೆ, ಬಲಗೈ
ಎತ್ತಿ ಹಿಡಿದಿರ್ದ ಜ್ಯೋತಿರ್ದಾನಿಯುಂ ಶಾಂತಿಯ
ಸಂಕೇತಮಾಗಿರ್ದು ಎಡಗೈಲಿಹ ಪುಸ್ತಿಕೆ
ಶಾಂತಿ ಮಂತ್ರದಾಮಂತ್ರಣಮೆನಲ್ ಅರ್ಥಮಯಿ
ಶಾಂತಿ ಜ್ಯೋತಿರ್ಧಾರಿಣಿ ಸ್ವಾತಂತ್ರ್ಯದೇವಿಯುಂ
ಅಪೂರ್ವ ಮೂರ್ತಿಯಾದಳೀ ಜಗತ್ ಮಂಡಲದಲಿ !

→

ಮುದ್ದು ಮಾನಿನಿಯ ನಿಜಭಂಗಿ ಯಕ್ಷ ಕನ್ಯೆಯ
ಮಧುರ ಸ್ವರೂಪವಂ ಕಣ್ಮುಂದೆ ತರ್ಪವೊಲ್
ಕಣ್ಗೆಸೆದುದು ಶ್ವೇತವಸನೆಯ ಮಾಧರ್ಯಮಯ
ಭಂಗಿ. ಗೆಣೆಯ ವಿದ್ವನ್ಮಣಿಗಳ ಸಹಕಾರದಿಂ
ಫ್ರೆಡರಿಕ್ ಬಾರ್ದೋಲ್ಡಿ Statue of Liberty
ನಿರ್ಮಿಸಿ ಜಯಭೇರಿ ಹೊಡೆದಂ ಶಿಲ್ಪಕಲೆಯಂ
ವಿಜೃಂಭಿಸಲ್ಕೆ. ಸಾವಿರದೆಂಟನೂರೆಪ್ಪತ್ತ-
ಮೂರರಲಿ ಬೃಹದ್ ಛೈತ್ರದಲಿ ಬಿಡಿ ಭಾಗಗಳ
ರೂಪದಿ ಪಯಣಿಸಿದಳ್ ಶಾಂತಿ ಜ್ಯೋತಿರ್ಧಾರಿಣಿ
ಸ್ವಾತಂತ್ರ್ಯದೇವಿ ನ್ಯೂಯಾರ್ಕಿನ ದ್ವೀಪಸ್ತೋಮದಾ
ಪರಂಧಾಮಕೆ ! ಆಗಳಾ ಜನರ ಸಂಭ್ರಮ
ಸಡಗರಗಳ್ ಗಗನಂ ಮುಟ್ಟುವಂತಿರೆ ಸೂಕ್ತ
ಸಮಯದೊಳ್ ಮೂರ್ತಿಪ್ರತಿಷ್ಠಾನಗೊಳಿಸಿದರ್
ಸಕಲ ಪರಿವಾರದ ಕಣ್ಮುಂತೆ ! ಬಳಿಕಂ ಶಿಲ್ಪಿ
ಗಗನ ಚುಂಬೀ ಮೂರ್ತಿಯತ್ತಣಂ ಕೈದೋರಿ
ಗಂಭೀರಗತಿಯಲಿ "ಗೆಣೆಯರೇ, ನೆಣಗೊಬ್ಬಿನ
ಯುದ್ಧವಾದಿಗಳ ನೆತ್ತರ್ ದಾಹಕಿಂದಿನಿಂ
ದಿವ್ಯ ಜ್ಯೋತಿರ್ಧಾರಿಣಿಯ ಶಾಂತಿಕಿರಣಗಳ್
ತಣಿಸುವೊಲ್ ರಂಜಿಸುತಿಹುದು ಪುತ್ಥಳಿ; ಲೋಕದ
ಲೋಗರ್ ಇದಂ ಕಂಡು ತಣ್ಪು ತಳೆದು ಧನ್ಯತೆ
ಪಡೆದೊಡೆನ್ನಯ ಶ್ರಮ ಸಾರ್ಥಕಂ ! ಮುಂಬರುವ
ಜನಾಂಗಮಂ ಉದ್ಧರಿಸಲೆಂಬುದೆ ಶಿಲ್ಪಿಯ
ಹಂಬಲಂ !" ಎನಲ್ ಆನಂದ ಪೂತ ಹೃದಯ
ಕುಸುಮ ಅರಳಿದುದು ದಳಬಿರಿದ ಪುಷ್ಪಗಳವೊಲ್ !

→

ಪ್ರಸ್ತುತ, ಇಂದಿನೀ ಪುಣ್ಯಕಾಲವಮಾನದಲಿ
ಮುದ್ದು ಮೊಗದ ಸುಮಂಗಳಾಂಗಿಯ ಶತಮಾನದ
ಜನ್ಮದಿನಂ ಸಂಭವಿಸೆ ಸಂಭ್ರಮ–ಸಡಗರಂ
ನಲಿದುವು ಸುರ ಜೋಡಿಯನೆ ವೈಭವ ವೇದಿಯಲಿ !
ದೇಶವಿದೇಶಗಳ ಜನಕೋಟಿ ನೆರೆದುದು ದ್ವೀಪ
ಸ್ತೋಮದಲಿ ! ಸ್ವಾತಂತ್ರ್ಯದೇವಿಯ ದರುಶನವಂ
ಪಡೆಯೆ ಮತ್ತೆಮತ್ತೆ ಶತಮಾನೋತ್ಸವ ಬರಲಿ !
ಎಂದೆನುತ್ತೆ ಶುಭವಂ ಹಾರೈಸುವ ಆಸ್ಥೆಯಲಿ
ಮೇಣ್ ಎಲ್ಲರೆದೆಯುಂ ಶಾಂತಿ ಕಿರಣ ದ್ಯುತಿಯು
ಬೊಕ್ಕು ತಣಿಸಲಿ ಎಂದು ! ಕವಿ ಕಾವ್ಯ ಜಗತ್ತಿಗೆ
ಬಿತ್ತು ತಾನಾದ ಸ್ವಾತಂತ್ರ್ಯದೇವಿಗೆ ನಮನಂ !

— o —

ಬ್ರಹ್ಮ ಸಮಾಜ

ಭವದ ಜಂಜಡಂ ಘನಿಸಿ ಅಮಾಸೆ ಇರುಳಂತೆ
ಮನಃಭಿತ್ತಿಯ ಮೇಲೆ ಕರ್ಪುತೆರೆ ಹರಡಿದೊಲ್
ಗಾಡಾಂಧಕಾರ ಜಡಿ ಕವಿದಿರೆ ಮನಮೌಢ್ಯದ
ಘನ ಘೋರ ವಜ್ರಮುಷ್ಟಿಯಲಿ ಸಿಲ್ಕಿದ ಬಾಳು
ಬದುಕು ದುರ್ವಿಧಿಯ ಕೃಪಾಶ್ರಯ ಪಡೆದಲ್ಲದೆ
ಗತಿಯಿಲ್ಲ. ಸಾವಿರದೆಂಟನೂರಿಪ್ಪತ್ತೆಂಟರ
ಕಾಲಮಾನಂ ಮತಿಮೌಢ್ಯದುಂಬಳಿಯಿಂ
ಬಾಳಿನ ದುರಂತಕೆಂದೇ ಪುಟ್ಟುವುದೆಂದೆಂಬ
ಬೆಮೆಗೊಂಡು ಮೂಢಭಾವದಲಿ ನೆರೆ ಮುಳುಗಿರುತಿರೆ
ಬಾಳಿನ ಬೆಳಕಿಗಾಗಿ ಹಾತೊರೆದರಿಲ್ಲ. ನೆರೆ
ಪೊಸತನವ ಬಯಸಿದವರಿಲ್ಲ. ಪ್ರಜ್ಞಾನದಾ
ಕಿರಣಂಗಳಿಗಾಗಿ ನೆನೆದು ಬೇಡಿದರಿಲ್ಲವೆನೆ
ಬದುಕು ನೀರಸ. ಭಾರಾತಿಭಾರ. ಬಡ ಜೀವನ
ಹರುಕು ಮುರುಕು ಬಂಡಿಯೆನೆ ಇರಿಸುಮುರಿಸಿಲ್ಲದೆ
ಸಾಗುವುದು ಮಸಣಮಂ ಗುರಿಗೊಂಡು. ಅರ್ಥಾತ್
ಕಣ್ಣಿರ್ದು ಕುರುಡಾಗಿ, ಮನವಿರ್ದು ಯೋಚನಾ
ದೂರವಾಗಿ ಮತಿಮೌಢ್ಯದ ಬಾನಲದಿ ಬೆಂದು
ಬೇಯುವ ಪರಿಯಲಿ ಬಾಳೊಂದು ಯಜ್ಞದ ಶಾಲೆ.
ಹೊಸಲ ಹಿಂದೆ ಕಡುಕತ್ತಲೆಯ ಬದುಕು ಪೆಣ್ತನಕೆ,
ಹೊರಗಣ ನಿಡುಗತ್ತಲೆಯುಂ ಯಜಮಾನ ಶಾಹಿಗೆ.
ರವಿ ಮೂಡಿಯುಂ ಕತ್ತಲೆ. ರವಿ ಮೂಡದಿರೆಯುಂ
ಕತ್ತಲೆ–ಕಡುಕತ್ತಲೆ. ದೀಪದ ಬುಡ ಕತ್ತಲೆ
ಎಂಬಂತೆವೊಲ್ ಕತ್ತಲೆ ! ಹೃನ್ಮನಗಳಿಲ್ಲವು

→

ಚೆಂಬೆಳಕು. ಮನೆಯೊಳಿಲ್ಲವು ದಿವ್ಯ ಹೊಂಬೆಳಕು.
ಭಾರತಿಯ ಸಂಸ್ಕೃತಿ ಪರಿಮಳಂ ಜಗದ ಮನ
ಮೆಚ್ಚುವೊಲ್ ಹಿರಿದು. ವೇದ-ವೇದಾಂಗಗಳ್ ತ್ರಿ
ಲೋಕೀಯ ಆತ್ಮ ತುಷ್ಟಿ. ಆದೊಡಿಲ್ಲ ಬದುಕಿಗೆ
ಸಮ್ಯಕ್ ಬೆಳಕು. ಸಮಕ್ ಪರಿಜ್ಞಾನಾವೇಶಂ !

ಶೌಚಾಲಯುಗಳಿದೂರುಕೇರಿಗಳಲಿ ಮನಃ
ಚಿತ್ತಗಳ ಶೌಚದಲಕ್ಷ್ಯನೆ ಎಲ್ಲ ಕಡೆಗಳಲಿ.
ಇಂತೊಂದು ದಾರಿದ್ರ್ಯಮಂ ಕಂಡು ಕಾಣುತ್ತೆ
ಕ್ರೈಸ್ತ ಪಾದ್ರಿಗಳ್ ಸಮಯ ಸಾಧಕತನದಿಂದೆ
ಮುಂದ್ವೈದು ಕ್ರೈಸ್ತ ಮತ ಧರ್ಮಪ್ರಸಾರಮಂ
ಕೈಕೊಂಡರ್ ಉತ್ಸುಕತೆಯಿಂದಲಿ. ಎಲ್ಲೆಡೆಯು
ಪ್ರಚಾರ ಭಾಷಣಗಳ್ ಭರದಿಂ ನಡೆದತ್ತು.
ಹಿಂದೂ ಧರ್ಮಮಂ ಪಳಿದು ನೆರೆ ಕ್ರೈಸ್ತ ಧರ್ಮವಂ
ಪೊಗಳಿ ಪಾಡಿ ಬಡತನಮಂ ತೊಡೆದು ಹೊಸಕುವರೆ
ಕ್ರೈಸ್ತ ಧರ್ಮವಲ್ಲದೆ ಬೇರಾವ ಧರ್ಮವಂ
ನೆಚ್ಚದಿರಿ ಎಂದು ಧೈರ್ಯದಿಂ ಆಸ್ಥೆಯಿಂ
ಪ್ರಚಾರ ರಂಗಕಿಳಿದರ್ ಕ್ರೈಸ್ತ ಪಾದ್ರಿಗಳ್ !
ಮುಗ್ಧಮತಿಗಳಿಗೆ ಬೆಲ್ಲದ ಸವಿಯನಿನಿದಿನಿದು
ತೋರ್ಪವೊಲ್ ಬಲೆ ಬೀಸಿದರ್ ನಮ್ರ ವಿನಮ್ರತೆಯ
ಸೋಗಿನಲಿ. ಅದಂ ನೆಚ್ಚಿ ಮೆಚ್ಚಿದ ಪ್ರಜೆಗಳ್
ಮರುಳಾಗಿ ಮುಂದಾದರ್ ಕ್ರೈಸ್ತ ಧರ್ಮದತ್ತಲ್ ;
ಸ್ವರ್ಗದ ಸುವರ್ಣದ್ವಾರಮಿಲ್ಲಿಯೆ ದೊರೆತವೊಲ್,
ಪರಿಭಾವಿಸಿ ಮಿಷನರಿಗಳ ನಯವಂಚನೆಯಂ

→

ಅರಿಯದೆಯೆ, ಸ್ವಧರ್ಮದ ಆಳವನರಿಯದೆಯೆ
ಹುಚ್ಚಾದರ್ ಮನಮತಿಗೆಟ್ಟವೊಲ್ ! ಆಗಳಾ
ರಾಮಮೋಹನರಾಯನ್ ಬೋಂಕನೆ ಸಿಡಿದೆಳ್ದು
ಪರಮ ಹಿಂದೂ ಧರ್ಮರಕ್ಷಣೆಯಂ ಮನಗೊಂಡು
ಕ್ರೈಸ್ತರ ವಿರುದ್ಧ ಪ್ರತಿರೋಧವ ಹೂಡಿದನ್,
ಸಮಯೋಚಿತ ಪರಿಜ್ಞಾನದಿಂದೊಪ್ಪಿ! ಎಲ್ಲೆಡೆ
ಉಲ್ಲೇಖವಾಹಿ ಹರಿದು, ಪ್ರಚಾರ ಭಾಷಣ
ಕಲಕಂಠದಿಂ ಮೊಳಗಿದುವು. ಹಿಂದೂ ಧರ್ಮವಂ
ಎತ್ತಿ ಹಿಡಿಯೆ; ಮೇಣದರ ಪಾವಿತ್ರ್ಯಮಂದೋರೆ.
ತರುವಾಯಿ, ಭಂಗಿ ಕುಡಿದವೊಲತ್ತವಾಲಿರ್ದ
ಜನರಾಶಿ ನೆರೆ ನಾಣ್ಚಿ ಪೇಸಿ ಪಿಂಜರಿದತ್ತು
ತಂತಮ್ಮ ನೆಲೆಬೆಲೆಯನರಿತು. ಒಡನೊಡನೆಯೇ
ಕ್ರೈಸ್ತ ಜನಸ್ತೋಮ ಸಿಡಿದೆಳ್ದು ವಿಷವಂ ಕಾರ್ದು
ರಾಷ್ಟ್ರೀಯ ಪ್ರಭೃತಿ ರಾಮಮೋಹನ ರಾಯನಂ
ಕೊಲೆಗೈವ ಸಂಚು ಹೂಡಿದರ್ ಎಲ್ಲರೊಗ್ಗಿನಿಂ !
ಹುಲುಶಕ್ತಿ ದೀವಿಯ ಕುಡಿಗೆ ಪುಳುಗಳ್ ಎರಗಿದೊಲ್,
ಹಾಳಾಯ್ತು ಗೋಳಾಯ್ತು ಕ್ರೈಸ್ತ ವಿಷನರಿಗಳಿಗೆ.
ಹಿಂದೂ ಧರ್ಮದ ಮಂಗಳ ವಾರ್ಧಿಯ ಭೋರ್ಗರೆತ
ಮೇಣ್ ಪ್ರವಾಹದ ರಭಸದ ಹುರುಳಂ ಹೆಕ್ಕಿ
ಹಿಂಜಿದೊಲ್ ತೆರೆದು ಮುಂದಿರ್ಕಿ ಜನತೆಯಮನಂ
ತಣಿಸೆ "ಆತ್ಮೀಯ ಸಭಾ" ಎಂಬೊಂದು ಸಂಸ್ಥೆಯಂ
ಸಂಸ್ಥಾಪಿಸಿದನ್ ರಾಮಮೋಹನರಾಯ.ಆ
ಸಂಸ್ಥೆಯೊಳ್ ಸ್ಥಳೀಯ ವಿದ್ವನ್ಮಣಿಗಳ್ ಕೂಡಿ
ವಿಚಾರ ವಿಮರ್ಶೆ, ಪ್ರಚಾರ ಭಾಷಣ, ಕುರುಡು

→

ನಂಬಿಕೆಗಳ ವಿಶ್ಲೇಷಣೆ ಹಿಂದೂ ಧರ್ಮದ
ಪರಾಮರ್ಶೆ ಮೇಣ್ ಬ್ರಹ್ಮಾರಾಧನೆಗಳ್ ನೆರೆ
ಏರಿದೊಲ್ ನಡೆಯುತಿರ್ದುದು ಎಲ್ಲ ಜನರಿಂಗೆ
ಪ್ರವೇಶದ್ವಾರವಂ ತೆರೆದು. ಬ್ರಹ್ಮ ಚಿಂತನೆ
ಮೇಣ್ ಬ್ರಹ್ಮಾರಾಧನೆಯಿಂದೆ "ಆತ್ಮೀಯ ಸಭೆ"
"ಬ್ರಹ್ಮಸಮಾಜ" ಎಂಬ ಪೆಸರ್ವೆತ್ತು ಜನಕೋಟಿಯ
ಕಣ್ಮನ ತೆರೆಸಿ ಧನ್ಯಮಾಯ್ತು ; ರಾಮಮೋಹನ
ರಾಯನ ಸಮಯೋಚಿತ ಪರಿಜ್ಞಾನದಿಂ, ದೂರ
ಕಲಿಕತ್ತೆಯಲಿ ಮಂಗಳ ಮುಹೂರ್ತದೊಳ್ ಭವಿಸಿ.
ಅನೇಕ ಎಡರುತೊಡರುಗಳ ಮಧ್ಯೆ ಸಾಮಾಜಿಕ
ಸುಧಾರಣೆಗೆ ಮನವಿಟ್ಟತಾ ಬ್ರಹ್ಮಸಮಾಜ.
ಮತಿಮೌಢ್ಯ ಪಣ್ತು ಗೈಯುತಿರ್ದ ಅನಾಚಾರ
ಕುವಿಚಾರಗಳ ಭದ್ರ ಕೋಂಟೆಯಂ ಒಡೆಯುವೊಲ್
ಕಾರ್ಯಕ್ರಮಗಳ್ ರೂಪಿತವಾದತ್ತು ಉಲ್ಲಾಸ-
ಉತ್ಸಾಹಗಳ ಸಹಯೋಗದಿಂ ವಿದ್ವನ್ಮಣಿಗಳ್
ಕೂಡಿ. ವೇದ ವೇದಾಂತಗಳ್ ಪುರಾಣಗಳ್
ಪೂಜಾಕ್ರಮಗಳ್ ಅರುಗಾದುವು ಬ್ರಹ್ಮ ಸಮಾಜ
ನಿರೂಪಿಸಿದ ಪ್ರಣಾಲಿಕೆಗಳಿಗನುಗುಣವಾಗಿ.
ಅಂತೆನಲ್, ರಾಮಮೋಹನರಾಯನ ಅನುಪಮ
ಕಾರ್ಯಗತಿ ಸರಾಗಮೆನಲುಂಟೇ ? ಪರಿಸ್ವಚ್ಛ
ಸರೋವರದಲಿ ಮೊಸಳೆಗಳ ಹಿಂಡು ! ಬಾಯ್ದೆರೆದು
ನುಂಗಬರುವ ದಂಡು ! ಎನಿತೆನಿತೊ ಹುರುಳಿಲ್ಲದ
ಭಂಗ ಬನ್ನಗಳ್ ತಲೆದೋರಿದುವು. ಅನುದಿನಂ
ಬೇವುರಸಮುಂಡು 'ಸತಿ' ಪದ್ಧತಿಯ ತೊಡೆದುಬಿಡೆ

→

ಕಡ್ಡಾಯದ ಕಟ್ಟಳೆ ತರಲ್ ಶ್ರಮಪನ್ನೇ
ಶ್ರಮಿಸಿ ಬೆಮರ್ ಬಸಿದು ಹಿಂಡಿ ಕೊನೆಗೊರ್ಮೆ ತಾಂ
ಕೃತಾರ್ಥನಾದನಾ ರಾಜಾರಾಮೋಹನರಾಯ !

ಅಂದು, ಶತಮಾನ ಪೂರ್ವಂ ಮೈದಾಳಿದ ಬ್ರಹ್ಮ
ಸಮಾಜಂ ಜೀವಂತಮಿರ್ದೊಡಿಂದು ಬರ್ದುಕೇ
ಭಾರವಾದೊಲ್ ನಿಧಾನಗತಿಯಲಿರ್ದು ರಾಜಾ
ರಾಮಮೋಹನರಾಯನ ನೆನಪಂ ಮೂಡಿಪುದು.
ಸಮಾಜ ಪರಿವರ್ತನ ಕಾರ್ಯಕ್ರಮಗಳಿಗೆಂದು
ಬೀರಿರ್ದ ಅತ್ಯಾಸಕ್ತಿಯ ದಿವ್ಯ ಪ್ರಭಾವ
ಮಂದಮತಿಯ ಜನಜಂಗುಳಿಯ ಮನವಂನಿನಿತು
ಮುಟ್ಟಲಿಲ್ಲವೆನೆ ನೀರಸ ಪ್ರತಿ ಕ್ರಿಯೆಯಿಂ
ನೊಂದು ಬೇಸತ್ತು ಶತಪ್ರಯತ್ನದೊಲ್ಮೆಯಲಿ
ಜನರ ವಿದ್ಯಾಭ್ಯಾಸದತ್ತ ಮನವಿಟ್ಟನಾ
ಸಮಾಜ ಸುಧಾರಕ–ವಿಚಾರವಾದಿ ರಾಜಾ
ರಾಮಮೋಹನರಾಯ್. ತದನಂತರಂ ಕನ್ಯಾ
ವಿವಾಹದ ವಿರುದ್ಧ, ವಿಧವಾ ವಿವಾಹದ ಪರ
ಅತ್ಯಂತ ಪ್ರಭಾವೀ ಹೋರಾಟ ನಡೆದತ್ತು.
ಆಗಳೇಂ ಮತಿಮಾಂದ್ಯರ ಗದ್ದಲದ ಗಡಣಂ ?
ಎಲ್ಲೆಡೆಯ ಸಾಮಾಜಿಕ ಪಿತ್ಥಗಳ್ ಸಿಡಿದೆಳ್ದು
ಕೋಪದ ಕಿಡಿಗಳಂ ಸತತಕಾರಿ ಎದುರ್ವೆತ್ತು
ನಿಂದರ್ ! ಅಶಾಂತಿಯ ಸುಭದ್ರ ಕೋಂಟೆ ಬೆಳೆದುದು
ಹರೆಗೈಗಳ್ ಚಾಚುತ ಸುತ್ತಮುತ್ತ ಮುಳ್ಳಿನ
ಬೇಲಿಯೊಲ್ ! ಆದೊಡಂ ಬೆದರಿದನೆ ? ಕೋಡಿದನೆ ?

→

ಪಿಂಜರಿದು ಸಂಯೋಜನೆಯಂ ಕೈವಿಟ್ಟನೇ ?
ಕೊನೆವರಂ ಹೋರಿದ ಪರಮ ಧನ್ಯಾತ್ಮ! ಮನುಕುಲ
ಸಂಯೋಜಕ ! ರಾಜಾರಾಮಮೋಹನ ರಾಯ್ !
ನಿನಗೆ ವಿನಮ್ರ ನಮನಂ !

— o —

ವಿಶ್ವ ಚೇತನನೇ

ಎನಿತೆನಿತೊ ಜಡವಸ್ತುಗಳ್ ಜಗದ ನಾಡಿಯಂ
ಮಿಾಂಟುತಿರೆ ಬಲ್ಲಿದರ್ ಮಿಡುಕುವೊಲ್, ನೀನೊಂದು
ಚೌಕಟ್ಟನಲಿ ಲಿಖಿತ ಚಿತ್ರಮೆನೆ ಬೆಳ್ನಗೆಯ
ಬೀರುತಲಿ ಲೋಕದೃಷ್ಟಿಯೊಳ್ ಹೊಂಗನಸಾಗಿ
ತೋರ್ವುದೇನ್ಸೈಸಿರಿಯೋ ಹೇ ವಿಶ್ವ ಚೇತನನೇ !
ಆರಾರೊ ಚಿತ್ರಿಸಿದರ್ ತಂತಮ್ಮ ಚಿತ್ತದ
ನೇರಕ್ಕೆ. ತಂತಮ್ಮ ಭಾವನೆಯ ನೇರಕ್ಕೆ.
ಆ ಚಿತ್ರಮೆ ನೀನೆಂದು ಪರಿಭಾವಿಸಲುಂಟೆ ?
ಬೆಪ್ಪುತನದಿಂ ನಂಬುವುದಲ್ಲದೆ ಗತಿಯಿಲ್ಲ !
ನಿನ್ನನಿಂದು ನಾವರಿವ ಬಗೆಯೆಂತು ಪ್ರಭುವೆ ?
ಎನಿತೆನಿತು ಜಾನಿಸಿದೊಡಂ ಚಿತ್ರಮಿರುವಂತೆ
ನೀನಿಲ್ಲವೆಂಬುದೆನ್ನಯ ಮನಂ. ಇನ್ನೆಂತು
ಭಾವಿಸಲಿ ? ನೀನಿಹೆಯ ಮಾನವನ ರೂಪದಲಿ ?
ಅನಿತು ಸಣ್ಣ ರೂಪನೆ ನೀನು ಹೇಳೈ ಪ್ರಭುವೆ !
ಅಂತುಮಲ್ಲದೆ ಪ್ರಕೃತಿ ರೂಪದಲಿ ಇಹೆಯಾ ?
ನಿನ್ನನಾವ ರೀತಿಯಲಿ ಚಿತ್ರಿಸಲೆನ್ನೆದೆಯ
ಗುಡಿಯಲ್ಲಿ ಹೇ ಎನ್ನಯ ವಿಶ್ವ ಚೇತನನೇ !
ನಿನ್ನನೆನ್ನ ಕಣ್ತುಂಬ ಕಾಣ್ಬೊಂದು ಆಸೆಯು
ಕೊಪ್ಪರಿಗೆಯ ಇಕ್ಷುರಸದೊಲ್ ಕೊತಕೊತ ಕುದಿಯುತಿದೆ
ದಿನದಿನಂ ಎನ್ನನೆ ದಹಿಸಿ ಬಿಡುವ ಮಾಳ್ಕೆಯುಲಿ !
ನಿನ್ನನೆಂತು ಕಾಂಬೆನೊ ಅರಿಯೆನ್ನೈ ಎನ್ನೊಡೆಯ !
ತಲೆಮಣಿದು ಜಾನಿಸುವೆ. ಕೈಮುಗಿದು ಬೇಡುತಿಹೆ
ದೃಢ ಭಕ್ತಿಯಲಿ ಉಷೆಯ ನಸುಕಿನ ಸಿರಿಯೊಳೆದ್ದು.

→

ಅಣುತೃಣಗಳಲಿ ನೀನಿಹೆ ಎಂಬರ್ ಬಲ್ಲರ್,
ಆದೊಡೆಲ್ಲಿಯುಂ ನೀಂ ಕಾಣದಿಹೆ ಕಂಗಳಿಗೆ.
ಪಚ್ಚಗಿಡದ ಪಲ್ಲವ ಪಾಣಿಗಳಲಿ ಅರಳಿಹ
ಪೂಗಳಂ ನೀನೆಂದು ಭಾವಿಸಲೆ ಪ್ರಭುವೇ !
ಗಗನ ನೀಲಿಯಲಿ ಮಿನುಗುವ ತಾರೆಗಳ ಮಧ್ಯೆ
ಉಜ್ವಲಿಪ ನೇಸರೇ ನೀನೆಂದು ತಿಳಿಯಲೇ ?
ಈ ಜಗದೊಳೆಲ್ಲಿಯು ನಾ ನಿನ್ನ ಛಾಯೆಯಂ
ಕಾಣೆನ್ನೈ. ಹೇ, ದಯಾಘನ ? ನೀನೇ ಮೈದೋರೈ !
ನಾನಳಿದು ಮಣ್ಣ ಹುಡಿಯಲಿ ಮಣ್ಣಾಗಿ ಸೇರುವ
ಮುನ್ನ ರಾಗರಸಧಾರೆ ಹರಿಯಲಿವು ಹೃದಯ
ಬನದಿಂ ತವ ವರಪಾದ ಪಂಕೇರುಹಗಳಿಂಗೆ.
ಮೊಲ್ಲೆಬನದಲಿ ಅರಳು ಮೊಗ್ಗೆ ಬಿರಿಯುತಿರೆ ನೆರೆ
ಕಂಪುಗುತ ಮನಮೋಹನೀಯ ವೈಖರಿಯಲ್ಲಿ
ನೀನೇ ಪರೋಕ್ಷ ಪ್ರಭುವೆಂದು ಪರಿಭಾವಿಸಲೆ ?
ಇಂದೆನ್ನ ಭ್ರಮನಿರಸನಗೊಳಿಸು ಸ್ವಾಮಿಯೇ !
ನಿನ್ನನರಿತು ಮನತುಂಬಿ ಭಾವಾಗ್ನಿಯ ಶಾಂತಿ
ರಸಾಬ್ಧಿಯಲಿ ಮುಳುಗಿಸಿ ಪ್ರಜ್ಞಪ್ತಿ ಪ್ರಜ್ಞೆಯಾ
ಜೆಲ್ವರಳುವಂತೆನುಗೊಳಿಸೈ ಪ್ರಭುವೇ !
ಕೈಮುಗಿದು ಕಣ್ಮುಗಿದು ಕಾಲ್ವಡಿದು ಬೇಡುವೆನ್ನೈ
ಹೇ ವಿಶ್ವಚೇತನನೇ !

— o —

ಜೈಸಲ್ಮೇರ್

ಬೇಲ ಬನಕೇ ಫೂಲ ಫಲ
ಗುಲ್‌ಶನ್ ಮೇ ಕ್ಯಾರೀ ಹೈ !
ಅಪನೇ ಬಾಯೇಂ ಹಾಥೀ
ಲಾಲೂ ಅರ್ಜಕಿ ವಕ್ಸೀಸ್
ಬಾರೀ ಸಾಲನೇ ಇಮಾರತ್
ಬನದಾಯಿ ಹೈ

ಅಂದು, ಉರ್ದು ಕವಿಯೈತರೆ ದೂರ ದೂರದಿಂ
ಜೈಸಲ್ಮೇರ್ ಅರಮನೆಯ ದರ್ಶನ ಭಾಗ್ಯಮಂ
ಬಯಸಿ. ಪ್ರಪ್ರಥಮ ನಯನಾಕರ್ಷಿತನಪ್ಪ
ಆಶುಕವಿಯೊಳ್ ರೋಮ ಹರ್ಷಕ ಭಾವನೆಯುಕ್ಕಿ
ವಿಸ್ಮಯವಿಮೂಕ ಮೌನದಿಂ, ಆನಂದ ಪೂತ
ಮನದಿಂದುಲಿದನೊಂದು ಆಶುಕವಿತೆಯನುರ್ದು
ಭಾಷೆಯಲಿ ಎನಲ್ಕಾ "ಬೇಲ ಬನಕೇ ಫೂಲ ಫಲ"
ಚೆಂಕೃತಿಯು ತೆಕ್ಕನೆಯೆ ಮೂಡಿದುದು ಹೃತ್‌ಬನದ
ಕೋಕಿಲೆಯು ಮೈಮರೆತು ಜಗಮರೆತು ಪಾಡಿದೊಲ್ !
ಆಗಳವನ ಆತ್ಮಸಂತೃಪ್ತಿಯಿಂ ಹೃದಯದ
ಕಲಶ ತುಂಬಿ ಕೋಡಿವರಿದ ಗೀತೆ ಇನ್ನೆಬರಂ
ಚಿರಂತಂ! ಭಾವ ಬಂಧುರತೆಯುತ್ಕಂಠದುಲಿ
ತಾನೈಸಿ; ಎದೆಯಂತರಾಳಕಿಳಿವೊಲ್ ಸತ್ಯ
ಸುಂದರಂ !

ರಾಜಾಸ್ಥಾನೀಯ ಮರಳುಗಾಡಿನ
ರಜತಪಟ್ಟದ ಅನನ್ಯ ವಿಸ್ತಾರದಲಿ ನೆಲೆ

→

ಗೊಂಡು ವಿಜೃಂಭಿಸುವ ಜೈಸಲ್ಮೇರ್ ಮಂದಿರ
ಸ್ತೋಮದಲಿ ವಾಸ್ತುಶಿಲ್ಪದ ವೈಭವೋಪೇತ
ಕರಕುಶಲ ಕಲಾಕಲೆ ಹೊನ್ನಶ್ರೀ ತೋಂಟದಲಿ
ಪೊದಳ್ದ ನವರತ್ನಗಳಂತೆವೊಲ್ ಸಮೃದ್ಧಂ !
ಘೋರಿ, ಖಿಲಜಿ, ಮೊಗಲ್, ಬಲೂಚಿಗಳ ಆಕ್ರಮಣ
ಕಾಲದೋಳ್ ಕ್ರೂರ ಶತೃಗಳ ಕೂರ್ಮೆಯ ಬೇವು
ರಸಮುಂಡ ಜೈಸಲ್ಮೇರ್ ಇನ್ನೆಬರಂ ಖಿಲ-
ಮಾಗದೊಲ್ ನೆಲೆನಿಂದುದು ಭಾರತದ ಸತ್ಕೀರ್ತಿ
ದ್ಯೋತಕಂ ಮೇಣ್ ಮಂಗಳ ದ್ರವ್ಯ ಲಕ್ಷಣಂ !
ಶತಮಾನ ಪೂರ್ವದೊಳ್ ಒಡಮೂಡಿ ಬಿಮ್ಮನೆ
ಮೈದಾಳ್ದು ಕಾಲದೇಶಗಳೆಲ್ಲೆಯಂ ಮೀರಿ
ಶೃಂಗಾರ ಕಲಶದೊಲ್ ವಿಜೃಂಭಿಸಿ ತ್ಯಾಗದ
ಭೋಗದ ನೆಲೆಮನೆಯ್ಯೆಸಿ ಸುಖದುಃಖಗಳನತಿ
ಭರಿಸಿಯುಂ ಕಣ್ಗೆಡ್ಡಮಾಗಿಯರ್ಪ ಕಲಾಶ್ರೀ !
ನಗರಿಯ ಅನನ್ಯ ಅನುಪಮ ಮಹಲ್‌ಗಳ ಭವ್ಯ
ಸ್ವರೂಪಮಂ ನೋಡಿ ಕಣ್ತುಂಬಿ ಸ್ವರ್ಗೀಯ
ಇಂದ್ರಲೋಕಮಂ ಪೊಕ್ಕವೊಲ್ ಅತ್ಯಾನಂದ
ರಸಜ್ಞತೆಯುಂ ಘನಿಸಿರೆ ವಿಹಾರ ರೋಚಕಂ !

ಮೂಡುವೆಟ್ಟನ ಮುಡಿಯ ಕಿರಣತಪನ ಕೋಮಲ
ಕನಕಕಾಂತಿ ಪಸರಿಸೆ ನೋಡಾ ಜೈಸಲ್ಮೇರ್ !
ಸೌಂದರ್ಯ ರಾಜಿಯುಂ ಸುಸುಂದರಮುಪ್ಪುವೊಲ್
ದಿನೋತ್ಕರ್ಷತೆಯ ವೈಭವಂ ಮಾನಸ ಹರ್ಷಕಂ !
ಮತ್ತಾಗಳ್ ಹೃದ್ರಂಗದಲಿ ಭಾವುಕತೆಯುಂ

→

ಘನಿಸಲ್ ಸುಖ ಮೂರ್ಛೆಗೆ ಸಂದವರೆನಿತೊ ಮೇಣ್
ಮಾತುಡುಗಿ ಮೂಕಮೌನಿಯಾದವರೆನಿತೊ ಎನಲ್
ಕಲಾಶ್ರೀಯ ಮಂಗಳ ಮಂಡಲ ಜೈ ಸಲ್ಮೇರ್ !
ಅರಮನೆಯ ಭದ್ರಕೋಟೆಯ ಶಿರೋದೇಶದಲಿ
ಸ್ಥಿರಗೊಂಡು ಮುಗಿಲಂ ಮುದ್ದಿಡುವ ಬೃಹತ್ತಮ
ಬುರುಜುಗಳ್ ಹಲಕೆಲಂ ಮಾತ್ರಮೆನೆ ಪುಸಿಯಕ್ಕು.
ಜ್ಞಾನ ಸಿರಿಯನೊರ್ಮೆಗೆ ಬೆಕ್ಕಸಬೆರಗು ಗೊಳಿಪ
ಮಹತ್ತರ ರೂಪಿಂ ಮೈದೋರ್ದ್ವ ತೊಂಭತ್ತೇಳು
ಬುರುಜುಗಳ. ಅಲಂಕರಣಮೆನೆ ಜಾನಿಸು ಮನವೆ !
ಕಗ್ಗಲ್ಲುಗಳ ಕೋಂಟೆಯ ಒಳಾಂತರದಲಿ ಚಿರ
ರಾಮಣೀಯಕ ಅರಮನೆಗಳ ಶೃಂಗ ದರ್ಶನಂ !
ಬಾದಲ್ ಮಹಲ್, ವಿಲಾಸ್ ಮಹಲ್, ಜನಾನ ಮಹಲ್
ಜವಾಹರ್ ಮಹಲ್, ರಂಗಮಹಲ್, ರಾಜ ಮಹಲ್
ಮೇಣ್ ಪಟುವಾ ಮಹಲ್ ಮುಂತಪ್ಪ ದರ್ಶನೀಯ
ಭಾಗಗವಿಭಾಗಗಳ ಅಪೂರ್ವ ಸಂಗಮದ ನೆಲೆಯಲಿ
ಬಹುಮೂಲ್ಯ ಕುಶಲಕಲೆ ಪ್ರಕೃತಿ ವೈಭವದ
ಮನೋಹರತೆಗೆ ಹೊಯ್‌ಕಯ್‌ಯಾದವೊಲ್ ಅಪೂರ್ವ
ಬಂಧುರತೆಯಿಂ ಮಂತ್ರ ಮುಗ್ಧಮಪ್ಪುದು ಮನಂ.
ಮಳೆಗಾಳಿ ಬಿಸಿಲುಗಳ ಶತಮಾನದ ಉಂಬಳಿ
ಮೈದುಂಬಿ ರಜತ ಸೈಕತ ರಾಶಿಯಲಿ ನಿಗುರಿ
ನಿಂತು ಧವಳಕೀರ್ತಿ ಕಳಸವೊತ್ತ ಮಹಲ್‌ಗಳಲಿ
ಕರಕುಶಲಕಲೆ ವಾಸ್ತುಶಿಲ್ಪ ಕಲೆಗಳೆಂತಂತು
ಚಿತ್ರಕಲೆಯ ಸತ್ ಸಂಪದಂ ಕೋದು ಕಣ್ಮನ
ಸೆಳೆವ ಉನ್ನತೋನ್ನತ ಕೃತಿಗಳ ಸಂಗರಂ!

ವಿಜ್ಞಾನದ ಕಿಡಿ ಮೂಡದ ಕಾಲಮಾನದಲಿ
ಜೀವನದಿ ರಜತ ಸೈಕತ ರಾಶಿಯ ಪಟ್ಟದಲಿ
ನೆಲೆಗೊಂಡು ಕನಸಿನ ನಲ್ ಗೋಪುರ ಕಟ್ಟುವೊಲ್
ಕಟ್ಟಿ ನಿಜ ರೂಪಕಿಳಿಸಿದ ಮನೋರಮ ಶೈಲಿ !
ಶಿವನ ಕೈಲಾಸದ ದರುಶನಮೋ ಅಥ ಇಂದ್ರ
ನಗರಿಯುಂ ಧರೆಗಿಳಿದುದೋ ಮೇಣ್ ವಿಷ್ಣುವಿನ
ವೈಕುಂಠದ ಪ್ರತಿಕೃತಿಯೋ ಎನೆ ರಸಪೂರ್ಣ
ದೃಷ್ಟಿಯುಂ ಭಾವ ಸಮಾಧಿಗೆ ನೆರೆ ಸಲುವತೆರಂ
ವರ್ಣನಾತೀತಮಾ ಜೈಸಲ್ಮೇರ್ ಸ್ವರ್ಗಧಾಮ !
ಕವಿಯ ರಸನುತಿಗೆ ಕಣಕಣಂ ಸ್ಪಂದಿಸುವ
ಮಹೋನ್ನತ ಮಹಲ್‌ಗಳ ಸುರಸುಂದರ ಶ್ರೇಣಿ !

— o —

ಕವಿತಾ ಮೋಹಿನಿ

ಓ ಎನ್ನೊಲವಿನ ಮನಮೋಹಿನಿ ಕವಿತಾನನೆ !
ನೀನಂದು ನಲವಿಂ ನಲಿನಲಿಯುತ ಬಂದೆನ್ನ
ಹೃತ್ ಕಲಶವ ತುಂಬಿದೆ. ಪ್ರೇಮಮಯ ದೀಪ್ತಿಯ
ಬಲವಂದು ಉರಿಸಿ ಹೃತ್‌ಕಲಶದ ತೀರ್ಥಮಂ
ತೈಲವಾಗಿಸಿದೆ. ಎಂದುಮೆಂದಿಗು ಪ್ರದೀಪ್ತಿ
ಆರದಿರಲೆಂದು. ಬಾಲ್ಯದ ಜಡಮತಿ ಭರಿಸಿತೆ
ನಿನ್ನಯ ಬಹುಮೂಲ್ಯ ವರದಾನಂ ? ಅತಿಮುಗ್ಧ
ದುಗ್ಧಮತಿಯ ಜಡತ್ವ ನಿನ್ನನುಂ ನಿರ್ಲಕ್ಷಿಸಿ
ನಿರಾಗ ನಿರಾಸಕ್ತಿಗಳಿಂದಲಿ ನಿನ್ನನ್ನೆ
ದೂರೀಕರಿಸಿದೆ ಧೂರ್ತತನದಿಂ! ಮಣ್ಣಾಡಿ
ಮರವಟ್ಟೆ. ಜಗಮರೆತು ಜಡವಾದೆ. ಕಳೆದುದ್ದೈ
ಕಾಲಮಾನ ಕೈಗೆಟುಕದೊಲ್ ವ್ಯರ್ಥ ಗತಿಯಲಿ.
ಆದೊಡೇಂ ನೀಮರೆಯಲಿಲ್ಲ; ಕನಿಕರಿಸಿ ಬಂದೆ.
ಕಾರುಣ್ಯಪೂರ್ಣ ಮನದಿಂದೆನ್ನಲೆತ್ತಲ್ಯೈದೆ?
ಎನ್ನಲಕ್ಷವ ನಿರ್ಲಕ್ಷಿಸಿ ಧಿಕ್ಕರಿಸಿ ಎನ್ನ
ಸಂಸ್ಕರಿಸಲೆಂದೈದೆನ್ನಯ ಎರ್ದೆ ಕಲ್ಗುಡಿಗೆ.
ಭವದಿಯ ಸುಡು ಬೆಂಕೆಯಲಿ ಬೇಯುತಲಿರ್ದೆನ್ನ
ಸಂತೈಸಿ ಸಮಾಧಾನಿಸಿ ದೂರ ಗಮ್ಯದೊಳ್
ಉರಿವ ಉರಿಕಿಡಿಯೆಡೆಗೆ ಬೊಟ್ಟು ಮಾಡಿದೆಯಲ್ತೆ ?
ಹಗಲುಗನಸಿನೊಲ್ಯೈದು ತನುಮನವ ಪುಟಪುಟಸಿ
ಕಾವ್ಯರಸವೂಡಿಸಿದ ದಿನಗಳ ಮರೆಯಲುಂಟೆ ?
ಹೇ, ಎನ್ನ ಹೃದಯ ನಿಧಿಯೆ ! ನಿನ್ನೊಡನೆನ್ನಯ
ಸತ್ ಸಾರವತ್ತಾದ ಸಾಂಗತ್ಯ ಮುಂಬೆಳೆದು

→

ಬಾಳುತ್ತಿರಲೆಂದೆಂದು ತುಂಡುಗಡಿಯುದವೊಲ್ !

ಕೇಳಿಲೆ, ಮಮ ಹೃದಯದ ಕವಿತಾ ಮೋಹಿನಿಯೆ !
ನಾನಂದು ನಿನ್ನ ನೆಲೆ ಬೆಲೆಯರಿತೆನಿಲ್ಲವೆನೆ
ಬಾಯಿಬಾರದು. ನಾಲಿಗೆ ಹೊರಳದು, ಮನವಿಂದು
ನೆನೆನೆನೆದು ಪರಿತಪಿಸುತಿದೆ ಕಳೆದ ಕಾಲಮಂ
ಅನುದಿನ. ನಿನ್ನಮಲ ಪ್ರೇಮಮಂ ಮನಗೊಂಡೆನಿಲ್ಲ.
ಬೌದ್ಧಿಕ ಕರಂಡವ ಜಡಿಮುಚ್ಚಿರೆ ನೇಹಮಂ
ಕಿಂಚಿತ್ ಅರಿತೆನಿಲ್ಲ. ಇಂತೊಂದು ಘೋರತರ
ದುರಿತವೆನ್ನ ಅಲಕ್ಷಿಸಿದ ಮಹಾ ಮಹಿಮಾನ್ವಿತೆ !
ಅಕ್ಕರದ ಅಕ್ಕರೆಯುಮಿಲ್ಲದೆ ಬರಿದೆ ಗಳಪಿ
ಪೊಳ್ತು ಕಳೆದೆ ನಿನ್ನಂ ನಾನೇ ಮರೆತು ಬಾಳ್ದೆನ್.
ಕಳೆದೆನೆನ್ನ ಸಂಜೀವನಮಾನಮಂ ವ್ಯರ್ಥ
ಕನಸಾಗಿ ! ಇಹ ಪರಗಳಿಗೆಟುಕದವೊಲ್ ! ಬಳಿಕ
ನೀಮಿಂಚಿ ಬಂದೆ ಬಾಳಿಗೆ ಬೆಳಕಾಗಿ. ನಿನ್ನ
ಅಂಗ ಪ್ರತ್ಯಂಗಗಳಲಿ ಪೊಣ್ಮಿವ ಶೀತಲಸ್ನಿಗ್ಧ
ಲಹರಿಯುಂ ಧುಮುಕಿತೆಮ ಹೃತ್ ಭಂಢಾರಕ್ಕೆ.
ಆವಾವ ಜನ್ಮದ ಪರಿಪುಣ್ಯದ ಪ್ರತಿಫಲ
ಘನಿಸಿದುದೊ ಎನೆ ಅಗ್ನಿಕುಂಡದಿಂ ಸಿಡಿದೊಗೆದ
ಕಿಡಿಯೊಳೆರಗಿದುದು ಆನರಿಯದೊಲ್ ! ನಾ ನಿನ್ನ
ಅಲಕ್ಷಿಸಿದೊಡಂ ನೀಗೈದುಪಕಾರವನೆಂತು
ಭರಿಸುವೆನೊ ಅದರಿಯೆಂ. ನಿನ್ನ ನುಡಿ ಸೇವೆಯನು
ಸರ್ವತ್ರಗೈದು ಸಲಿಪುದಲ್ಲದೇನಿಹುದು ಭವದಿ ?
ನಿನ್ನ ರಾಗಮಾಲೆ ಧುಮುಧುಮಿಸೆ ಎದೆಯಾಳದಿ

→

ಮಿಣ್ಣನಾಲೈಪೆನಿಂದು ಪರಮ ಲಕ್ಷ್ಯದಿಂದಲಿ.
ರಾಗತಾಳಲಯಗಳಿರಲಿ ಇಲ್ಲದಿರಲಿ ತವ
ಪಾದ ಸೇವೆಯ ನೇಮದಲಿ ಭರಿಸುವೆನೆನ್ನಯ
ಮನದಳಲಂ ಹೇ, ವರ ಕವಿತಾ ಮೋಹಿನಿಯೆ !
ನೀನೆ ತಾಯಿ ತಂದೆ ನೆರೆ ಬಂಧುಬಳಗಮೆಲ್ಲ.
ಎನಗಿನ್ನು ಬೇಕಾವುದು ನೀನೆ ತಿಳಿದು ನೋಡು.

ನಿನ್ನ ಸಹವಾಸದಿಂದೆನ್ನ ಜೀವನಕಿಂದು
ಬೆಳ್ಳಂಬೆಳಕು ಕ್ಷಣ ಅನುಕ್ಷಣ. ಮತ್ತದರ
ಕಿಡಿಕುಡಿ ಎದೆಗವಿಯಂ ಬೊಕ್ಕು ಉರಿಸದೆ ಜ್ಯೋತಿ
ಕುಡಿಯಂ ? ತವ ಕೃಪೆಯ ಮಧುರ ಚಣಮಂ ಆಸೆ
ಆಕಾಂಕ್ಷೆಗಳಿಂ ನಿರುಕಿಸುತಿಹೆನ್ ದಿನದಿನಂ
ಹೇ ಎನ್ನ ಪರಮೋಚ್ಚ ನಿತ್ಯ ಸಂಗಾತಿಯೇ !

— o —

ಅಚ್ಛೋದ ಸರೋವರ

ಪೊಡವಿಯೊಳ್ ಲೋಕೋತ್ತರ ಶೈಲಿಯೈಸಿರಿಯಲ್ಲಿ
ಮೈದಾಳಿ ಸಾಕ್ಷಾತ್ ಶಿವಶಂಕರನ ಪ್ರತೀಕ
ಎಂಬವೊಲ್ ಪ್ರಚಂಡ ವೇಶದಿಂ ಪ್ರಚಂಡ
ಶಕ್ತಿಯಿಂ ಗಗನಚುಂಬೀ ವೈಭವದಿಂ ಹಿಮ
ಮುಕುಟ ರೋಚಿಯಂಬುಧಿ ವೀಚಿವೀಚಿಯ ರಾಚಿ
ಅದ್ಭುತ ರಚನೆಯುನ್ನತದಲಿ ಮಾಲೆತುದು ಭುವನ
ಮೋಹಕ ಸುಧೆಯಲಿ ಮಿಂದ ಗಿರೀಶ ಹಿಮಾಲಯ !
ಅತ್ತಿತ್ತ ಎತ್ತೆತ್ತಲ್ ಹಬ್ಬಿ ಹರವಿ ಭೀಮ
ಭೀಷಣ ಗತಿಯಲಿ ಭರತ ವರ್ಷದ ಗಡಿಗಾಯ್ವ
ಪರ್ವತಗಳ ರಾಜಾಧಿರಾಜ ಸಿರಿ ಹಿಮವಂತ !
ಸತ್ಯಂ-ಶಿವಂ-ಸುಂದರಂ ದಿವ್ಯ ಪರಿವೇಶಿ !
ಹಿಮಾಚ್ಛಾದಿತ ಶಿಖರಗಳ್ ರವಿಕಿರಣ ಪ್ರತಿ
ಫಲನದಿಂ ಥಳಥಳಿಸೆ ರಜತ ಮುಕುಟವ ಹೋಲಿ !
ಎಡೆಎಡೆಯಲಿ ತಿಳಿನೀರಿನ ಚಿಲುಮೆಗಳ್ ಉಕ್ಕಿ
ನಿಮ್ನತೆಗಿಳಿದು ಕಂದರಕೆ ಧುಮುಕಿ ಭೋರೆಂದು
ಮೊರೆದು ನೊರೆ ಮುತ್ತ ರಚಿಸಿ ಹಾರಿಸಿ ಝುಳಝುಳಿಸಿ
ಗುಳುಗುಳಿಸಿ ಇಳಿಯುತಿರ್ದುವು ರಸಾಬ್ಧಿಯ ತಲಕೆ.
ವೆಳ್ಳಿಯ ಝರಿ ಎಂಬಂತೆವೊಲ್ ! ಪಚ್ಚೆ ಪಸುರಿನ
ಪಟ್ಟುಡೆಯನುಟ್ಟ ವನವಾರ್ಧಿ ಕುಸುಮಕೋಟಿಯ
ತರತರದ ಸಿಂಗರದ ಹೊರೆಯಲಿ ಸುಗಂಧವದು
ಇಂದ್ರಿಯಗಳ ಕಲಸಂ ತುಂಬುತಿರೆ ಸ್ವರ್ಗವೇ
ಧರೆಗಿಳಿದವೊಲ್ ಸತ್ಯಸುಂದರಂ ಗಿರೀಶನ
ಪದತಲಂ. ಎಲ್ಲೆಲ್ಲಿಯುಂ ಗಂಧ ಸೌಂದರ್ಯ

→

ಮಾಧುರ್ಯಂ ಭಾರತಿಯ ಸೌಭಾಗ್ಯದ ಸುಮಂಗಳ
ತಿಲಕದೊಲ್ ಪಚ್ಚಪಸುರಾಂತ ಶೋಭಾ ಶೈಲಿ !
ಹಿಮವಂತನ ಪದತಲದ ಸಾನು ಪ್ರದೇಶದಲಿ
ಪಸರಿಸಿದ ಮಹಾಪ್ರಸ್ಥ ಭುವಿಯೊಳ್ ನೆಲೆಗೊಂಡು
ಅಪರಿಮಿತ ನೆಲವನಾಕ್ರಮಿಸಿ ತುಂಬಿ ತುಳುಂಕಿ
ಕೋಡಿವರಿವ ಹಾರೈಕೆಯೊಳಿರುವೊಲ್ ಅಲ್ಲಲ್ಲಿ
ಸಣ್ಣಪುಟ್ಟ ಅಲೆಗಳ್ ತುಳುಕುತಿವೆ ತಂಗಾಳಿ
ಅಲೆಪದಿಂ. ಸೌಂದರ್ಯ ಶಾಲಿನಿಯೆನೆ ಮೆರೆದಿಹ
ಮಹಾಮಹಿಮಾಮಯ ಅಚ್ಛೋದ ಸರೋವರ !
ಭರತ ಖಂಡದ ಪುಣ್ಯವೆ ದ್ರವಿಸಿ ನಿಲ್ದವೊಲ್,
ಹಿಮವಂತನ ಶ್ರೀದಯೆಯೆ ಕರಂಗಿ ಹರಿದೊಲ್,
ಭಗವಂತನ ಪರಮಾಶೀರ್ವಾದವೆ ಜಲಧಿಯ
ಮಾಳ್ಕೆಯಲಿ ನೆಲೆಗೊಂಡವೊಲ್, ದೇವ ಲೋಕದಿಂ
ಐತಂದ ಅಪ್ಸರ ನಾರಿಯರ ನೃತ್ಯದ ಧಿಮಿಧಿಮಿ
ಪದ ತಾಡನದಿಂ ಬಿರಿದ ಭುವಿಯಿಂ ಜಲವುಕ್ಕಿ
ನಿಂದವೊಲ್, ಗಿರಿಜೆಯ ಘನವೆತ್ತ ತಪಸ್ಸೆ ಲೋಕ
ಕಲ್ಯಾಣಕೆ ಜಲನಿಧಿಯಾಯ್ತೊ, ಶಿವನಭಿಷೇಕ
ಹರಿಸಿದ ಪವಿತ್ರ ಜಲಮೆ ಮಡುವಾಯ್ತೊ ಎನಲ್
ಸುಗಂಧಿತವಾ ಅಚ್ಛೋದ ಸರೋವರ ಕ್ಷೀರ !
ವೆಳ್ಳಿಗಡಲ ಹೊನ್ ಜೊನ್ನದ ಶೋಭೆಯಿಂದಲೆಪ
ಅಲೆಗಳ್ ಮೆಲುಮೆಲ್ಲನೆ ತುಳುಂಕುವ ಮಹಾ ಜಲ
ರಾಶಿಯಲಿ ಕನ್ನೈದಿಲೆ, ಹೊಂದಾವರೆ ವೆಳ್ಳಿಯ
ವರ್ಣರಂಜಿತಮಾದ ಬೆಳ್ದಾವರೆ ಮತ್ತಾ
ಚಿಟ್ಟಾಣಿ ಮುಂತಪ್ಪ ಕೋಮಲ ಕಮಲರಾಜಿ

→

ದಟ್ಟೈಸಿದ ಅಚ್ಛೋದ ಸರೋವರ ಎಣೆಯಿರದ
ಸಂದೃಶ್ಯಮಾನ ಸೌಂದರ್ಯ ಕಣ್ಮನಗಳಂ
ಸೆಳೆದತ್ತು ಸೃಜಿಗಳ್ಗಿನೊಳ್ ! ತೀರದಂಚಿನ
ಸಾಲಿನಲಿ ಬೀಜಮಂ ಬಿತ್ತಿ ಬೆಳೆದಂತೆವೊಲ್
ಪುಟ್ಟಿ ಮುಂಬೆಳೆದು ಸಾಲುಸಾಲೊಡೆದ ಕೇದಗೆ
ಗಿಡಗಳೊಟ್ಟೈಸಿ ಪಿಂಡಿಲಿನೆ ಬೆಳೆದುದು. ಮೇಣ್ಮುಡಿ
ಕುಡಿಗಳಲಿ ದೀಪ ಜ್ಯೋತಿಯೊ, ಚಿನ್ನದಲುಗಿನ
ಖಡ್ಗಗಳ ಜೋಡಣೆಯೊ ಎಂಬವೊಲ್ ಕೇದಗೆಯ
ಪೂಗಳಿಂ ಪರಿಶೋಭಿತಂ. ಮಂದ ಮಾರುತನ
ಮುದ್ದಿನಿಂ ಮುದಗೊಂಡು ತರಂಗಿತ ವಾರಿಯಲಿ
ಅಲ್ಲಲ್ಲಿ ತೇಲ್ವ ಚಿಣ್ಣಚಿಣ್ಣನೆ ಗುಳ್ಳೆಗಳ್
ಮುತ್ತಿನ ಮಣಿಗಳಂತೆ ಮೆರೆದತ್ತು ಸರೋವರ
ವಿಸ್ತಾರದಲಿ. ಬಿಳಿಯ ಹಂಸೆ ಮೇಣ್ ಕರ್ಪಿನ
ಹಂಸೆಗಳ್ ಜೋಡಿ ಜೋಡಿಯಲಿ ತೇಲುತಲಿರಲ್
ಮೈಗೆ ಮೈಯೊತ್ತಿ ಪ್ರೇಮಾಲಾಪದಿಂ ಕೊರಳ್
ಬಿಗಿವಂತೆ, ತೆಕ್ಕನೆಯೆ ಕ್ರೇಂಕರಿಪ ಕ್ರೇಂಕಾರ
ಕರ್ಣಕುಂಡಲಿಯಂ ಪುಗುತಂದುದು ಮೈಮನಂ
ಪುಳಕಗೊಳ್ವ ತೆರದಲಿ. ಜಲರಾಶಿಯಾಳದಲಿ
ಒಳಗೊಳಗೆ ಧುಮುಧುಮಿಸುವ ಸುಳಿಗಳ್ ಸುಳಿಸುತ್ತಿ
ನೊರೆಯೇಳಿಸಿ ತಟದಂಚಿಗೆ ಫೇನಪುಂಜಮಂ
ಒತ್ತಿಯೊತ್ತಿ ಬೆಳ್ನೊರೆ ಮುತ್ತುಗಳ ಸುಸುಂದರ
ಶೈಲಿ ಪಾರಾಪಾರದಲಿ. ಸುತ್ತುಮುತ್ತಿನೊಳ್
ದಟ್ಟೈಸಿದ ವನಧಿಯಲಿ ಕಾಮುಳ್ಳಿ ಕಲವಿಂಕ

→

ಕೋಗಿಲೆ ಗಿಳಿಗಳುಲಿಯದು ಮುಟ್ಟುವುದೆನೆ ಕರ್ಣ
ಗಹ್ವರಂ ಇಂಪಾಗಿ ವಿಜನ ನೀರವತೆಯುಲಿ.
ಕುಡಿಗಣ್ಣ ನೋಟವಂ ನೆಟ್ಟು ಕೀಳದೆ ನೋಳ್ಪ
ಲೌಕಿಕರ ಹೃನ್ಮನವ ಆನಂದ ಸಂಸ್ಥಿತಿಯು
ಮಧುವನದ ಕೋಂಟೆಗೊಯ್ಯುವುದು ತಾನಲ್ಲದೊಲ್.
ತಾವರೆಯ ಕರಂಡದೊಳ್ ಬಂಡುಂಡು ಬಾಯಾರ್ದ
ಭ್ರಮಂತಭ್ರಮರಂಗಳ್ ತಾವರೆಯ ಪಚ್ಚ
ಪತ್ರಗಳ ಅಂಚಿನಲಿ ಸಾಲ್ಗೈದು ಕುಳ್ಳಿರ್ದು
ಹೀರುತಿರೆ ಜಲಮಂ, ಇದೇಂ ರುದ್ರಾಕ್ಷ ಮಾಲೆಯೊ
ಎನುತಚ್ಚರಿ ಪಡುವೊಲ್ ಭ್ರಮರಗಳ ಸಾಲು.
ಮನನೆಟ್ಟು ನೋಳ್ಪ ಭಕ್ತಿಕಾತರ ಕಣ್ಣಾಲಿ
ಮಧುಮತ್ತಾಗಿ, ರಸವತ್ತಾಗಿ ಮುಮ್ಮಳಿಸುತಿರೆ
ಶಿವನೆ ಸತ್ಯ ಸೌಂದರ್ಯವೊ ಸತ್ಯ ಸೌಂದರ್ಯವೆ
ಶಿವನೊ ಊಹಿಸಲಾಗದ ಪರಿಸ್ಥಿತಿಯೊಳ್
ಮತಿ ಮಥಿಸಿರೆ ಅರ್ಥಮನರ್ಥಮುಲ್ಲದೇನಿಲ್ಲ.
ಪ್ರಜ್ಞಾನ ಚಕ್ರಮಂಡಲವದು ಬರಿಸೊನ್ನೆ !

ನೀರು–ಜಲ–ವಾರಿ ಎಂದೆನಿಪ ಪರಮ ದ್ರವ್ಯಂ
ಜೀವ ಕೋಟಿಯ ಬದುಕಿನಾಗರವೆನೆ ಸಾಲದೈ.
ಪವಿತ್ರ ಪರಮೋಚ್ಚ ಜಲಸಂಪದ ತ್ರಿಲೋಕದ
ಪುಣ್ಯ ಫಲ ಪಣ್ತು ದ್ರವಿಸಿದುದೊ ಎನೆ ಅದ್ಭುತ
ಕೃಪಾ ನಿಧಿ ! ಭೂತಾಯ ಉಡಿಯಲಿ ಸಂಭವಿಸಿ,
ಮಳೆಯ ನೀರೆನೆ ಪಯೋಧರಗಳಿಂ ಇಳಿತಂದು

→

ಲೋಕೋಪಕಾರಿಯೈಸಿಹ ದ್ರವ್ಯ ಅಚ್ಛೋದ
ಸರೋವರ ಮಾತ್ರಮಲ್ತು, ಅಲ್ಲಲ್ಲೆ ಜಿನುಗುವ
ಹನಿಹನಿಗಳ್ ಬಜ್ಜರ ಕಿಂತಲುಂ ಅಮೂಲ್ಯಂ.
ನಮೋ ಜಲದೇವಿ, ನಮೋ ಪುಣ್ಯಾವನಿ.

— o —

ಕಾಂಗ್ರೆಸ್

ಅಂದಿರ್ದ ರಾಷ್ಟ್ರಭಕ್ತಿ ಸಾಧನೆಯ ನಿಷ್ಠೆ–
ಸತ್ಯ–ಪ್ರೇಮ–ದಾನ–ಧರ್ಮಗಳ್ ಲುಪ್ತವಾದುವೆ
ಎನಲಿಂದು ಸ್ವನಿಷ್ಠೆಯ ಪ್ರೇಮವೇ ಎಲ್ಲಿಲ್ಲ !
ಪಾಶ್ಚಾತ್ಯರ ಆಡಳಿತದ ವಜ್ರ ಮುಷ್ಟಿಯಿಂ
ಬಿಡುತೆಗೊಳೆ ರಾಷ್ಟ್ರ ರಥದ ಮಿಣಿಯಂ ಪಿಡಿದು ಸುಡು
ಗೋಲಿಗೆ ಎದೆಗೊಟ್ಟವರ ನೆನಪು ಇನಿತಿಲ್ಲದೆ
ಮೈಮರೆತು ಜಗಮರೆತು ಅಧಿಕಾರ ಗದ್ದಿಗೆಯಂ
ಗುರಿಗೊಂಡ ಹಿರಿದಂಡು ಎಲ್ಲೆಡೆಯಲಿ ಇಳಿದಿದೆ
ಅಖಾಡಕೆ, ಆಸೆ–ಪ್ರತ್ಯಾಸೆಗಳ ಹುಚ್ಚಿನಲಿ !
ಅಂದಿನಾ ಜೀವಮಾನ ಅಂದಿಗೇ ಮಿಾಸಲೆನೆ
ಸಾಗುತಿರ್ಪುದು ರಾಷ್ಟ್ರಕಾರ್ಯಕ್ರಮ, ಜೀವನ
ಸಮಸ್ಯೆಗಳನಾರ್ಜಿಸುವ ಪರಿಯಲಿ ಪ್ರತಿದಿನ !
ನೇಸರಂದು ಅಸ್ತಮಿಸಿದೊಡೇಂ ? ಮತ್ತೆ ಮತ್ತೆ
ಮೇಣ್ಮತ್ತೆ ಮೂಡನೇ ಸಮುತ್ತರೆ ? ಆ ಭಕ್ತಿ–
ಧರ್ಮಗಳ್ ಪಡಿಮೂಡವೇ ಮತ್ತೆ ಕಾರ್ಯಗತಿ
ಚೋದಿಸುವ ಮಾಳ್ಕೆಯಲಿ ? ಇಂದೇಂ ಯುವನೇತ್ರರ್
ಬತ್ತಿ ಹೋದುದೆ ಕೆಚ್ಚಿನಿತಿಲ್ಲದಪಾಂಗಿನಲಿ ?
ಹಾ ! ಅಂತೆನಲುಂಟೆ ? ನವಹುರುಪು ನವೋನವ
ಯೋಜನೆಗೆ ಬಿತ್ತು ತಾನಲ್ತೆ ? ಕಂಕಣ ಕಟ್ಟಿ
ಏಳಿ ! ಎದ್ದೇಳಿ ! ರಾಷ್ಟ್ರ ಜನನಿಯ ಪದಧೂಳಿ
ಸ್ವೀಕರಿಸಿ ಪಣತೊಡಿ ಪರಮ ಸೇವೆ ಗುರಿಯೆಂದು !
ಅಂದು, ವಿದ್ಯೆ ಬುದ್ಧಿಯರಿಯದ ಮುಗ್ಧ ಜನರಾಶಿ !
ಇಂದು, ವಿದ್ವನ್ಮಣಿಗಳ್ಳೈಸಿದ ಕೆಚ್ಚಿನ ಕಿಡಿಯ

→

ಕೆನ್ನೆತ್ತರುಗುವ ಧೀವಂತ ಯುವಜನ ಗೋಷ್ಠಿ !
ಮತ್ತೇಕೆ ಹಿಂಜರಿಕೆ ? ನಿಂನಿಮ್ಮ ಯೋಜನಾ
ಪರಾಕಾಷ್ಠೆಗೆಲ್ಲಿಯು ಮಾರೊಡ್ಡು ? ರಾಷ್ಟ್ರೀಯ
ಪ್ರಗತಿಯಯೋಜನೆಗಳೊಮ್ಮನಗಳೊಕ್ಕೂಟ
ಬೀರವೇ ಗಂಧಮಾಧುರ್ಯಮಂ ? ಸರಸ್ವತಿ
ಪ್ರಸಾದಮಂ ಪ್ರಾಂಜಲಿಯೊಡ್ಡಿ ಪಡೆದು ಲೋಕ
ಪ್ರಜ್ಞೆ ಇರುತಿರ್ದ ಮತಿಮಾನ್ಯರೆಲ್ಲ ಮನದೊಳ್
ಜಾನಿಸಿರೈ. ಸುಸಂಸ್ಥೆಯಂ ಪರಿಷ್ಕರಿಪ ಪಣ
ತೊಟ್ಟು ಕಂಕಣ ಕಟ್ಟಿದೊಡೆ ದುಷ್ಟ ಗ್ರಹಗಳ
ದುರಾಗ್ರಹ ದೂರಾದಪುದೆನಲ್ಕೆ ಜಾನಿಸೈ
ವೀರ ವರ, ಪರಮ ರಾಷ್ಟ್ರೋದ್ಧಾರದ ನಿಷ್ಠೆಯಲಿ !
ಅಂತುಮಲ್ಲದೆ ದುರಾಸೆ–ದುಮ್ಮಾನಗಳಿಂದೆ
ತಾಂ ಕೆಟ್ಟು ಕಾಂಗ್ರೆಸ್ ಮಹಾ ಸಂಸ್ಥೆಯ ಅದ್ಭುತ
ಧ್ಯೇಯೋದ್ದೇಶಮಂ ಕಡೆಗಣ್ಣಿ ಕೈವಿಟ್ಟು ದಿಕ್ಕು
ದೆಸೆಗೆಡಿಸಿ ದೂಷಿಸುವುದೇಂ ಚೆಂದ ಸಂಸ್ಥೆಯಂ ?
ಸ್ವರ್ಗೀಯ ಗಾಂಧೀ ಮಹಾತ್ಮನಂ ನೆನೆನೆನೆದು
ರಾಷ್ಟ್ರರಥದ ಮಿಣಿಯಂ ಬಿಗಿವಿಡಿದೆಳೆಯಿರಯ್ಯ
ಜ್ಞಾನದಿಂ ಒಗ್ಗಿನಿಂ ರಾಷ್ಟ್ರೀಯ ನೇಮದಲಿ !
ರಾಷ್ಟ್ರ ಸ್ವಾತಂತ್ರ್ಯ ಕೈಗೂಡಿದೊಡನೆಯೆ ಕಟ್ಟೆಯ
ಕಟ್ಟೊಡೆದು ಕೋಡಿವರಿದ ಜಲರಾಶಿಯೊಲ್
ಹುಚ್ಚೆದ್ದು ನುಗ್ಗಿ ಸ್ವಾರ್ಥವೇ ಪರಮಾರ್ಥಮೆನೆ
ಧರ್ಮಕರ್ಮಗಳಂ ಕಡೆಗಣ್ಣಿದ ಧೂರ್ತಜನ
ಕೋಟಿಯಿರೆ ಸಂಸ್ಥೆಯೇಂಗೈಯ ಬಲ್ಲುದು ಪೇಳ್ ?
ಯೋಚಿಸಿರೈ ಸುಹೃದಯಾನ್ವಿತ ಮಮ ಬಂಧುಗಳೆ !

→

ರಾಷ್ಟ್ರ ಸ್ವಾತಂತ್ರ್ಯಮಂ ಪಡೆಯೆ ಕೆನ್ನೆತ್ತರಂ
ಚೆಲ್ಲಿ ಗುರಿಮುಟ್ಟಿದ ಮಹಾ ಸಂಸ್ಥೆಯಲ್ತೆ ಕಾಂಗ್ರೆಸ್ ?
ಸುಧೀರೋದ್ದಾತತನವನಿಂದು ಮರೆಯಲುಂಟೆ ?
ರಾಷ್ಟ್ರದಾರಿದ್ರ್ಯಮಂ ಬಡಿದೋಡಿಸಲೆಸಗಿದ
ಕಾರ್ಯಕ್ರಮಗಳ್ ನರಸತ್ತವೊಲ್ ಮೈಮುದುಡಿ
ಮೂಲೆಗೆತ್ತುದಂ ನೋಡುತ ಸುಮ್ಮನಿರುವರೇಂ ?
ದಾರಿದ್ರ್ಯದೇವತೆಯ ಉತ್ತಾಲ ನರ್ತನಂ
ಕಿಡಿಸೆ ಗೈದ ಶ್ರಮಿಕವೃತ್ತಿ ಸಾಮಾನ್ಯಮೇ ?
ಮತ್ತಿದೇಂ ಕಾಂಗ್ರೆಸಿನ ದೂಷಣೆ ? ಸಂಸ್ಥೆಯುಂ
ಎಂದೆಂದು ಪವಿತ್ರ ಪಾತಳಿಯೆ ! ಒಡಲಂ ಕೊರೆದು
ನುಗ್ಗಿದ ಇಲಿ ಹೆಗ್ಗಣಗಳ ಹಿಂಡಂ ಪೊಡೆದಟ್ಟ
ನಿಲ್ವ ಧೀಮತಿಗಳ್ ಎದುರ್ವೆತ್ತೊಡೆ ಸಾಲ್ಗುಂ !
ರವಿಯೇಳ್ಗೆ ನೋಂಪಿಯಲಿ ಮಂಜುದೆರೆ ಹರಿವೊಲ್,
ಮನದ ಕೇಡು ಕತ್ತಲೆ ಹರಿದು ಭಾವನದಿಯುಕ್ಕಿ
ಬರಲಿ ! ಜೀವ ಕ್ಲೇಶ ಮರುಧರೆಯ ಜಲಧಿಯೊಲ್
ಹಿಂಗಿ ಹೋಗಲಿ ! ಮಾನಸ ಮಹಾಸರಸ್ಸಿನಲಿ
ಜಾನರಸನೆಯು ತುಂಬಿ ಸಹೃದಯ ಮೃದಂಗ
ಢಣಢಣಿಸಿ ಹೊಂಪುಳಿಯನೇಳಿಸಿದೊಡೆ ಮುಳುಗಿದ
ರವಿ ಮತ್ತೆ ಮೂಡಿಬಹ ತಾನೆಂದು ಮುಳುಗದೊಲ್ !
ಕಾಂಗ್ರೆಸ್ ಕಡುಕಷ್ಟದಿಂ ಸಂಕಟ ದುಃಖಗಳ ರಣ
ಗೋಳಿನಿಂ ರಾಷ್ಟ್ರಸ್ವಾತಂತ್ರ್ಯಂ ಗಳಿಸಿಕೊಟ್ಟ
ಮಹಾ ಸಂಸ್ಥೆ ! ತಾಯಿ ಸಂಸ್ಥೆ ! ಧೀಮಂತ ಸಂಸ್ಥೆ !
ಅದರ ಶುದ್ಧೀಕರಣಗೈದು ಮುನ್ನಡೆಸಿರೋ
ಸಹೃದಯಮಂತ ಮಮ ಬಂಧುಗಳೇ !

— o —

ಸಪ್ತಭಯಂಕರ

ಭಾರತ ಸಾಮ್ರಾಜ್ಯದ ಸಾಂಸ್ಕೃತಿಕ ಪರಿಮಳಂ
ವೇದ ಕಾಲದಿಂ ಜೃಂಭಿಸಿಹುದು ಸುರಸುಂದರ
ಶೈಲಿಯೊಳ್ ಅರಳುತಿಹ ಕುಸುಮ ರಾಜಿಯ ತೆರದಿ.
ನಾರಿಯುಂ ಸಂಜೀವನದ ತಳಹದಿಯಾಗಿರೆ;
ಸಂಸ್ಕೃತಿಯ ಸಾರಮಂ ಸಂಸ್ಕರಿಸಿದೈಸಿರಿ
ನಾರೀತತ್ವದಿಂ ಪೊದಳ್ದ ಪುಣ್ಯವಾಹಿನಿ.
ಕೇವಲ ಸರಸತಿ ಪ್ರಸಾದದಿಂದುಣ್ಮಿದ ಕೀರ್ತಿ
ಪರಿಮಳಿಸಿದುದಲ್ಲ. ಸಕಲೈಶ್ವರ್ಯ ದುಂಬಿದ
ತೋಷ ಪ್ರವೃತ್ತಿಯಿಂದಲ್ಲ. ರಾಷ್ಟ್ರೀಯ ನದಿ
ನದ ಗಿರಿ ವನಗಳ ಸಂಪನ್ಮೂಲಗಳಿಂದಲ್ಲ.
ಪ್ರಕೃತಿ ತತ್ತ್ವದ ನಿಗೂಢ ಕಾರ್ಯಕಾರಣೀಯ
ಅಧಿನಿಯಮದಿಂದಲ್ಲ ಎನೆ ಪರಿಭಾವಿಸಿ ನೋಡೈ !
ವೇದ ಸಂಸ್ಕೃತಿಯ ಮೊಲ್ಲೆ ಪರಿಮಳದ ಕತ್ತುರಿಗೆ
ಸರ್ವ ಸಾರಮೆನಿಪ ವರನಾರೀ ಧರ್ಮೀಯ
ಧ್ಯೇಯೋದ್ದೇಶಗಳ್ ಸರ್ವ ಶ್ರೇಷ್ಠ ವಿಧಾಧರೆಯಲಿ !
ಅನ್ನಪೂರ್ಣೆಯರವತಾರಮೇ ಮನೆಮನೆಯಲ್ಲು.
ಆದೊಡೇಂ ? ಪರಿಪುಣ್ಯ ಸೇವೆಯಂಗೈದೆನಿತು
ಉಪಕರಿಸೆ ನಿಚ್ಚ, ಸಾಗರಕೆ ಶ್ರೀ ಗಂಧಮಂ
ತೇಯ್ದ ಪೊಲ್ ವ್ಯರ್ಥವಾಗಿಯುಂ ಬದುಕು ಶ್ರೀಕರ !
ಬಹುಮುಖೀ ಸೇವೆಯಂ ಸಲಿಪರ್ಗಿಹ ಅನನ್ಯ
ಬಂಧಾನುಬಂಧಗಳಿಗೇನೆನಲಕ್ಕುಮೋ
ಕೀಳರಿಮೆಯೀ ಧೂರ್ತ ಭವಧಿಯಲಿ ? ಕಡುದುಃಖ
ಸಂಕಟಗಳ ರಣಗೋಳು, ಕಂಬನಿಯ ಬಾಳು

→

ಒಡಲಿಗತಿಕೊಳು ಎನೆ ಬದುಕು ದುಸ್ತರಂ !
ವೈಯಕ್ತಿಕ ದಾರಿದ್ರ್ಯ, ಆರ್ಥಿಕ ದಾರಿದ್ರ್ಯ
ಪುಟ್ಟನಿಂ ಅಂತ್ಯದವರೆಗದು ಕಟ್ಟಿಟ್ಟ ಬುತ್ತಿ !
ಸುಮಂಗಲೆ ನೇಮದಲಿ ಸಂಸ್ಕೃತಿ ಪೆಸರಿನಲಿ
ಭಾರತ ಪೆಣ್ಮಣಿಯರಿಂಗೆ ಗೌರವದಿಂದೀವ
ತಿಲಕ, ನತ್ತು, ಓಲೆ, ಬಳೆ, ಮಾಂಗಲ್ಯ, ಬಂಧನ
ಮೇಣ್ ಅಜ್ಞಾನಮೆಂಬೀ ಸಪ್ತ ಕರ್ಮದಿಂ
ಬಿಗಿವ ಶೃಂಖಲೆಯು ಘೋರಾತಿಘೋರ ಅಸಹ್ಯ
ಪ್ರಕಾಂಡಕಾಂಡಕೆ ಜಡಿದು ಕುಟ್ಟಿ ನೂಂಕಿಯುಂ,
ಮೇಲ್ನೋಟಕೆ ತಳುಕು ಬೆಳಕಿನಿಂದೊಪ್ಪಗೊಂಡಿಹ
ಶಾಸ್ತ್ರ ಸೂತ್ರಗಳ ಕೂರಾತಿಕೂರ ಶೃಂಖಲೆ !
ನಾರಿ ನರಕಕೆ ದಾರಿ ಎಂದೆನುತೆ ಪಿಂತಿಕ್ಕಿ
ಭೋಗಿಪರ ವೈಭೋಗದ ಸೊತ್ತಾಗಿ ತೊತ್ತಾಗಿ
ಅಜ್ಞಾನದ ನಾವೆಯಲಿ ವೈತರಣಿಯಂ ದಾಂಟ
ಹೋಹುವನಿತರೊಳ್ ಮುಗಿವುದೀ ಬಾಳಿನ ಅಂಕ !
ಪುರುಷ ಪ್ರಧಾನ ರಾಷ್ಟ್ರದೊಳ್ ತಾಮೆಗೈದಿಹ
ಕಟ್ಟಳೆಗಳ್ ತಮ್ಮಯ ಅನುಕೂಲಕಲ್ಲದೆಯೆ
ಬೇರುಂಟೆ ? ಮಂಗಳೆಯ ನೇಮದಲಿ ಸುಮಂಗಳ
ದ್ರವ್ಯಗಳ ಹೇರಿ ಶಾಸ್ತ್ರಗಳ ನೆರವಿನಿಂ ಹಾಡಿ
ಪಾಡಿ ಕೊಂಡಾಡಿ ಸೂತ್ರಧಾರಿಯೈಸಿ ಆಳ್ವ
ಅಣ್ಣಗಳ್ ಅರಿವರೇಂ ಕುಜೀವನದ ಆಳಮಂ ?
ಇಂದು ಮಂಗಳೆಯೈಸಿ ವೈಧವ್ಯದ ದುಃಖದಲಿ
ಅಮಂಗಳೆಗೊಳಿಸಿ ಪಿಂತಿಕ್ಕುವ ಕುಸಂಸ್ಕಾರದ
ಖಡ್ಗಹತಿಗೆ ಸಿಲ್ಕಿ ಬದುಕಿನಲಿ ನರಕವಾಸ

→

ಅನುಭವಿಸುವ ಸುದತಿಯರಂ ರಕ್ಷಿಪರಾರ್ರೈ ?
ಹೀನಾಯಮಪ್ಪ ಸಂಪ್ರದಾಯಗಳನೊಪ್ಪಿ
ಬಂಧಾನುಬಂಧಗಳಿಗೆ ತಲೆ ಮಣಿವುದೆಮ್ಮಯ
ದೌರ್ಭಾಗ್ಯಮಲ್ತೆ ? ಅರ್ಥಹೀನ ವ್ಯವಹಾರದಿ
ಸಿಲ್ಕಿ ನರಳುವರ್ಗೆ ಮನ ಮರುಗುವೆಂ, ಕರಗುವೆಂ,
ಬಿಸಿಲಟ್ಟೆದ ಮಂಜಿನವೊಲ್ ! ಆದೊಡೇನಾ
ಸ್ತ್ರೀ ಜಗತ್ ತನ್ನಂತಃಶಕ್ತಿಯಂ ಅರಿಯದೆಯೆ
ಆರೇಂ ಗೈದಪರ್ ಪರಿಭಾವಿಸೆಲೆ ಸೋದರೀ !
ಕ್ರಮವತ್ ತಮ್ಮ ತಾವರಿತು ಕೊಳ್ಳುವುದರಲ್ಲಿಯೆ
ಸುಂದರ ಬದುಕಲ್ಲದೆ ಬೇರೊಬ್ಬರಿಂದಲ್ಲ.
ಓ, ಪರಮ ಜ್ಞಾನಿ ! ಹೃದಯವಂತ ಸೋದರಿ !
ನೀ ನಿನ್ನೊಳ್ ಆಪನಿತು ಪರಿಭಾವಿಸಿ ನೋಡು !
ಈ ಜೀವನ ರಂಗದಲಿ ಸುಸಂಸ್ಕೃತಿಯೊಲೆಸೆವ
ಸಪ್ತ ಭಯಂಕರಮೆನಿಪ ನಯವಂಚನೆಯ ಶಾಸ್ತ್ರ
ಸೂತ್ರವ ಹರಿದು ತೊರಿ ಧೈರ್ಯದಿಂ ಸ್ಥೈರ್ಯದಿಂ
ನಮ್ಮ ಬಾಳ್ ನಾಮೆ ನಿರ್ಧರಿಪುದೆ ಶಕ್ತಿ ಕಣ !
ಬಾಳ್ವಹುಮ್ಮನಲಿ ಬಾಳ್ದಲ್ಲದೆ ಬಪ್ಪುದಲ್ಲವೀ
ಜೀವನ ಗೌರವಶ್ರೀ !

— o —

ಮಿಲಾನ್‌ನಲ್ಲಿ ಡ್ಯುಮೊ

Duomo of Milan
Frozen
Buried overthrow
Here is the natural cathedral
of the caves of postamia
(Farfa)

ಅಃ ! ಸುಸುಂದರ ನಗರಿ ಮಿಲಾನ್ ! ಧರಾತಲದಿ
ಇತರ ರಾಜ್ಯಗಳೊಡಂ ದಿಟ್ಟತನದ ಪುರುಪಿನಿಂ
ಸ್ಪರ್ಧೆಗೆತ್ತುದೊ ಎನೆ ಅದುಭುತ ದೈವಸಿರಿಯಂ
ನಾಣ್ಚಿಸುವೊಲ್ ಮೆರೆವ ನಾಗರಿಕ ನಗರಿ ಮಿಲಾನ್ !
ನವನವೋನ್ಮೇಶ ಶಾಲೀನತೆಯ ನೇಮದಿಂ
ಪ್ರಕೃತಿಯೈಸಿರಿಗೆ ಹೆಗಣೆಲೆಯೋ ಎನೆ ಲೋಕ
ಪ್ರಸಿದ್ಧಂ. ಪುರಾತನವಾಗಿರ್ದೊಡಂ ನಿತ್ಯ
ನೂತನ ಮೆನೆ ಅನುಭೂತ ಲಲಿತ ಕಲಾಕೇತನ !
ನಗರ ಮಧ್ಯೆ ರಂಜಿತ ದೇವ ಕ್ರಿಸ್ತನ ಪರಮ
ದೇಗುಲ ! ಶತಮಾನದ್ವಯಗಳ ಪೂರ್ವದೊಳ್
ಎನೆ ಸಾರಿಗೆ ಸೌಕರ್ಯ, ಯಂತ್ರ ಸಾಧನೆ, ತಂತ್ರ
ಜ್ಞಾನ ದೂರೈದ ದಿನಮಾನಗಳಲಿ ಜನಶಕ್ತಿ
ಒಗ್ಗೂಡಿ ಪ್ರಜ್ಞಾನ ಕಲ್ಪಮಂ ನೆರೆಮಥಿಸಿ
ನಿರ್ಮಿತ ಡ್ಯುಮೊ ! ಅಚ್ಚರಿಯಂಮಾಶ್ಚರ್ಯಗೊಳಿಪ
ಮಹಾ ಕೃತಿ ಡ್ಯುಮೋ ! ಸಗ್ಗವೇ ಧರೆಗಿಳಿತಂದು
ನೆಲೆನಿಂದವೊಲ್ ಸತ್ಯಬಂಧುರಂ ! ಕರಕುಶಲ
ಕಲೆಯಿಂದೆ, ಚಿತ್ರಕಲೆಯಿಂದೆ, ವಿನ್ಯಾಸ ಕಲಾ
ಚಾತುರ್ಯದಿಂದೆ ಮೈವೆತ್ತ ಡ್ಯುಮೊ ದೇಗುಲದ

→

ದೃಶ್ಯಮಾನ ಸೌಂದರ್ಯ ವರ್ಣನಾತೀತಂ !
ಪ್ರಜ್ಞಾನ–ಐಶ್ವರ್ಯ ಸಮ್ಮಿಲನಂ. ಮಾಯೆ ಸುಧಾ
ವಹ್ನಿಯ ದ್ಯೋತಕಂ ! ಅಪೂರ್ವ ಕಲಾ ಮಂದಿರಂ
ಅದ್ಭುತ ವೈಭವೋಪೇತ ನಾಕದರಮನೆಯೆನೆ
ಸುಶೋಭಿತ ದೇಗುಲಂ ! ನೋಳ್ಪ ರಸದೃಷ್ಟಿಯುಂ
ಸುಖಮೂರ್ಛೆಗೆ ಸಲ್ಲುವೊಲ್ ನಯನ ಬಂಧುರಂ !
ಡ್ಯುವೊ–ದ ಸೃಷ್ಟಿಕರ್ತನಾರೆಂಬುದಂ ಅರಿತ
ಬಂಧುಗಳಿಲ್ಲಂ. ಮೇಣದರ ಕಾಲಮಾನಮಂ
ಸ್ಪಷ್ಟಗೊಳಿಸಿದರಿಲ್ಲಂ. ಶತಶತಮಾನಗಳ
ಮಳೆ ಬಿಸಿಲ್ ಗಾಳಿಗಳ ಮುದ್ರೆಯುಂ ಸಹಿಸಿಯುಂ
ಅಚ್ಚಳಿಯದ ಪರಮೋಚ್ಚ ಮನೋರಮ ಡ್ಯುವೊ !
ಇಂದಿನೀ ನಾಗರಿಕ ಕಾಲಮಾನದಲ್ಲಿ, ಮಿಗೆ
ಸಕಲತರ ಸೌಲಭ್ಯಗಳಂ ಪಡೆದಿಹ ಶಿಲ್ಪಿಗಳ್
ಪ್ರತಿ ಚಮತ್ಕೃತಿಯದಕೆ ನಿರ್ಮಿಸರೆನೆ ಚೋದ್ಯಂ !
ಹೇ, ವರ ಡ್ಯುವೊ ಶಿಲ್ಪಿಯೆ ! ನೀನಹುದು ಧೀಮಂತ !
ಅದ್ಭುತ ಕಲಾಕಲೆಯ ಶಂಕರ ಶಿಖರ ವೇಶಿ !
ನೀನಾರೆ ಆಗಿರು, ನೀನೆಲ್ಲೇ ಇರು ನಿನಗೆನ್ನ
ವಿನಮ್ರ ನಮನಂ !

— o —

ಆದಿ-ಅಂತ್ಯವೆಲ್ಲಿ

ಹೇ ಬೃಹದ್ ಬ್ರಹ್ಮಾಂಡ ಶಿಲ್ಪಿ ಪರಮಾತ್ಮನೇ !
ಈ ಅನಂತಾನಂತ ವಿಶ್ವಾತ್ಮ ಮಂಡಲಕೆ
ಆದಿಯೆಲ್ಲಿ-ಅಂತ್ಯವಿನ್ನೆಲ್ಲಿ ? ನಿನ್ನೊಂದು
ರಚನಾ ವೈಖರಿಗೆ ಅತ್ಯದ್ಭುತ ಸಾಮರ್ಥ್ಯಕೆ
ಎಣೆಯುಂಟೆ ? ವರ್ಣಶಿಲ್ಪಿ ಎನಲೆ ? ಯಂತ್ರಶಿಲ್ಪಿ
ಎನಲೆ ? ಜಗತ್ ಶಿಲ್ಪಿ ಎನಲೆ ? ದೇವಶಿಲ್ಪಿ ಎನಲೆ ?
ಏನೆಂದು ಭಾವಿಸಲಿ ತವ ರಚನಾ ಕೌಶಲ್ಯಮಂ ?
ಎಲ್ಲಿಂದ್ಯೈತಂದುದೀ ಜಾಣ್ಮೆ ತವ ಮನೋಗತಿಯ
ಸತ್ ಸಂಪದಕೆ ? ಭಾರ್ಗವಿಯ ಭಾವ ತೀರ್ಥನೋ ?
ಭುವನೇಶ್ವರಿಯ ಅಮರ ಸಂದೇಶವೊ, ಶಾರದೆಯ
ಅನನ್ಯ ಅನುಪಮ ರಾಗಶೈಲಿಯ ಕ್ರಾಂತಿಯೋ
ಪರಬ್ರಹ್ಮನ ಸೃಷ್ಟಿರಚನೆಯೋ ? ಶಿವ ಶಂಕರನ
ಶಕ್ತಿ ಸಂಚಯನಮೋ ? ನಿನ್ನ ದಿವ್ಯ ತಪಶಕ್ತಿಯೋ ?
ಆವಾವ ತಂತ್ರಜ್ಞಾನಮಂ ಪಡೆದೆಯೈ ತವ
ವಿಶ್ವಾತ್ಮ ಬ್ರಹ್ಮಾಂಡದ ರಚನಾ ಸಾಮರ್ಥ್ಯ
ಸಂಪಾದನೆಗೆ ? ನಿನ್ನ ಹೃದಯದ ತಂತುಗಳೆ
ಸೂತ್ರವಲ್ತೆ ತ್ರಿಲೋಕ ಸಂಯುಕ್ತ ನೀತಿಗೆ
ಮೇಣ್ ತ್ರಿಲೋಕ ಸಂವಿಧಾನಗತಿಗೆ ?
ಓವೊ !

ಇದೇಂ ಸಾಮಾನ್ಯ ಸೂತ್ರಸಾರವೆ ಪ್ರಭುವೇ !
ಸತ್ಯ ರಚನಾ ಪೂರ್ವಮಾ ವಿಶ್ವ ಚರಕಮಂ
ನಿನ್ನ ಹೃತ್ ದೇಶದ ನೆತ್ತರಿನ ಧಾರೆಯಿಂ
ಉಲ್ಲೇಖಿಸಿ ಚಿತ್ರಿಸಿದೆಯಾ ಪರಮ ಬಂಧುವೇ ?

ಕಾಲವುಂ ದೇಶವುಂ ವಿಶ್ವಾಕಾಶವುಂ ಭೂ
ಸ್ವರ್ಗವುಂ ಮೇಣ್ ದಿವ್ಯಗ್ರಹ ಕೋಟಿಗಳಂ
ಸಪ್ತ ಸೂತ್ರದಿ ಕಟ್ಟುವೊಡೆ ನಿನ್ನಾಂತರ್ಯದ
ವಜ್ರದೊಡಲಂ ಕೊರೆದು ಅಮೃತದ ಅವಿಚ್ಛಿನ್ನ
ಧಾರೆಯ ಹರಿಸಿದೆಯಾ ಅಜ್ಞಾತದಂಗಾಂಗ
ತಾಳಲಯ ತಪ್ಪದೊಲ್. ಸತ್ಯಧರ್ಮ ರಸನೆಯ
ವರ್ಣಾಂತು ಕಡೆದ ಸಂಯೋಜನೆಯುಮಿದಲ್ತೇ ?
ಗಂಭೀರ ಧ್ಯಾನಮಯ ಚಿಂತನೆಗೆ ತಪಸ್ಸಿನ
ಫಲಪುಷ್ಟಿಯಂ ತುಂಬಿ ಪ್ರತಿ ಕಣಕಣಂಗಳ್
ಬೃಹತ್ತಿಗೇರುವೊಲ್ ಸಾಕಾರ ಸ್ವರೂಪವ
ನಿರ್ಮಿಸುತೆ ಬ್ರಹ್ಮಾಂಡವುಂ ವಿರಚಿಸಿಹೆ. ಮತ್ತೆ
ಮತಿವಮೌನ ಕೃತಿವೆತ್ತು ಉದಯಾಸ್ತಮಾನದ
ನಿತ್ಯ ಯೋಜನೆಗೆ ಮಿಸುನಿಲೇಪವೊರೆದು ಮೆತ್ತಿ
ಕನಸಂ ನನಸಿಗೆತ್ತೆ ! ಮತ್ತಿದೇನ್ನೈ ಲಜ್ಜಿತ
ಪೆಣ್ಣಿನೊಲ್ ಪರೋಕ್ಷೇಯ ಕಾರ್ಯಕಾರಣಭಾರ
ನಿನ್ನೊಳ್ ವರ ಪ್ರಭುವೇ ! ನಿನ್ನೀ ಪವಾಡವುಂ
ಏನೆಂದು ಬಣ್ಣಿಪೆನ್ನೈ ಓ ! ತ್ರಿಲೋಕ ಬ್ರಹ್ಮಾಂಡ
ನಾಯಕ ! ತವ ಮನೋಗತಿಯ ಋತುಚರಕವೊಂದು
ಗೂಢಾತಿಗೂಢಮಿರೆ ನಿನ್ನ ತಿಳಿಯಲರಿಯೆನ್ನೈ.
ಅಂಧಕಾರದಲಿ ತತ್ತರಿಸಿ ತೊಳಲಿ ಬಳಲುತೆ
ನಿನಗೀವೆನೆನ್ನಯ ಅನನ್ಯ ನಮ್ರ ನಮನಂ !

ಓ ! ಪರಮ ಪುಣ್ಯನೇ ! ತವಸ್ಮರಣೆಯಿಂದೆಮ
ಕವಿತಾಗೆಳತಿಯು ನಲಿಯುತ ಬಹಳ್ ಹೃತ್‌ವೇದಿ
ಧಣದಣಿಸುವ ಪಾಂಗಿನಲಿ ! ನಿನ್ನ ನೆನೆಯಲದುವೆ
ಜೀವನೀಮಾರ್ಗಯೋಗದೊಳ್ ತೆರೆಯನೊಡ್ಡಿದ
ಗಾಢಾಂಧಕಾರವುಂ ಪರಿದೊಗೆಯೆ ದಾರಿ ಕಣ !

— ೦ —

ಜೀವನ ಸಂಜೆ

ಪ್ರಭುವೇ ! ಭವಧಿಯಿದು ಕೂರ್ಮುಳ್ಳುಗಳ ಪಂಕ
ಎಂದೆನಲ್ ಬಾಯಿಬಾರದು ! ದುಃಖ ಸಂಕಟದ
ಕೂರ್ವೆ ಕೊರಳೊತ್ತಿ ಪಿಡಿದಿರಲೆಲ್ಲಿಯ ಪರಕೆಯೊ !
ನಿನ್ನೊಳಿಂದು ಪ್ರಾಂಜಲಿಯೊಡ್ಡಿ ಬೇಡಿಕೊಂಬುವೆ
ತಾಳಲಾಗದೀ ಭವ ಬೆಂಕಿಯುಲಿ ಸುಟ್ಟುರಿದು.
ಪ್ರಾಣ ಕಟ್ಟುರಿಯ್ಯುಸಿ ಕಡುನರಳಿ ನೋಯುತಿದೆ.
ತವಚರಣ ಧ್ಯಾನವುಂ ಮರೆತು ಮುಳುಗಿದೆನಯ್ಯ
ಭವಧಿಯಲಿ ಇನ್ನೆಂದು ಏಳದವೊಲ್ ! ನೀನೇ
ಕರವಿಡಿದು ನಡೆಸಯ್ಯ ಬೆಳಕಿನೆಡೆಗೆ ದೊರೆಯೇ !
ಬಾಲ್ಯದಲಿ ಸಂಗೀತ ಕಲೆಯು ಕೊಲೆಯಾಗಿರಲ್
ಮನವಿಂದು ಬರಿದೋ ಬರಿದು ! ಬಾಳ್ ಸಂಜೆಯುಲಿ
ಬಗೆ ಕದಡಿ ದಿಕ್ಕೆಟ್ಟು ನಿನ್ನ ಕರ ಜೋಡಿಸಿ
ಕಣ್ ಮುಗಿದು ಕಾಲ್ವಿಡಿದು ಭಕ್ತಿಯಿಂ ಬೇಡುವೆನ್ನೈ.
ನಿನ್ನ ಧ್ಯಾನದಲಿ ನಿನ್ನ ನೇಮದಲಿ ನಿನ್ನನುಡಿ
ಸೇವೆಯುಲಿ ಕಳೆಯಲೆನ್ನ ಮನವನನುಗೊಳಿಸಿ
ಎನ್ನಾಸೆ ಸಲಿಸು ಕರುಣೆಯಿಂ ಹೇ ದಯಾನಿಧೆ !
ತನು ಸೋತು ಇಂದ್ರಿಯಗಳ ಸಿಥಿಲತೆಯಿಂದಾಂ
ಕೇಳಲರಿಯೆ ನೋಡಲರಿಯೆ ಓದಲರಿಯೆ ಎನೆ
ಬಾಳಿನ ಪರಿಸ್ಥಿತಿ ಹದಗೆಟ್ಟು ಪಥಗೆಡುತಿರೆ
ಏಂಗೈಯಲರಿಯೆ ನಾನು. ನೀನೇಗತಿ ದೊರೆಯೇ !
ದಾಸಿಯುಂ ನಿರ್ಲಕ್ಷಿಸಿ ನಿರಾಕರಿಸಿ ಇನ್ನೀಸು
ನೋಯಿಸದಿರ್ ಹೇ ಎನ್ನ ಸತ್ಯ ಪರಮಾತ್ಮನೆ !
ನೀನೇ ಪರಮ ದೈವ ! ನೀನೆನ್ನ ಪ್ರಾಣೇಶ !

→

ನೀನಹದು ಪರಮ ಪಿತ ! ಪರಂಧಾಮ ! ದೊರೆಯೇ,
ನಿನ್ನ ಅಡಿಗಳಿಗೆ ಸಲಿಸುವೀ ಭಕ್ತಿರಸವೀ
ಧ್ಯಾನ ಭಾವವೀ ದಿವ್ಯ ಪ್ರೇಮವೀ ಚಿಂತನಾ
ವೇಶವೀ ಆನಂದ ಮೋದವೀ ಕವಿಕಾವ್ಯ
ಶ್ರದ್ಧೆಯೀ ನಮನಮಂ ತವ ದಿವ್ಯ ಸನ್ನಿಧಿಗೆ
ಸಲಿಸುವೆಂ ಸ್ವೀಕರಿಸೈ ಪ್ರಭುವೇ !

—0—

ಮಹಾ ಭಾರತ ಯುದ್ಧ ಪ್ರಕಾಂಡಕಾಂಡದಲಿ
ಪೂಡಿರ್ದ ಅಪೂರ್ವತರ ಅದ್ಭುತ ರೂಪದಾ
ಶಸ್ತ್ರಾಸ್ತ್ರಗಳ ಝಂಕಣೆ ಸಾಮಾನ್ಯಮಲ್ಲಂ.
ಕ್ರೂರ ಶಸ್ತ್ರಾಸ್ತ್ರಗಳ ಪ್ರಯೋಗದಿಂ ರಣದೊಳ್
ಸಂಭವಿಪ ಸಾವುನೋವುಗಳ ನಿಜ ಬಣ್ಣನೆಯು
ಘೋರ ರಣರಂಗಮಂ ಕಣ್ಮುಂದೆ ನಲಿಸುವುದು
ಲಿಖಿತ ಚಿತ್ರದ ಪಾಂಗಿನಿಂ. ಬೀರ ಬಿಜ್ಜೆಯೊಳ್
ಬಿಲ್ಲ ಬಿನ್ನಾಣದೊಳ್ ಕೆಚ್ಚೆದೆಯ ಸಾಸದೊಳ್
ರಣಧೀರ ಯೋಧರ ಯುವ ಪ್ರಭೃತಿಗಳ ಕುದಿವ
ಬಿಸಿರಕುತಮೆನಲಕ್ಕುಮೆ ? ರೊಚ್ಚಿನಿಂ ಮುಂದೈವ
ವೃದ್ಧಮಹನೀಯರ್ ಎಸಗಿದ ಯುದ್ಧ ಜವ್ವನಿಗ
ಯೋಧರಂ ಮಿಾರಿಪನಿತು ರೋಷಾನ್ವಿತಂ ! ವೈ
ನವಿರೇಳಿಸಿ ವೀರರಸವುಕ್ಕಿಪ ಕಥಾನಕಂ !
ಭಾರತ ಜನಪದಂ ಮತಿಮಸೆವ ರಣಕೇಳಿಯು
ಬೆಂಕೆಯಿಂ ಪೊಣ್ಬ ರೊಚ್ಚಿನ ಕಿಡಿಯಿಂ ಮೇಣ್ ರಣ
ಗರ್ಜನೆಗಳ ಭೀಕರ ಶಬುದದಿಂ ಮೇಣಖಿಲ
ಕೂರಾಯುಧಗಳ ಠಂಕಾರದಿಂ ಮತ್ತಮಾ
ಜಾಣಾಜಲಂ ಅರಿಗಳ ತಲೆಯಂ ಚೆಂಡಾಡಿ
ದಿಂಡುರುಳಿಸಲ್ಕೆ ಪುಂಖಾನುಪುಂಖಗೊಳ್ವ ಪ್ರಚಂಡ
ಶಕ್ತಿಯ ವಿಶೇಷಮೇಂ ? ಶಬ್ದವೇಧಿಯ ಮಹಾ
ಚಮತ್ಕಾರಮೇಂ ? ಕಡಿಗತ್ತಿ ತ್ರಿಶೂಲ ಗದೆ
ಈಟಿ ಖಡ್ಗ ಗುರಾಣಿಗಳ ಕಿವಿ ಗಡಚಿಕ್ಕುವ
ಝಣತ್ಕಾರಗಳ್ ಮಂತ್ರಮಾಯದೊಳ್

→

ನಡೆದತ್ತು ಧರಾತಲವದು ಮಿಡುಕುವ ತೆರದಲಿ !

ಇಂದಿನೀ ನಾಗರಿಕ ಕಾಲಮಾನದೊಳ್ ರಣ
ಕೇಳಿ ಯಾಂತ್ರಿಕ-ತಾಂತ್ರಿಕ ಪರಿಜ್ಞಾನದಿಂ ಚಣ
ಚಣಂ ದ್ವೇಷ-ಒಡಲ್ಕಿಚ್ಚುಗಳ ರೌದ್ರಾವೇಶಂ
ಭುಗಿಲೆಳ್ದು ದಯೆದಾಕ್ಷಿಣ್ಯಗಳ್ ಇನಿತಿಲ್ಲದೊಲ್
ಅಣುಬಾಂಬು, ಫಿರಂಗಿ, ರೈಫಲ್, ಕೋವಿಗಳ ಮೇಣ್
ಘೋರಾತಿಘೋರಮಪ್ಪ ವಿಷಾನಿಲ ರೋಗಾಣು
ಮುಂತಪ್ಪ ಭಯಂಕರ ಸಮರೋಪಕರಣಂಗಳ್
ಜಡಿದಾರ್ದು ಸಿಡಿಸಿ ಢಣಢಣಿಪವು ಶತ್ರುನೆಲೆಯಂ !

ಓವೊ ! ಆ ಚಣಮೆ ಯಾಂತ್ರಿಕ ಶಕ್ತಿ ಸಿಡಿದೊಡೆದ
ಚಣದೊಳ್ ಸಹಸ್ರಾರು ಜನ ಜಂಗುಳಿಯಂ ಯಮ
ಲೋಕಮಂ ಮುಟ್ಟೈಸುವ ಘೋರ ಯೋಜನೆಯ ಚಿತ್ರ
ಎಲ್ಲೆಲ್ಲು ! ಯುದ್ಧದ ವಿಮಾನಗಳ ತರತರದ
ಅವತರಣಿಕೆಗೆಣೆಯೇ ಇಲ್ಲಂ. ಮರುತನಾ
ವೇಗಮಂ ಮೀರುವ ವಿಮಾನಗಳ್ ಸರ್ವತ್ರ
ಲೋಕೋತ್ತರಂ ! ಕ್ಷಣದೊಳ್ ನಾಶಗೈವ ಭೀಕರ
ಅಣುಬಾಂಬುಗಳೆಸೆವ ಅವಾಕ್ಸ್ ! ವಿಜ್ಞಾನ
ಯುಗೀಯ ಪ್ರಜ್ಞಾನ ಯಂತ್ರತಂತ್ರ ಸಾಧನಾ
ವೈಖರಿಯಿಂ ಗೈದ ವಾಯುವೇಗದ ಅವಾಕ್ಸ್ !
ಒಡನೊಡನೆ ಶತ್ರುನೆಲೆಯಂ "ಹದ್ದಿನ ಕಣ್ಣಿಂ"
"ಹಾಕ್ ಐ" ಚಣದೊಳರಿತು ಗುರುತಿಸುವ ರೇಡಾರ್
ಪ್ರೇಕ್ಷಕ ಅಥ ಗ್ರಾಹಕ ಎಚ್ಚರಿಕೆಯಂ ನೀಡಿ
ಕಾರ್ಯ ಸನ್ನದ್ಧಗೊಳ್ಳುವ ಧೀರ ಅವಾಕ್ಸ್ !

→

ಕೋಟ್ಯಾನುಕೋಟಿ ಜೀವಿಗಳಂ ಗಳಿಗೆಯೊಳ್
ನಾಶಗೊಳಿಪ ಅವಾಕ್ಸ್ ! ಹಾ ! ಚಂಡ ಪ್ರಚಂಡ
ರಾಕ್ಷಸೀ ಪ್ರವೃತ್ತಿಗೇನೆಂಬೆ ? ಮತಿಯಿದ್ದು
ಮಾನವೀಯತೆಯ ಪ್ರಜ್ಞಪ್ತಿ ಪ್ರಜ್ಞೆ ನಾಶದ
ಪಥವಿಡಿಯೆ ರಕ್ಷಿಪರಾರ್ಕೆ ಯೋಚಿಸು ಯುವಬಂಧು !
ಜಗದಿ ಶಾಂತಿ ಮೂಡಿಸೆ, ಮಾನವತೆಯಂ ಮತ್ತೆ
ಜೃಂಭಿಸುವೊಲ್ ದಾನವತೆಯಂ ಜಡಿಕುಟ್ಟಯ್ಯ !
ರೋಷ ದ್ವೇಷಗಳ ತೊಡೆಯೆ ಶಾಂತಿಯು ಕಡಿಗತ್ತಿ
ಸೋಲ್ದೊಡೆ, ಬೆದರದೆ ನೋಯದೆ ಕಂಡ ಕಂಡಲ್ಲಿ
ಗುಂಡಿಕ್ಕಿ ನಿರ್ನಾಮಗೊಳಿಸಿ ಸತ್ ಶಾಂತಿಯಂ
ಎರಡೂ ಕರಗಳಿಂದೆ ಸ್ವಾಗತಿಸು ! ಮನುಕುಲದ
ಜೀವನೋದ್ಧಾರಕೆ ಮೇಣ್ ಲೋಕೋದ್ಧಾರಕೆ !
ದುಷ್ಟನಿಗ್ರಹವಿಲ್ಲದೆಲ್ಲಿಯ ಪ್ರಶಾಂತಿ ?
ಆಪನಿತು ಜಾನಿಸಿ ತಿಳಿಮನವೇ !

— o —

ನ್ಯಾಯದಾನ

ಯಃ ಸ್ವಭಾವೋ ಹಿ ಯಸ್ಯಾಸ್ತಿ
ಸ ನಿತ್ಯಂ ದುರತಿಕ್ರಮಃ ।
ಶ್ವಾ ಯದಿ ಕ್ರಿಯತೇ ರಾಜಾ
ಸ ಕಿಂ ನಾಸ್ನಾತ್ಯುಪಾನಹಂ ॥

ನ್ಯಾಯ ಪರಿಪಾಲನೆಯ ನೇಮದಲಿ ಪುರಾತನ
ಇತಿಹಾಸದಲೆನಿತೊಂದು ಅದುಭುತಗಳ್ ನಡೆದು
ಆಚಂದ್ರಾರ್ಕವಾಗುಳಿದ ಘಟನೆಗಳ್ ಇಂದಿನ
ಪ್ರಜಾ ಸಮುದಾಯಕೆ ನಿತ್ಯನೂತನ ಪಾಠವಂ
ಬೋಧಿಸುವೊಲ್ ಜೀವನ ಧರ್ಮ ಬಂಧುರತೆ
ಸುಕರ್ಣಾಕರ್ಣೀಯವಾದ ಸತ್ಯಸುಂದರಂ !

ಇಂದಿನೀ ಜಾಯಮಾನದಲಿ ನ್ಯಾಯ ನೀತಿಗಳ್
ಕನ್ನಡಿಯ ಗಂಟೆನೊಲ್ ಕೈಗೆಟುಕದಿಹ ಸೊತ್ತು !
ಎಲ್ಲೆಲ್ಲಿಯುಂ ವಿಧ್ವಂಸಗಳ್ ಅನಾಚಾರ
ಅತ್ಯಾಚಾರ ಅನ್ಯಾಯಗೈವುದೆ ಅಧಿಕವೀ
ಲೋಕದಲಿ ! ಅರಿತರಿತು ದಿಕ್ಕೆಡುವ ಲೋಗರ
ಮನವೆಂತೊಪ್ಪುದು ಕೆಸರ ಕೊಚ್ಚೆಗೆ ಕೈಯೊಡ್ಡಿ ?
ಭಾರತೀಯ ಸಂಸ್ಕೃತಿ ಕೀರ್ತಿಯು ಕಸ್ತೂರಿಯ
ಪರಿಮಳಂ ಬೀರಿ ಮುಂಬೆಳೆದು ಗೌರವಾನ್ವಿತಂ !
ವಿದ್ಯಾಸರಸತಿಯನಾರಾಧಿಸಿದ ಜ್ಞಾನಿಗಳ
ವೃತ್ತಿ ಪ್ರವೃತ್ತಿಗಳ್ ಛಂದೋಲಯ ಬದ್ಧಗತಿ
ನವ ಜೀವನಾಟವಿಯಲಿ ಎನಲಾ ಬೆಳುದಿಂಗಳ

ಕ್ಷೀರ ಸಾಗರದಲಿ ಮೊಸಳೆಗಳವತರಣವೆಂತೈ ?
ಸುಜ್ಞಾನಿ ಅಧಿಕಾರ ಪೀಠಸ್ಥರ್, ಲೋಕ ಪ್ರಜ್ಞೆ
ಪಡೆದ ಮತಿವಾನ್ಯರ್ ನೀತಿಗೆಟ್ಟು ನಾರ್ದೊಡೆ
ಎಲ್ಲಿಯು ಪರಿಹಾರವೊ ಈ ಧರಾ ತಲದಲ್ಲಿ ?

ನ್ಯಾಯಾಧಿಪತಿಯೆಂಬ ಪೆಸರ್ವೆತ್ತ ಪ್ರಖ್ಯಾತ
ಸಾವಿರ ಬದುಕಿನ ತೆರೆಯ ಮರೆಯಲಿ ನರಳುತಿಹ
ಅನನ್ಯ ಅಮೂಲ್ಯ ನ್ಯಾಯ ನೀತಿಯ ಪಸುಳೆಯಂ
ನೆನೆಯುತಿರೆ ಅಂತರ್ಯದಲಿ ಕಸಿವಿಸಿಯನುಣುವ
ಸಂಕಟದ ಉಂಬಳಿಯು ತಾನಲ್ಲದೇನಲ್ಲಂ !
ಸತ್ಯದೆಡೆಯಂ ಮಿಥ್ಯೆಯಾವರಿಸಿ ಧೈರ್ಯದಿಂ
ವಿಜೃಂಭಿಪುದಂ ತ್ರಿಲೋಕವೇ ಬಲ್ಲುದೈ !
ಇಂದಿನೀ ನಾಗರಿಕತೆ ಕಣ್ಣುಮುಚ್ಚಾಲೆ
ಆಡುತಿದೆ ಪ್ರಪಂಚದ ಕಣ್ಣಿಗೆ ಮಣ್ಣೆರೆಚಿ.

ಮುಸ್ಸಂಜೆಯ ಪೆಂಪಿನಲಂಪು ಮೆಲ್ಲನೆ ಅಳಿದು
ಮಾಸುತಿರೆ ನಿಶಾದೇವಿ ಕರ್ರನೆ ಕರ್ಪುಡಿಗೆ
ಧರಿಸಿ ತಾನೈದಳ್ ಪಜ್ಜೆ ಪಜ್ಜೆಯ ಮುಂದಿಡುತೆ
ನಕ್ಷತ್ರಗಳ ಮಣಿಮಾಲೆಯಂ ಚೆಂದದಿಂದಲಿ
ಸೂಡಿ, ಬೃಹದ್ ನಗರಿ ವಿಶ್ರಾಂತಿಯಂ ಬಯಸಿ
ತಣ್ಣನಿರುತಿರೆ ಮರುತನ ಚಾಮರ ಸೇವೆ
ನಡೆದತ್ತು ಯಥೋಚಿತವಾಗಿ. ಮಹಾನಗರಿಯ
ವಸತಿಯೊತ್ತಡದಿಂ ನಸುದೂರದೊಳ್ ನೆಲೆಗೊಂಡ
ಸುಂದರ ನಿವಾಸವೊಂದು ಕದವಂ ಮುಚ್ಚಿ, ಎಡೆ

ಎಡೆಯ ಬೆಳಕಿಂಡಿಯ ಕಣ್ಗಳಿಂ ನೋಡುತ್ತೆ,
ಶಾಂತವಲಯದ ಶಾಂತಿ ಸುಧಾಸೂತಿಯ ಮಧುರ
ಮೋಹಕತೆಯಲಿ ಮೈಮರೆತಂತೆವೊಲ್ ಸದ್ದಿನ
ಸೊಲ್ಲಿಲ್ಲದೆ ತಾನಿರ್ದುದು ಪರಮ ಶಾಂತಿಯಲಿ.
ಮನಮೋಹಕ ಪೊಳ್ತು ಮನೋರಮಾ ಶಾಂತಿಯಂ
ಮೈಗೊಂಡು ಪುನೀತಮಿರೆ ಭವ್ಯಾಲಯದೊಡೆಯ
ನ್ಯಾಯಾಧಿಪ ಆರಾಮದಿಂ ವಿಶ್ರಾಂತಿಯಲಿ
ಕೆಡಗಿ ಪತ್ರಿಕಾವಲೋಕನದಲಿ ಮನವಿಟ್ಟಂ.
ನಿಶಾದೇವಿಯುಂ ಮೆಲ್ಲಮೆಲ್ಲನೆ ಪಜ್ಜೆಯಂ
ಮುಂದಿಡುತಿರುತಿರೆಯಿರೆ ಎಲ್ಲೆಡೆಯು ಕಳ್ತಲೆಯು
ಹರಡಿದುದು ಇಳೆಯಮೇಲೆ ಕರ್ಪುತೆರೆ ಹರಡಿದೊಲ್.
ವೀಥಿ ವೀಥಿಯ ದೀಪಗಳಿರ್ದುವು ಉಜ್ವಲಿಸಿ.
ಪೊಳ್ತುರುಳ್ದು ನಿಶಾರಮಣಿ ಪಜ್ಜೆ ಪಜ್ಜೆಯಂ
ಮುಂದಿಡುತಿರೆ ವೀಥಿಯಲಿ ತರತರದ ವಾಹನ
ಚಕ್ರಚರಣಗಳ ಸದ್ದು ವಿರಳಗೊಳುತಲಿರ್ದುದು
ಅಡಗಿತು ಪಥಿಕರ ನಿಚ್ಚ ಸಂಚರಣ ಗಡಣಂ.
ಪ್ರಶಾಂತ ಶಾಂತಿಯಲಿ ಉರುಳಿದುವೆನಿತೋ
ಗಳಿಗೆಗಳ್ ಸಾಲ್ಗಟ್ಟಿ ಮೋಹಸೂತ್ರದಿ ಕಟ್ಟಿ
ಸೆಳೆವ ಪಾಂಗಿನಲಿ. ದಿನಾಂತ ಕಾಲೀನ ಪ್ರಶಾಂತಿ
ಮೈಮನಂ ಹಗುರಗೊಳಿಸಿರುರೆ, ಕೊಠಡಿಯಲಿ
ಮೆತ್ತೆಯೊತ್ತಿ ಮಕಮಲ್ ಹಾಸಿದ ಪೀಠದಲಿ ಶಾಂತಿ
ಸಮಾಧಾನದಿಂ ಮಂಡಿಸಿ ಗ್ರಂಥ ಲೋಕದಲಿ
ಮನವಿಟ್ಟಿರ್ದನಾ ನ್ಯಾಯಾಧಿಪಂ. ಸೆಜ್ಜೆ
ಸೇರುವ ಕಡೆಯ ಗಳಿಗೆ ಬಳಿಸಾರುತಿರೆ ಪೊರಗೆ

→

ತಲೆವಾಗಿಲಂ ತೆರೆದ ಸದ್ದು ಬಿಳ್ದುದು ಕಿವಿಗೆ.
ನೀರವತೆಯ ಮಸ್ತಕದ ಮೇಲೆ ಕೊಡತಿಯಿಂದೆ
ಬಡಿದವೊಲ್ ಶಬ್ದಾಯಮಾನವಾಗೆ ಕಂಗಳ್
ಹೊರಳಿದುವು ಬಾಗಿಲಿನತ್ತಂ. ನಸುವೊಳ್ತಿನಲಿ
ದೌವಾರಿಕಂ ಒಳಗೈದು ನಯವಿನಯದಿಂ
"ಜೀಯ, ಶ್ರೀಕಂಠಸ್ವಾಮಿಗಳೈದಿಹರ್ ತಮ್ಮ
ದರ್ಶನಕೆ" ಎನುತೊರೆದನ್ ಎಂದಿನ ಮಾಳ್ಕೆಯಲಿ.
ಕೇಳ್ದದಂ ಅನುಭವೀ ನ್ಯಾಯಾಧಿಪಂ ಚಣಂ
ಯೋಚಿಸಿ ಗಡಿಯಾರದತ್ತ ಕಣ್ ಹೊರಳಿಸಿ ನೋಡೆ,
ರಾತ್ರಿ ಒಂಭತ್ತರ ಘಟೆ. ಆತನ ಗೆಣೆತನಂ
ಅನ್ಯೋನ್ಯಮಯ, ಬಾಲ್ಯದ ಸಹಪಾಟಿ. ಮೇಣವನ
ಮೊಕದ್ದಮೆ ಇಹುದೆನ್ನ ಮುಂತೆ ಎನೆ ನ್ಯಾಯಮಂ
ಅಲಕ್ಷಿಸಿ ಗೆಣೆತನಮಂ ಲೆಕ್ಕಿಸಬಹುದೇಂ ? ಎಂಬ
ನೆನೆವರಿಕೆಯೊಳ್ ತಾನಿರುತಿರಲಾ ಗೆಣೆಯನುಂ
ನ್ಯಾಯಾಧಿಪನಪ್ಪಣೆಯಂ ಕಾಯದೆಯೆ ತಾನೆ
ಮೆಲು ಹೆಜ್ಜೆಯಲಿ ಒಳಗೈತಂದಂ. ಸುಖದುಃಖ
ಸಂಕಟಗಳ ಗಣಿ ನಡೆತಂದವೊಲ್, ಮೈಬಾಗಿ
ವಂದನೆಯನುಸಲಿಸಿ ಬಳಿಯಲಿ ಕುಳ್ಳಿರ್ದು ನುಡಿದಂ,
"ಕ್ಷಮಿಸೈ, ಎನ್ನೊಂದು ತುರ್ತು ಕಾರ್ಯಗತಿಯಿಂದಾಗಿ
ನಿನ್ನಪ್ಪಣೆಯಂಬಡೆದು ಬರುವೊಡೆ ಇಂದಿಲ್ಲ
ಪೊಳ್ತಿನಗೆ. ಆನೀಗಳ್ತೆ ಉಗಿಬಂಡಿವಿಡಿದು
ಚಂಪಕಾಪುರಿಗೆ ಪಯಣಿಸಲಕ್ಕು. ಕ್ಷಮಿಸೆನ್ನ
ಅವಿಧೇಯತೆಯಂ."

ಆಗಳ್ ನ್ಯಾಯಾಧಿಪಂ

→

ಮೊಗದೊಳ್ ಕಿರುನಗೆಯಂ ಅರಳಿಸಿ ನುಡಿದನಿಂತು
"ಇರಲಿ, ಬಿಡು, ಏನಂತ ವಿಶೇಷಂ ?" ಅದರ್ಕಾ
ಶ್ರೀಕಂಠಸ್ವಾಮಿ "ಕೇಳ್ಳೈ, ತಿರುಪತಿಗುಯ್ದ್ದಾನು
ಪಿಂದಿರುಗಿ ಬಂದೆನೀಗಳ್ತೆ ನಿನ್ನಂ ಕಾಂಬೊಂದು
ಪಿರಿಯಾಸೆಯಲಿ. ಬಾಳ್ ಬನದ ಸುಡುಬೆಂಕೆಯುದು
ಸುಡುತಿರಲೆಣೆಯಿಲ್ಲದೊಲ್ ಏಂಗೈಯಲರಿಯುದು
ಚಿತ್ತಕಲ್ಪ. ಮನಶಾಂತಿಯುಂ ಇಲ್ಲದಿರುತಿರೆ
ನಿನ್ನೊಳಗೇಂ ಲಜ್ಜೆ ಪೇಳ್ ? ಎನ್ನಯ ಮಾನ
ಮರ್ಯಾದೆಯಂ ನಿನ್ನೊಳಗಡವಿಟ್ಟಿರುವೆನೆನೆ
ಎನಿತೊ ಭರವಸೆ ಕಣಾ ! ತಿರುಪತಿಯ ಮಾಪ್ರಭು
ವೆಂಕಟೇಶ್ವರನ ಸೇವೆಗೆ ಅರ್ಪಿತವಾದುದು
ಒಂದುಲಕ್ಷ ರೊಕ್ಕಮಿಹ ಥೈಲಿ, ನಿನಗಿಂದನಿತೆ
ದ್ರವ್ಯಂ ಆತ್ಮೀಯ ಗೆಣೆತನದ ಕುರುಹಾಗಿ
ಮೇಣೆನ್ನ ಮಾನವುಳಿಪ ಅತಿಶ್ರಮ ಶ್ರದ್ಧೆಗಳ
ಸಾಧನೆಯ ಸಲುವಾಗಿ ಕೈಗಾಣಿಕೆಯೆಂದೇ
ಅರ್ಪಿತಂ. ನೀನಿದಂ ತಪ್ಪಾಗಿ ಭಾವಿಸದೆ
ನೊಂದು ನೋಯದೆ ಗೆಣೆಯನೆಂದೆನ್ನ ಮನ್ನಿಪುದು.
ಇದೆನ್ನಯ ಪ್ರೀತಿಯೊಲ್ಮೆಯಲ್ಲದೆ ಬೇರಲ್ಲ,
ಗೆಣೆಯಾ !" ಎನುತೆ ಹಣದ ಥೈಲಿಯಿಟ್ಟು ಬಳಿಕಂ
ನಿಲ್ಲದೆ ಪೊರವಂಟಂ. ನ್ಯಾಯಾಧಿಪಂ ಮಿಡುಕಿ
"ಮಿತ್ರಾ ! ಇದೇನಿದು ?" ಎನುವನಿತರೊಳಾಧನಿಕ
ಬಿರುಗಾಳಿಯೊಲ್ ದಾಂಟಿ "ಇನ್ನೊಮ್ಮೆ ಕಾಂಬೆನ್ನೈ"
ಎನುತೆ ತನಗಾಗಿ ಕಾದಿರ್ದ ವಾಹನವೇರಿ
ಮಿಂಚಿನೊಲ್ ಮಾಯವಾದನ್ ತಾನರಿಯದವೊಲ್.

→

ನ್ಯಾಯಾಧಿಪಂ ಸ್ತಬ್ಧಬುದ್ಧಿಯಿಂ ಮಿಣ್ಣನಿರೆ
ಆ ಗಳಿಗೆಯುಲಿ ನೆಟ್ಟನಿಟಾಗಲಿಗಳ ದಿಟ್ಟಗೆ
ಹಿತವಾಗಿ ಕಂಡುದುದು ದೂರ ಭವ್ಯ ಭವಿಷ್ಯಂ.
ನಸುವೊಳ್ತು ಭಾವನಾವೇಶಂ ಮನಃಚಿತ್ತ
ಕಲ್ಪವುಂ ಮಥಿಸಿದುದು ಯಂತ್ರಗತಿಯುಲಿ. ಪೊಳ್ತು
ಉರುಳಿದುದರಿದನಿಲ್ಲ. ಎರ್ದೆಯುತಿ ತುಡಿತವುಂ
ಗಮನಿಸಿದನಿಲ್ಲ. ಹಣದ ಥೈಲಿಯು ತಾನೊಂದೇ
ಕಣ್ಮನ ಸೆಳೆವ ಮಂತ್ರ. ಈಗಳೇಂಗೈಯುಲೆಂಬುವ
ಪ್ರಶ್ನೆಯುಧು ಗುಂಗಿಯೊಲ್ ಮನವಂ ಕೊರೆಯುತಿರಲ್
"ಇಂದಿನೀ ಕಾಲಮಾನದಲಿ ಎಲ್ಲ ರಂಗದ
ಕಷ್ಟ ಕಾರ್ಪಣ್ಯಗಳ್ ಸದ್ದಿಲ್ಲದೆ ಕಳೆಯಲ್
ಕಾರ್ಯ ಕಾಂಚನವಾಶ್ರಯಂ" ಎಂಬ ಸತ್ಯವ
ಅರಿತು ನುರಿತ ಪ್ರಸಂಗಮಿರೆ ಮತ್ತೇನಿದರ
ಪೆರ್ಚಳಂ ? ಎಲ್ಲರ್ ಬದುಕಿ ಬಾಳ್ವುದು ದ್ರವ್ಯದ
ಸುಖಾಶ್ರಯದಿಂದೆ. ಆರಾರ ಸೇವೆಯುಂ ಬರಿ
ಗೈಲಿ ನಡೆಸಲಕ್ಕುಮೆ ? ಎಲ್ಲವಗೆಯ ಬನ್ನಂ
ಕಳೆಯೆ ಕಾಂಚನ ಮಾಶ್ರಯಿಪುದು ಅನ್ಯಮಿಲ್ಲಂ.
ಇಬ್ಬಗೆಯ ಸುಖಶಾಂತಿಯುದು ದ್ರವ್ಯವಂ ನೆಚ್ಚಿ
ನಡೆಯೆ ನೆಚ್ಚುಗೆಡದೆನೆ ಮತ್ತೇಕೆ ಗಾವರಂ ?
ಇಂದು, ಎಲ್ಲಿ ಯಾವೆಡೆ ಪಕ್ಷಿನೋಟ ಬೀರಲಾ
ಎಡೆಯೊಳ್ ಕೆಲಸ ಕಾರ್ಯಗಳಡಿಪಾಯ ದ್ರವ್ಯದ
ರಾಶಿಯುಲ್ಲದೇನಿಲ್ಲಂ. ಪರಸ್ಪರಮೆಲ್ಲ
ಮನಮೆಚ್ಚಿರಲೆಲ್ಲಿಯು ಆಶಂಕೆ ? ತಿರುಪತಿಯ
ಮಾಪ್ರಭು ತಿರಸ್ಕರಿಸಿದನೇಂ ದ್ರವ್ಯವಂ ?

ಅಲ್ಲಿಯುಂ ಇಬ್ಬಗೆಯ ಪರಿಹಾರವಿರಲ್ಕದು
ದುಃಖ-ಕಿನಿಸಿಗೆಗಳಿಲ್ಲವೆಂಬುವ ಚಿಂತನಾ
ವೇಶದಲಿ ವಿಚಾರ ವಿಮರ್ಶೆಯ ಕಡಿಗತ್ತಿಯ
ಬೀಸಿವೀಸಿ ದ್ರವ್ಯದ ಥೈಲಿಯುಂ ಪಿಟಾರಿಯ
ತಳದಲಡಗಿಸಿರ್ಕಿದನಾ ನ್ಯಾಯದ ಅಧಿಪತಿ !

— o —

ಪ್ರಕೃತಿಯಾರಾಧನೆ

ಓ! ಪ್ರಭುವೆ! ನಿನ್ನ ಕಾಣಲಾಗದ, ಕಂಡು
ಅರಿಯಲಾಗದ ದಿವ್ಯ ಸಂಕಟದುಪಶಮನಕೆ
ಮಹತ್ವೈಭವೋಪೇತವಾದ ಪ್ರಕೃತಿಯೇ
ನಿನ್ನ ಪೂಜೆಗೆ ಪ್ರತಿಕೃತಿಯಿರೆ ನಿತ್ಯಂ
ಬೇರೆಡೆ ಅರಸಿಕೊಂಬ ದಾವಂತವಿಲ್ಲಯ್ಯ !
ಅಣುತೃಣಗಳಲಿ ನೀನಿಹೆಯೆಂಬುದಂ ಮರೆತು
ಪುಡುಕುವುದು ಸರ್ವತ್ರ ಬೃಹತ್ತಿನಲ್ಲಿಯೇ !
ಪ್ರಕೃತಿಯಾರಾಧನೆಯಲಿ ಮೈಮನದುಂಬಿ
ಭಕ್ತಿಭರಿಸದಿರೆ ಘೋರ ವ್ಯರ್ಥವಿಸಾ ಬರ್ದುಕು
ಜಗತ್ ಪರಿಪೂರ್ಣ್ಯದಾಲಯದಿ ಜನಿಸಿ. ಸೌಭಾಗ್ಯ
ದಾಯಿ ಪ್ರಕೃತಿಯೆ ಮಾತೆ ! ಪ್ರಕೃತಿಯೆ ರೋಚಕ !
ಪ್ರಕೃತಿಯೆ ಪ್ರತ್ಯಕ್ಷ ಪರಬ್ರಹ್ಮ; ಪರಾಶಕ್ತಿ ;
ಘನನಿಬಿಡ ವನಧಾತ್ರಿ ಪರಿಪೂರ್ಣ್ಮ ಮಾತೃಕೆ.
ನೀರವ ನಿರ್ಮಾನುಷ ನಿರಾತಂಕ ಗಿರಿಬೆಟ್ಟ
ಪರ್ವತಗಳೆ ಪರಮಾತ್ಮನ ಅಪರವತಾರ ಕಣ !
ನಿತ್ಯ ಉದಯಾಸ್ತ ಶೋಭೆಯ ಕಮನೀಯ
ಕನಕ ಕಾಂತಿಯಲಿ ಮಿಂದು ಓಕುಳಿಯೊಲ್ ರಂಜಿಪ
ಸ್ವಚ್ಛಸ್ಫಟಿಕ ಜಲನಿಧಿ ನೀನಲ್ತೆ ಪ್ರಭುವೆ !
ಪಚ್ಚೆ ವರ್ಣಾರ್ಣವದ ಶ್ಯಾಮಲ ಸುಷುಪ್ತಿಯಲಿ
ರಾರಾಜಿತ ಕುಸುಮ ಕುಲಕೋಟಿಯ ಸೌಗಂಧ
ಸಂಭ್ರಮ, ಪಕ್ಷಿ ಕೂಜನ ಮಧುರರವ ಮಂಗಳದ
ರಾಗಮಾಲೆ ತವ ದಿವ್ಯ ಸನ್ನಿಧಿಗೊಯ್ಯುವೇ ?
ಏಕಾಂತ ಧ್ಯಾನದಲಿರಲಾನು ಪರಾಮರಿಸು
ಎನ್ನ ಶಾಂತ ಪ್ರಶಾಂತ ಮಾಶಾಂತ ಸಿರಿಯೇ ! →

ಬೃಹದ್ ವಿಶ್ವ ಪ್ರಕೃತಿಯು ಅಂಶ ಅಂಶದಲಿ
ಪರಮಾತ್ಮನಿರುವಂ ಅರಿವುದೆ ಶ್ರೀದರ್ಶನಂ !
ಘೋರಾಟವಿ ಹೇಡಿ ಮನುಕುಲಕೆ ಭಯ ಭೀತಿಯು
ಅಂಶಮೆನೆ ರಸಿಕ ಧೀರಂಗೆ ಬಹು ಮೂಲ್ಯಮಾ
ಪಚ್ಚಪಸುರಾಂತ ಸಸ್ಯಕೋಟಿ ಕಲಾ ಲಕ್ಷ್ಮಿ !
ಮಾಗಿಯ ಬಯಲಲಿ ಹುಲ್ಲೆಸಳುಗಳಲಿ ತುಂತುರು
ತುಂತುರ್ರೈಸಿ ಮೂಡಿದ ಹನಿಮುತ್ತಿನ ಜಾಲಂ
ಹೊಂಬಿಸಿಲ ಪ್ರತಿಫಲನದಿಂ ಜಗಜಗಿಸುತಿರೆ
ರಸಮತಿಗದು ಅಪೂರ್ವ ಬಂಧುರ ಸಿರಿಸಗ್ಗದ
ಪಚ್ಚರನ್ನಗಂಬಳಿಯು ಮೇಲೆ ಸುರಿದ ಸ್ವಚ್ಛ
ಬಜ್ಜರದ ಕಿಡಿಗಳಂತೆವೊಲ್, ಎನಲದು ತಪ್ಪೆ ?
ನಗುವವರ್ ನಗಲಿ, ಹೀಯಾಳಿಪರ್ ಎದುರ್ವೆತ್ತು
ಹೀಯಾಳಿಸಲಿ, ತುಚ್ಛೀಕರಿಸಲಿ ಎನಗೆ ನಿನ್ನ
ಪ್ರಕೃತಿಯೇ ದಿವ್ಯ ಪ್ರತಿರೂಪ ದೊರೆಯೇ !

ಊರೂರುಗಳ ಸುತ್ತಿ ತೀರ್ಥಯಾತ್ರೆ ಕೈಕೊಂಬ
ವ್ಯರ್ಥಶ್ರಮವೇಕೆ ? ಸನಿಹಮಿಾ ತರುಕೋಟಿಯು
ಶ್ರೀಕಾಶಿಯೇ ಇಲ್ಲಿರುತಿರೆ ಭಾವಿಸು ಮನವೇ !
ರಸದೃಷ್ಟಿಯ ಶ್ರೀರಸವಾಂತು ಪರಮ ಪವಿತ್ರ
ದರ್ಶನೀಯ ಯೋಗಮಿರೆ, ಕಣ್ತುಂಬ ಕಾಂಬುವ
ಭಾವಮಿರೆ ಇದ್ದೆಡೆಯೆ ಸಗ್ಗಕೆ ಬಟ್ಟೆ ತಾನಾದತ್ತು;
ಕವಯಿತ್ರಿ ಮನದ ಕಗ್ಗಾಡಿನಲಿ ಮಂದಾರ
ಸುಮ ಸಮುಚ್ಚಯಮರಳಿಸುವ ಪ್ರಕೃತಿಗೆ ಎನ್ನ
ನಿತ್ಯ ನಮನಂ ! ಮತ್ತೆಮತ್ತೆ ನಮನಂ !

— o —

ದಂಡಕಾರಣ್ಯ

ವರಂವನಂ ವ್ಯಾಘ್ರ ಗಜಾದಿ ಸೇವಿತಂ
ದ್ರುಮಾಲಯಃ ಪತ್ರಫಲಾಂಬು ಭೋಜನಂ ।
ತೃಣಾನಿ ಶಯ್ಯಾ ವಸನಂ ಚ ವಲ್ಕಲಂ

ಭಾರತದ ವರ್ಷದ ಸಿರಿಯೊಡಲ ಮಧ್ಯೆ ವನವಾರ್ಧಿ
ತೊಟ್ಟಿಲಲಿ ಹಸುರುಡೆಯನುಟ್ಟು ಪಚ್ಚೆಕೂಸೆನಲ್
ದಟ್ಟೈಸಿದ ಮಹಾಟವಿ ಪುರಾಣ ಪ್ರಸಿದ್ಧ
ದಂಡಕಾರಣ್ಯವದು ಭೀರುಗಳಿಗೆ ಭೀಕರ–
ಭಯಾನಕವಿರೆ ವನಚರಿಗಳಿಗದು ವನಲಕ್ಷ್ಮಿ
ತಾನಹುದು ನಿಜದಿಂ. ಪಸುರುಕ್ಕುವ ವನಧಿಯಲಿ
ರಸಸ್ಫೂರ್ತಿ ಉಕ್ಕಿದೊಲ್ ವಿವಿಧ ಫಲಪುಷ್ಪಗಳ್
ಮಘಮಘಿಸಿ ಅರಳಿರಲ್ ದಂಡಕಾರಣ್ಯಮಂ
ಪ್ರದರ್ಶನಕಿತ್ತವೋಲ್ ಚೆಲುವಿನ ಸಂಭ್ರಮ
ಬಿಂಬಿಸಿತು ಪುಣ್ಯ ಪ್ರಸನ್ನತೆಯಲಿ. ವಿಹಂಗ
ಸಂಕುಲದಿಂಚರಂ, ಭ್ರಮಂತಭ್ರಮರಂಗಳ
ಝೇಂಕೃತಿ ಶೃತಿಯುಂ, ತೆಂಕಣದೆಲರು ಸುಳಿದು
ಸುಯ್ದುಯ್ದು ಬೀಸುವ ತನಿಯಿಂಪು, ಪೊಸದಳಿರಿನ
ಸೊಂಪು, ನಿರ್ಜನ ನೀರವತೆಯ ಸತ್ ಶಾಂತಿಯುಂ,
ವನಧಿಯ ಅನನ್ಯ ಅನುಪಮ ಸೌಂದರ್ಯ ಸಿರಿಯುಂ
ಹರಿವ ನದನದಿತೊರೆಗಳ್ ಕಂದರದಲಿ ಜಿಗಿದು
ಮೊರೆದು ಇಕ್ಕಟ್ಟಿನಲಿ ನುಗ್ಗಿ ಜಡಿದಾರ್ದು ನೆರೆ
ನೊರೆಗರೆದು ಮುಂಬರಿವ ಮನಮೋಹಕ ಲೀಲಾ
ಶೈಲಿಯುಂ ಸರ್ವಮಂ ಒಗ್ಗೂಡಿ ಸಮೃದ್ಧ

→

ಲೋಕದಲಿ ಶಾಂತಿವ್ರತ ತುಂಬಿದುದು ಶ್ರೀ ಸೀತಾ
ರಾಮರ ಪರಮ ಪವಿತ್ರ ಪ್ರೇಮಮಯ ನೋಂಪಿ.

ಓವೊ ! ಏಂ ಅಪೂರ್ವತರ ಸಸ್ಯಗಣ ಸಂಗರಂ ?
ವಿವಿಧ ವರ್ಗದ ಪೆರ್ಮರಗಳ್ ಮುಗಿಲಂ ಮುಟ್ಟೆ
ಮುದ್ದಿಪಂತೆ ನಿಗುರ್ದು ಹೆಗ್ಗಂಬಗಳವೊಲ್
ಗಗನಕೇರ್ವಟ್ಟ ದೃಶ್ಯಮಾನ ಸೌಂದರ್ಯರಾಶಿ !
ಸಂಜೀವನಾನಂದ ಮೋದದಿಂ ತಲೆದೂಗಿ
ತಂಗಾಳಿ ಸುಯ್ಗಾಳಿ ಬಲ್ಗಾಳಿಗಳ ಕೂಡಿ
ಓಲಾಡುತಿಹವೊ ಎನೆ ನಭೋದೇಶದಲಿ ಸಿರಿ
ಪೊಣ್ಮಿಸುವ ಸಸ್ಯಲೋಕ ವಿಸ್ಮಯಂ. ಎಲ್ಲೆಡೆಯು
ಪಚ್ಚರಾಜಿಯು ಪಲ್ಲವ ಪಾಣಿಗಳಲಿ ಮುಗ್ಧ
ಮನೋಹರತೆಗುಪಮಾನವಾಗುವೊಲ್ ಸಕಲತರ
ಪೂವೊಗ್ಗುಗಳ ಸಿಂಗರಂ, ಕ್ರಿಮಿಕೀಟಗಳ
ಕಿರುಕಂಠನಾದ 'ಜೀಯ್' ಎನುತೆ ಎಡೆವಿಡದೆ
ಜೀರಿಡುವ ಶಬುದಂ, ಸುಯ್ಗಾಳಿಯಲಾಡುವ
ಎಲೆಎಲೆಗಳ ಮರ್ಮರ ಶ್ರುತಿಯುಂ ಮನೋರಮ
ವೈಖರಿಯಲಿ ವೈದೋರ್ಪ ರಾಗಾರುಣತಾನಂ !
ಘನನಿಬಿಡ ಗಂಭೀರ ಕಾನನಾಂತರಂ ನಡು
ಹಗಲ ಚಂಡ ಮಾರ್ತಾಂಡನುರವಣೆಯುನಡಗಿಪ
ತಣ್ಪಿನ ತನಿಯಂ ಪಸರಿಸುವ ಪುಷ್ಕರಣಿಯಿಂ
ತಣ್ಪುಂಡು ಪೈಗೊಂಡ ಪಚ್ಚ ಸಸ್ಯಗಣಗಳ್
ನಳನಳಿಸಿ ಬೆಳೆದಿರಲ್ ಕೆಂದಳಿರ್, ಹೊಂದಳಿರ್
ಬೆಳ್ದಳಿರ್ ಪಚ್ಚದಳಿರ್ ಮಿಸುನಿಯ ಲೇಪಮಂ

→

ಒರೆದೊಲ್ ಮನಮೋಹನೀಯ ಶೈಲಿಯಲಿ
ಕಣ್ಗೆಡ್ಡಮಾದತ್ತು ದಿವ್ಯ ಲಿಖಿತ ಚಿತ್ರದ
ಪಾಂಗಿನಿಂ. ಬಲ್ ಬಲೋನ್ನತ್ತ ದ್ರುಮಂಗಳ್
ದೃತ್ಯ ವಿನ್ಯಾಸದಿಂ ಶಾಕೋಪಶಾಖೆಗಳ
ಹರವಿ ಸುತ್ತಲ್ ಭೀಮಭೀಷಣ ಕುಟಿಲ ಜಟಿಲ
ಕರಾಳ ಕುಲಕೀರ್ತಿಯಂ ಪಸರಿಪ ಹುಮ್ಮಿನ
ಬಿಮ್ಮಿನ ಕಠಿಣಜಂಜಡಮೈಸಿತಟವಿ ಇನಿತು
ಬಿಡಿಗೊಂಡ ತಾಣಮಿಲ್ಲದೊಲ್. ಆ ಬೃಹತ್ತಮ
ವನಶ್ರೇಣಿಯೊಳ್ ಫಲಫಲಿತ ಸಸ್ಯ ಬಳ್ಳಿ ಗಿಡ
ಮೇಣ್ ವೃಕ್ಷಗಳ ಸಂದೋಹಕೆ ಕೊರಮಿಲ್ಲಂ.
ಹಲಸು ಮಾವು ನೇರಿಳೆ ಪನ್ನೇರಿಳೆ ಕಿತ್ತೀಳೆ
ದಾಳಿಂಬೆ ಮಾದಲ ಗಜಲಿಂಬೆ ಗಣಪೆ ನೆಲ್ಲಿ
ತೆಂಗು ಕಂಗು ಕರ್ಜೂರ ತುಂಬಾರಲ ಕಬ್ಬು
ಹಿಪ್ಪನೇರಳೆ ಬಾಳೆ ಹೊಂಬಾಳೆ ಕೆಂಬಾಳೆ
ನೀರುಳ್ಳಿ ಜೋಳ ಕೆಂಜೋಳ ಸಾಸಿವೆ ಎಳ್ಳು
ಮೆಣಸು ಹುಣಸೆ ಮೆಣಸಿನಕಾಯಿ ಶುಂಟಿ ಗಸಗಸೆ
ಮುಂತಪ್ಪ ಸಂಬಾರಯುಕ್ತ ನಲ್ ಉಣಿಸುಗಳ
ಕೊಡುಗೈಯಿನ ವನವಾರ್ಧಿ ಮನಕುಲದ ಮೇಣುಂ
ಪ್ರಾಣಿ ಪಕ್ಷಿಗಳ ಮಹಾ ಮಾತೃಕೆ ! ಪರಿಪೂಜಿತೆ !
ಕುಸುಮ ಕೋಟಿಯ ದಿವ್ಯ ಗಂಧ ಪರಿವಳ ನಿಚ್ಚ
ಭೂಜೇಶ ಕುಲಬಾಂಧವರ್ಗೆ ಅಮಿತೋಲ್ಲಾಸ
ಮಧುಪಾನಮೀಯೆ ಪಸರಿಸಿದುದೊ ಎನೆ ಕುಸುಮಿತ
ಬಗೆವಗೆಯ ಸುಮಸಮುಚ್ಚಯದ ಗಂಧ ವಿಶೇಷ
ಮಾಧುರ್ಯ ಜೀವಮಂಡಲಂ ನೆರೆಮುತ್ತಿರೆ

→

ಜಗವೋ ಮಧುರಮಯಂ ಮನೋಗತಿಗೆ. ಎಲ್ಲಿಯು
ಬಿಡಿಗೊಂಡ ತಾಣವಿಲ್ಲದೊಲ್ ದಟ್ಟೈಸಿರ್ಪ
ಮುಳ್ಳುಕಂಟೆಗಳ್ ಮುಂಬೆಳೆದು ಆಳೆತ್ತರದಿ
ಹರೆಗೈಯ ದಾಂಗುಡಿಗಳ್ ಚಾಚಿ ಅತ್ತಿತ್ತ
ವಕ್ರಗತಿಯಲಿ ತೊಡರ್ಚಿದತ್ತು. ಗರಿಕೆ ಹುಲ್ಲು
ಹಳುಕಳೆಗಳ್ ಮುಂಬೆಳೆದು ಕೋಂಟೆಯೊಲ್ ತಡೆದಿರೆ
ಎರ್ದೆಗೊಟ್ಟು ನುರ್ಗುವುದು ಕಡು ಕಷ್ಟವನದಲಿ.
ಮತ್ತಾ ಅನನ್ಯ ಅದ್ಭುತ ಸಸ್ಯ ಗೋಷ್ಠಿಯಲಿ
ಮೈಯೊಡೆದ ದೀರ್ಘ ವಕ್ರಾಕಾರದ ಸುನೀಲ
ನಿಚುಲವೆಲ್ಲಿಯೊ ಪುಟ್ಟಿದರ್ದು ಸುಳಿ ಸುತ್ತಿಸುತ್ತಿ
ದೂರದೂರ್ಧ್ವೈದು ನೆಲದ ಸಾರವಂ ಪೀರ್ದು ಮೈದುಂಬಿ
ಮತ್ತಾವ ಪೆಮ್ಮರದ ನೆತ್ತಿಯೊಳೊ ತಲೆಯೆತ್ತಿ
ನಿಂದು ಜೃಂಭಿಸಿರ್ದುದು ರಾಜ ಗಾಂಭೀರ್ಯದಲಿ !

ಥಾಂ ನದಿಯ ವಾಮಾಂಗದಲಿ ಗೌರವ ಭಾಗ್ಯದಿಂ
ನಿಲ್ದ ಬೋಧಿವೃಕ್ಷಕಿತ್ತ ಗೌರವವೊ ಎನಲ್
ಪದತಲದಲಾವ ಕಸಕಡ್ಡಿ ಮೂಡದೊಲ್
ಸುತ್ತಲೂ ಕರ್ಗಲ್ಲ ಹಾಸಿನ ಮಹಾ ಹರವು.
ಬದಿಯಲಿದ್ದ ಕಣಿಗಿಲೆಯ ಗಿಡಗಳಲಿ ಕೆಂಗೆಂಪು
ಬಿಳುಪು ಹಳದಿ ಮೇಣ್ ಎಳೆಗೆಂಪಿನ ಪೂವುಗಳ
ಸಿಂಗಾರ ಲೋಕೋತ್ತರಂ ! ಗಿಡಮರ ಬಳ್ಳಿಗಳ
ರೆಂಬೆರೆಂಬೆಗಳಲಿ ಕಲೆತ ಜೋರೆ ಕಾಮುಳ್ಳಿ
ಕಾಜಾಣ ಕಲವಿಂಕ ಮೈನಾ ಪಿಕ ಗಬ್ಬಿಲ
ಗುಬ್ಬಿ ಶುಕ ಪಿಕಳಾರ ಕಾಕ ಶುಕ ಮುಂತಪ್ಪ

→

ಎಲ್ಲ ಬಗೆವಗೆಯ ಪಕ್ಷಿ ಸಂಕುಲದ ಕೂಜನಂ,
ಮೇಣಲ್ಲಿ ನವಿಲ್‌ಗಳ್ ಕೇಗುತಿರ್ದುವೆಡೆ ಬಿಡದೆ.
ಬನಗೋಳಿಗಳ ಮೊಳಗು, ಸಾರಸಗಳ ಪುರುಡಿನ
ಕ್ರೇಂಕಾರವು ಸಂಕಲಿತವಾದುವು ಪಕ್ಷಿಗೊರಳ
ಕೂಜನದೊಳ್ ರಾಗಾನುರಾಗವವೆರಸುವೊಲ್.
ಮತ್ತಂ ವನ ಮೃಗಗಳ ವಿರಳಗತಿಯ ವಿವಿಧ
ಕಂಠಗಳ ವಿವಿಧ ಮೊಳಗು, ಹಯಗಳ ಹೇಷಾರವ,
ಪೇರಾನೆಗಳ ಬೃಂಹಿತಂ, ಕೇಸರಿ ಪುಲಿಗಳ
ಘರ್ಜನೆಯುಂ ವಿರಳವಾದೊಡವುದು ಸಂಮಿಳಿತಂ.
ರುಂದಾಟವಿಯಲಿ ರುದ್ರ ಮಧುರ ಚಿತ್ತಾರಗಳ್
ಸಂವ್ಯಾಪಿಸಿರಲ್ ಕಣ್‌ದಣಿಯೆ ನೋನೋಡಿಯುಂ
ಆದಿಮಧ್ಯಾಂತರೇಖೆಗಳನಳೆಯಲಾಗದ
ಮಾಳ್ಕೆಯಲಿ ದಶದಿಶೆಗಳಿಂಗೆ ಹರೆಗೈ ಚಾಚಿದ
ಕಾಂತಾರ ತ್ರೇತಾಯುಗೀಯ ಸೀತಾರಾಮ
ನಾಮರೋಚಕಂ ! ರಾಮಾಯಣ ಚರಿತ ರೋಮ
ಹರ್ಷಕಂ ! ಆನಂದ ಧ್ಯಾನವಿಲಯ ವಿಪ್ಲವಂ !
ಆಲ್ಲಲ್ಲಿ ಕಣ್ತುಂಬ ಕಾಂಬ ನಿತ್ಯನೂತನ
ಕಲ್ಬಂಡೆಗಳ್ ಗವಿಗಳ್ ಪಾಂಬಿನ ಹುತ್ತಗಳ್
ಲತಾ ಕುಂಜಗಳ್ ಹಾಸು ಬಂಡೆಯ ಪೀಠಗಳ್
ಮೇಣಲ್ಲಿ ಸಣ್ಣ ಪುಟ್ಟ ಸಸ್ಯಗಳೊತ್ತಡದಿಂ
ಚೆಲುವು ಚೆಲ್ವವೊಲ್ ವೈವೆತ್ರಸುಂದರವಾದ
ಕುಟೀರಾಳಿಗಳಂತೆ ಕಣ್ಗೆಸೆವ ಚಿತ್ರಣಂ,
ಮೂಗಲ್ಲು ಜೋಡಿಸಿ ಅಡುಗೆಗೈದವೊಲ್ ತೋರ್ಪ
ತಾಣಗಳ್ ಪೆಮ್ಮರಗಳ ಮೇಲೆ ಬಿಗಿದು ಕಟ್ಟೆ

→

ನಿರ್ಮಿಸಿದೊಲ್ ಕಾಂಬ ಮರದಟ್ಟಣೆಯುಂ ತಿರ್ಪ
ಹಲವು ರೂಪಾಂತರಗಳ್ ಮನವಂ ಶ್ರೀರಾಮ
ಚೇತನದೈಸಿರಿಯಲಿ ಮುಳುಗಿಪುದು ಎನಲೆಲ್ಲ
ಮನಃಕಲ್ಪನಾ ! ದಿವ್ಯಮಾ ಪರಿಕಲ್ಪನಾ !

ಮಹಾ ದಂಡಕಾರಣ್ಯಂ ಶಿಷ್ಟಪ್ರಾಣಿಗಳೊಗ್ಗರಕೆ
ತಾಯಾಗಿ, ಕ್ರೂರ ಮೃಗಗಳ ಮಾಸಂಗರಕೆ
ನೆಲೆಯಾಗಿ ರಾಗಾದಿರಾಗಗಳ ವಿರಾಗಕೆ
ಎಡೆಯಿತ್ತು ಸರ್ವಹಿತ ಸಮನ್ವಿತೆ ಮಾತೃಮಯಿ
ಎಂತಂತು ಭೀಮಭೀಕರಿಯುಂ ತಾನಹುದು ನಿಜ
ರೂಪದಲಿ. ಮೇಣಲ್ಲಿ ದಿನದಿನಂ ಭಯಂಕರ
ಮೃತ್ಯುರೂಪೀ ಸಬಲ ಶಕ್ತಿಯ ಜಿಹ್ವಗಹ್ವರಾ-
ಭಿಮುಖವಾಗಿ ಪರಿಧಾವಿಸುವ ದುರ್ಬಲ ಜೀವ
ಕಣಗಳ ಕರುಣಾಜನಕವೆನಿಪ್ಪ ಚಿತ್ತಾರ !
ನೀನಹುದು ಗೊಂಡಾರಣ್ಯ ! ನೀನಹುದು ಶುಭಾರಣ್ಯ !
ನಿನಗೆ ನಮೋನ್ನಮ :

— o —

ವಿಷಾದ ಚರಿತ್ರೆ

ಪೊಡವಿಯೊಳ್ ಪಡಿನಿಂದು ಪರಮ ರಾಷ್ಟ್ರವೆಂದೆಂದು
ಪೆಸರ್ವೆತ್ತ ಭಾರತ ರಾಷ್ಟ್ರದ ದಿವ್ಯ ಹಿನ್ನಡೆಗೆ
ಅಸಡ್ಡೆ-ಅವಜ್ಞೆ-ವಮೌಢ್ಯಗಳ ಪರಿಪೋಷಣೆಯೆ
ಕಾರಣ ಕಲ್ಪಂ. ಕಂಗಳಿರುತಿರ್ದು ಮತ್ತಾ
ಲೋಕಪ್ರಜ್ಞೆ ಇರುತಿರ್ದು ಯುಗಧರ್ಮದರಿವಿರ್ದು
ಪ್ರಗತಿಯಲಿ ತ್ವರಿತವಿಲ್ಲದ ಬರೀ ಬದುಕು.
ಜೀವನಾಲವಾಲದಲಿ ಪ್ರಾಣಿಕೋಟಿಗಳ್
ಒಂದನೊಂದು ನುಂಗಿ ಬರ್ದುಕುವುದೇ ಜೀವನಂ !
ದುರ್ಬಲರ್ ಸಬಲರ ತುತ್ತೆನಲ್ ಎಲ್ಲಿಯು
ಸಂಜೀವನ ಸುಶಾಂತಿ ? ರಾಷ್ಟ್ರಪಿತ ಮಹಾತ್ಮಾ
ಗಾಂಧೀಜಿಯ ಸಮತಾವಾದ ಅಡವಿಗೆತ್ತಿರೆ
ಸಾಗುತಿದೆ ಇಹಪರಗಳಿಗಲ್ಲದ ಬರಿ ಜೀವನಾ !
ದಾರಿದ್ರ್ಯರೇಖೆಯಾಳದಲಿ ಜೀವಿಸುತಿಹರ
ಮತಿಮೌಢ್ಯದ ರುದ್ರ ಸೆರೆಯ ಬಲೆ ಹರಿವ ಮುನ್ನ
ಜೀವ ಪುಟನೆಗೆದು ಹೋಹುದಲ್ಲದೆ ಗತಿಯಿಲ್ಲ.
ರಾಷ್ಟ್ರೀಯ ನ್ಯಾಯಾಲಯಗಳಲಿ ಮುದುಡಿ ಬಿದ್ದ
ನ್ಯಾಯ ಶಿಶು ತಥ್ಯಹೀನ ಸಂಪುಟದಲಿ ಸಿಲ್ಕಿ
ನರಳುತಿದೆ ನ್ಯಾಯಾನ್ಯಾಯಗಳ ತುಲಾಭಾರ
ತಾನರಿಯದೆ. ಸುತ್ತಲ್ ಗೆದ್ದವರ್ ಒತ್ತೊತ್ತಿ
ತುಳಿಯುತಿರೆ ಸಮತೆಯ ಪೆಸರ್ ಸ್ವತಃ ಪೊಳ್ಳಕ್ಕು
ಸರ್ವತ್ರ ಜೀವನವೆ ನಿಸ್ಸಾರ ತಾನಕ್ಕು.
ಅಸಮತೆಯ ಅಂತರಂ ಜಾತಿಮತಗಳಂತರಂ
ಅಳಿಯದೆಯೆ ಸಂಜೀವನ ಶಾಂತಿಯು ಒದಗದೆನೆ

→

ಅಂತರದ ಭೂತವುಂ ಜಡಿಕುಟ್ಟೆ ಓಡಿಪುದೆ
ಸಂಜೀವನ ಭಾಗ್ಯಕ್ಕೆ ಸರಿದಾರಿ ತಾನಕ್ಕು.
ಸ್ವಾತಂತ್ರ್ಯ ಭಾರತಿಯೆ ಸಿಡಿದೆಳ್ದು ಕಿಡಿಗೊಂಡು
ನ್ಯೆಕೊಡವಿ ಜಾಡಿಪುದೆ ಸತ್ಯ ಸಂಸ್ಕರಣಮುಕ್ಕು !
ವಿಷಾದ ಚರಿತ್ರೆಯುಂ ಕಂದಿ ಕುಂದಿ ಕಮರುವೊಲ್ !!

— o —

ಚತುರ್ಬಾಹು ಸಮನ್ವಿತಾ

ಓಹೊ ! ಭಾರತವರ್ಷದುನ್ನತೋನ್ನತ ಸಂಸ್ಕೃತಿ
ರಂಗದೊಳ್ ಗಂಧಿಸುವ ಕೀರ್ತಿ ಪರಿಮಳ ಎಲ್ಲ
ಮನಮತಿಯ ಪ್ರಜ್ಞೆಯಂ ಅರಳಿಪನಿತು ಸರ್ವತ್ರ
ಸಮೃದ್ಧಂ ! ವೇದ ಸಾಹಿತ್ಯ ಸಂಗೀತ ಕರ
ಕುಶಲ ಕಲೆಗಳ ಕಲಾಕಲೆಯೇ ತಾನೈಸಿ !
ದೈವ–ಧರ್ಮ–ಭಕ್ತಿ–ಕರ್ಮಗಳ ಸಮುಜ್ವಲಿತ
ಲಹರಿಯುಂ ಪ್ರವಹಿಪುದು ನಿಚ್ಚ ಮನಃಕ್ಲೇಶ–
ಕಲ್ಮಶಗಳ ತೊಳೆದು ಪುನೀತಗೊಳಿಪ ದಿವ್ಯ
ಸಂಸ್ಕೃತಿಯ ಸುಡುಬೆಂಕಿಯುಲಿ ಸುಟ್ಟು ಪುಟವಿಟ್ಟು !
ಆದೊಡಿಂದು ಎಲ್ಲವಿರುತಿರ್ದೇನಿಲ್ಲದಿಹ
ದಿವ್ಯ ಅವತರಣವೆಲ್ಲೆಡೆಯುಂ ! 'ಭಾರತ ವರ್ಷ'
ಎಂತಪ್ಪ ನಲ್ವೆಸರು ! ಈಯೊಂದು ಪರಿಪುಣ್ಯ
ನಾಮವಂ ಬೇರೆಲ್ಲಿ ಕೇಳರಿಯೆನೀ ಜಗತ್
ಪಾರಾಪಾರದಲಿ ! ಸ್ವರ್ಗತುಲ್ಯ ಭಾರತ ವರ್ಷ !
ಜ್ಞಾನ ವಿಜ್ಞಾನ ಕ್ಷೇತ್ರಗಳಲಿ ನೆರೆ ಮುಂಬರಿದು
ಲೋಕಪ್ರಜ್ಞೆ ಘನಿಸಿದ ನಾಗರಿಕ ಜನಾಂಗ !
ಆದೊಡೇಂ, ನಲ್ ಚಿತ್ರಣವಂ ಮಸಿ ನುಂಗಿದೊಲ್
ಅಸಂಬದ್ಧ–ಅಸಂಸ್ಕೃತ ಯೋಗಾಯೋಗದಾ
ಅವತರಣ ಭವಧಿಯಲಿ ಎನೆ ಬಾಯಿ ಬಾರದೈ !
ಸುಜಲ ಸಂಮೃದ್ಧ ವಾರ್ಧಿಯಲಿ ಕ್ರೂರ್ ಮೊಸಳೆಯ
ಅವತರಣದವೊಲ್ ಜನಗಣಮನದಿ ಕಲ್ಮಶಂ
ತುಂಬಿ ಕೋಡಿವರಿಯುತಿದೆ ವೈತರಣಿಯ ತೆರಂ !
ಭವಧಿಯಲಿ ಮಡದಿಯರ ಕಣ್ಣೀರಿನ ಬಾಳಿಗೆ

→

ಮನಗರಗಿ ನೋವರಿಲ್ಲ, ಕಾವರಿಲ್ಲ, ಚಿಂತೆಯು
ಇಲ್ಲವೆನೆ ಉದ್ಧರಣವಿನ್ನೆಂತೊ ಆನರ್ಯೆ.

ಒಂದೆ ತಾಯುವಸಿರಿಂ ಮೂಡಿಬಹ ಸ್ತ್ರೀಪುರುಷ
ಸಂಗರದಲಿ ಸ್ತ್ರೀಕೋಟಿಯುಂ ಕಡು ಕತ್ತಲೆಯ
ಕೂಪದಲಿ ಅದುಮಿಟ್ಟ ಕದಂಬ ಬಾಹುಗಳ
ಸಾಸ ಪ್ರವೃತ್ತಿ ಸಾಮಾನ್ಯಮಲ್ಲಂ, ನಿತ್ಯ
ವಿಜೃಂಭಿಸುವ ಭೇದಾದಿಪ್ರಭೇದಗಳ ವಿಧಿ
ವಿಧಾನಂ ರಾಷ್ಟ್ರದವನತಿಗೆ ಮುಖ್ಯಕಾರಣಂ !
ಪುರುಷ ಪ್ರಧಾನ ರಾಷ್ಟ್ರದಲಿ ತುಳಿದು ಆಳ್ವರ
ಕೂರ್ವೆಯಿಂದೊಪ್ಪುವೊಲ್ ನ್ಯಾಯದಂಡ ಸಂಹಿತೆ
ದೇಶೋವಿಶಾಲಮಿರಲ್ ಸ್ತ್ರೀಕೋಟಿ ಅನ್ಯಥಾ
ನರಳ್ವ ಕಿಡುಗಾಲಂ ಕಳೆಯದೈ ಭವಧಿಯಲಿ !
ಅಕ್ಕ–ತಂಗಿ–ತಾಯಿ–ಮಡದಿಯರೈಸಿ ಆದಿಯಿಂ
ಅಂತ್ಯದವರೆಗೆ ಸಂಗಡಿಗರಿರ್ದು ಸ್ತ್ರೀಯರಂ
ವಿದ್ಯೆಯಲಿ ಹಿಂತಿಕ್ಕಿ ಅಜ್ಞಾನದ ಕೂಪಕೆ
ತಳ್ಳಿ ಮತಿಮೌಢ್ಯಕೆ ಅನುಕೂಲಿಸಿರೆ ಪೆಣ್ಣದು
ಕುರುಬನ ಕುರಿಯೊಲ್ ಪುರುಷನ ಸೊತ್ತು ಕತ್ತಲೆಯ
ಬೀಡಿನಲಿ ಅದುಮಿಡೆ ! ಕಾಲ–ಕಾಲಾಂತರದಿಂ
ದೀನಾತಿದೀನ ಸ್ತ್ರೀಯರಳಲಿಂಗೆ ದೈವಮೆ
ಕುರುಡಾಗಿರೆ ಪ್ರಭುತ್ವಂ ಇನ್ನಿನಿತು ಕುರುಡು !

ಇಂದು, ಬುದ್ಧಿ ಜಾಣ್ಮೆಗಳಿರ್ದು ಕರ್ತವ್ಯ ನಿಷ್ಠೆ
ಇರುತಿರ್ದು ಬಾಳಿನರಮನೆಯ ಕೀಲಿ ಕೈಯೊಳ್

ತಾನಾಗಿಹ ಸತಿಯುಂ ಆವ ಮಾನದಂಡದಿಂ
ಅಳೆದು ಸುರಿದೊಡೆ ಕಾಂಬುದು ಮುಗ್ಧ ಮನದ ದುಗ್ಧ
ಮಧುರ ಶೋಭನಂ ! ಸಂಸ್ಕೃತಿಯ ಸಿರಿ ಮುದ್ರಿತಂ.
ಏಗಳುಂ "ಚತುರ್ಬಾಹು ಸಮನ್ವಿತಾ" ಎಂದಾವ
ದೇವಿಯುಂ ಮುನಿರಿಸಿಗಳ್ ನುತಿಸಿದರೊ ಅದುಭುತ
ಕಾರ್ಯಕಾರಣೀಯ ಚತುರತೆಯುಂ ಪಾಡಿ ಪೊಗಳಿ.
ಮನೆಮನೆಯೊಳ್ ಪಗಲಿರುಳೆನ್ನದೆ ದಿನ ನಿಚ್ಚಂ
ಚತುರ್ಬಾಹುಗಳಿಗೆ ಸಮನಿಸಿ ಸಲಿಪ ಸೇವೆಗೆ
ಬೆಲೆಯುಮಿಲ್ಲ ನಿಷ್ಠುರ ನ್ಯಾಯದಾಸ್ಥಾನದಲಿ !
ಅಂತಲ್ಲಪೆ, ಬಾಳಿನ ಒಳಹೊರಗಣ ಮುಖಗಳು
ಬೇರೆ ಬೇರೆಯೇ ! ಲೋಕದೃಷ್ಟಿಯಲಿ ಮಡದಿಯು
ಸುಮಂಗಳೆ, ಅನ್ನಪೂರ್ಣೆ ಎಂದೆಂಬ ಶ್ಲಾಘನೆ !
ಒಳಗಣ ನರಕವಾಸ ಹರಿಮಾತ್ರ ಬಲ್ಲ ಕಣ !
ಜನ ಜಾಗೃತಮಾಗಿ ನವ ನಾಗರಿಕತೆ ಮೆರೆದು
ಸುಶೋಭಿಸಿಯುಂ ಹಳತು ಅಳಿಯದು ಹೊಸದು ಮೂಡದು
ಪ್ರಜ್ಞಾನ ಅರಳಿ ಮಂದಾರವಾಗದ ಬದುಕು
ಇದ್ದರೇನು ? ಇಲ್ಲದಿರಲೇನು ? ತಿಳಿ ಮನವೇ !
ಜೀವನದ ವೈಭೋಗಕೊಪ್ಪಂತೆ ಅಂಗೈಯಲಿ
ಆಡಿ ನಲಿದಾಡುವ ಗಿಣಿಯಾಗಿರೆ ಬದುಕೊಂದು
ಥಳುಕಿನಾಗರ ! ಅಲ್ಲದೊಡೆ ಪೆಣ್ಣೊಂದು ನಡೆವೆಣ
ತಾನಲ್ಲದೆ ಬೇರಲ್ಲಂ ! ಅಂದು, ಸಂಚಿಯಾ
ಹೊನ್ನಮ್ಮ ಮನಮರುಗಿ "ಪೆಣ್ಣು ಪೆಣ್ಣೆಂದೇತಕೆ
ಬೀಳುಗರೆವರ್ ಕಣ್ಣು ಕಾಣದಾ ಗಾವಿಲರ್ !"
ಎಂದಳಲ್ತೇ ಈ ಶತಮಾನದಾದಿಯಲಿ ?
ಅಂತೊಂದು ಪ್ರಜ್ಞಾವಸ್ಥೆಯುಂ ಅಂದಿಗೆ ನಿಂತ

→

ನೀರಾಗಿ ಹಿಂಗಿದುದು ! ಮುಂಬಿನ ಜನಮಾನ್ಯರ್
ಕಣ್ಣಿರ್ದುರ್ ಕುರುಡೈಸೆ ಆವಾವ ಅಪಗ್ರಹ
ಕೋಟಿಗಳನುಗ್ರಹವೊ. ಅಲ್ಲದೊಡೆ ಈಯೊಂದು
ಹಿನ್ನಡೆಯಿರಲುಂಟೆ ಜೀವಮಾನ ಪರ್ಯಂತ ?
"ಶಕ್ತಿಸೇನಾ ಸಮನ್ವಿತಾ" ಎನಿಸಿಹ ದುರ್ಗಿಯು
ಬಣದ ದೇವನದಿಯಲಿ ಮಿಂದು ವಿಚಕ್ಷಣೆಯ ವರ
ಪ್ರಸಾದದಿಂ "ಬಂದಿನ್ಯಾದಿ ಸಮನ್ವಿತಾ" ಎನಿಸಿ
ಎಂದಾವ ದೇವಿಯಿಂ ಸದ್ಭಕ್ತರ್ ಭಕ್ತಿಯ
ಆವೇಶದಲಿ ನುತಿಸುವರೊ ಅದರ ಅನ್ವಯಂ
ಸತಿಯರ್ಗೆ ಹುದು ನಿತ್ಯ ಭಾವದಲಿ. ಭಂಗದಿಂ
ಸಂಜೀವನೋತ್ಕರ್ಷತೆಯನಾರ್ಜಿಸಲಾಧಾರ
ಪರಮಸತಿ. ವಿರಸ-ವಿಚ್ಛೇದನಗಳ ಬೆಂಕೆಗೆ
ಬಾಳ್ದೊಡದೆ ಸಮತೆ-ಸಮನ್ವಯಗಳ ಸುಂದರ
ಚೌಕಟ್ಟಿಗೆ ಬಿಗಿಯೆ ಮೈಸೋಲ್ದೊಡಂ ಪುನೀತ
ಜೀವನಮೆನಲಕ್ಕುಮೆ ? ಮುಗಿಯದು ನಿಜ ಜಂಜಡ
ಪ್ರಾಣ ಚಿಮ್ಮುವನ್ನ. ಈ ಪರಿಯಲಿ ಜೀವನ
ಸಹಭಾಗಿಯಾಗಿರೆ ಬಹುದೇಂ ಜೀವನ ಶಾಂತಿ ?
ಸಾಮಾಜಿಕ ಶೋಷಣೆ, ಬಾಳ್ ಬನದ ಶೋಷಣೆ
ರಾಜಕೀಯ ಶೋಷಣೆ, ಸ್ವಾತಂತ್ರ್ಯ ಶೋಷಣೆ
ಇತ್ಯಾದಿಗಳ ಗೊಂದಣದ ಕಾಂಡಪ್ರಕಾಂಡ
ಭುಗಿಲೇಳುತಿರಲ್ ಮತಿಮೌಢ್ಯ ಘನಿಸಿರ್ದಪೊಲ್ !
ಯಾವತ್ಕಾಲಂ ತೆರೆಯ ಮರೆಯಲಿ ರಣಗೋಳಿನ
ಕಣ್ಣೀರೇ ಕಣ್ಣೀರು !

—o—

ಮಂಜು ಮಯೂರಿ ನಯಾಗರ !

ಜಗತ್ತಿನಲಿ ಏಳೇಳು ಅತ್ಯದ್ಭುತವೆನಿಪ
ನೈಸರ್ಗಿಕ ವಿಚಿತ್ರಗಳಲಿ ತಾನೊಂದೈಸಿದ
ಆಶ್ಚರ್ಯಂ ಪರಮಾಶ್ಚರ್ಯಗೊಳಿಸಿ ಎರ್ದೆಯುಂ
ಧಣಧಣಿಸುವೊಲ್ ಜೃಂಭಿಪ ಲೋಕೋಪಯೋಗೀ
ನಯಾಗರ ಜಲಪಾತ ಮಂಜುಮಯೀ ಮಯೂರಿ !

ಓವೊ ! ಜಗದ ಮಂಜು ಮುಗಿಲ್ ಮೋಡಗಳೆಲ್ಲಂ
ಕ್ರೋಢೀಕರಿಸಿ ಧುಮುಧುಮಿಸಿ ದುಮ್ಮಿಕ್ಕುತಿಹವೊ,
ಪವಿತ್ರ ಜಲರಾಶಿಯು ಲೀಲಾಖೇಲನದಿಂದೆ
ಫೇನ ಪುಂಜನಿಯೈಸಿ ಕ್ಷೀರವಾರ್ಧಿಯಾದುದೊ,
ದೂರ-ದೂರ. ಬಹುದೂರ ದಿಟ್ಟ ಹರಿವನ್ನ
ಕಾಂಬ ವರ್ಣವರ್ಣಾಂತ ಜಲಧಿಯ ಚೆಲ್ಲಾಟವೊ,
ಜಗತ್ತಿನ ನದನದಿಗಳೊಗ್ಗಿನಿಂ ಬಂದಿಲ್ಲಿ
ಧುಮುಧುಮಿಸಿ ಭೋಂಕನೆ ಧುಮುಕಿ ಜಲಪಾತವಾಯ್ತೊ,
ಸಾರ್ವಭೌಮಿಕ ಯೋಗದಲಿ ವೈಭವೀಕರಿಸುತ
ಭೋರ್ ಭೋರ್ ಭೋರ್ಗರೆದು ಕಿವಿಯುಂ ಗಡಚಿಕ್ಕಿ
ಮಹಾ ಪ್ರಪಾತಕೆ ನೋವಿನಿತಿಲ್ಲದೆ ಧುಮುಕುವ
ವಾರಿಧಾರೆಯ ವಿವಿಧ ಮೋಹಸೀಯ ಭಂಗಿಯೊ,
ವಿಶ್ವಸೌಂದರ್ಯಮಂ ಬದಿಗೊತ್ತಿ ತನ್ನೊಂದು
ಮೋಹಭಂಗಿಯ ಸೌಂದರ್ಯ ರಾಶಿಯುಂ ತೋರ್ಪುದೊ,
ನೊರೆಮುತ್ತದು ತುಂತುರು ತುಂತುರ್ವೈಸಿ ನಲಿಯುತ
ಮೇಲೇರಿ ಸಗ್ಗಕದು ಸೋಪಾನವಿಟ್ಟುದುದೋ,
ಮತ್ತದು ಮಹಾಮಾಯದಾಟದಿಂ ಮಂದೊತ್ತಿ

→

ಬೃಹದ್ ಭುವಿಯಂ ಆಕ್ರಮಿಸಿ ಹಾಲ್ನೊರೆ ಸೂಸಿ
ಮಂಜುವಾರಿಧಿಯೆ ತಾನಾದ ದಿವ್ಯ ಪರಿಯೋ,
ಅಂಬರದ ವೈಭವೋಪೇತ ವರ್ಣ ವೈವಿಧ್ಯ
ವೈಶಾಲ್ಯ ಮೇಣ್ ಆಳಗಳ ಸ್ವಚ್ಛಂದದಲಿ
ತಾಂ ಸ್ಪರ್ಧೆಗೆತ್ತುದೊ ಎನಲಾ ಫೇನವಾರಿಧಿ
ಮನರಂಜಕಂ ! ಜಗದ ಸೌಂದರ್ಯ ವೇಧಿಯಲಿ
ನುಗ್ಗಿ ರಾಜರೋಷದಲಿ ಗೆಲ್ದ ರಾಣಿಯೊಲ್,
ಭೋರ್ಗರೆವ ವಾರಿಧಾರಾಪಾತವದು ಶಾಬ್ದಿಕ
ಬ್ರಹ್ಮ! ಸುತ್ತಮುತ್ತೊಳ್ ಮನುಕುಲ ನಿರ್ಮಿತ
ಯಂತ್ರಸ್ಥಾವರದಿಂ, ವಿವಿಧ ಯಾಂತ್ರಿಕ ತಾಂತ್ರಿಕ
ವಾಹನಾದಿಗಳಿಂ ಪೊದಳ್ವ ಸದ್ದುಗದ್ದಲಂ,
ಪ್ರೇಕ್ಷರ ಕಂಠಧ್ವನಿಯ ತೀವ್ರ ಗಜಬಜಂ,
ಬೀಸುಗಾಳಿಯ ಅದ್ಭುತ ಆವೇಗದ ಮಹಾ
ಸುಯ್ದನಿಯ ಶಬ್ದಮೆಲ್ಲವಂ ಮಿಗೆ ಮಿರುವೊಲ್
ತಾನೊಪ್ಪಿಮೆರೆವ ರೌರವ ಶಬ್ದ ವೈಖರಿ ಚಿರಂ !
ಸರ್ವತ್ರ ಎಲ್ಲವುಂ ಧ್ಯಾನದಾವೋದದಿಂ
ಹೃದಯ ನಿಧಿಯೊಳ್ ನೆರೆ ಅನುಭವಿಸಿ ತಿಳಿವುದೇ
ಆಳದಲಿ ಮುಳುಗೆದ್ದ ಅನುಭವಕೆ ಸಾಕ್ಷಿ ಕಣ !

ಜಲಧಾರೆಯ ನಿಪಾತಕೊಂದು ಮೈಲಿದೂರದ
ಮುನ್ನಮೆಯ ಕವಲೊಡೆದ ಮಹಾನದಿಯುಂ ಕೆನಡ
ದೇಶದೊಳ್ ನುಗ್ಗಿ ಲಾಳಾಕಾರದಲಿ ತಗ್ಗು
ಪ್ರದೇಶಕೆ ಧುಮುಕುವೆಡೆಯೊಳೆ ಅಮೆರಿಕ ದೇಶದ
ವಿಭಾಗಿಯು ಮಹಾನದಿ ಧುಮುಕುತಿಹ ಅಪೂರ್ವ

→

ಸಂದೃಶ್ಯಮಾನ ಚಿತ್ರಂ ಒಮ್ಮೆ ಕಣ್ತುಂಬ
ನೋಡಿದೊಡೆ ಮರೆಯಲಾಗದೊಲ್ ವಿಜೃಂಭಿಸುವ
ಸೌಂದರ್ಯ ಸಂಪತ್ತಿಯ ಅದ್ಭುತ ಪ್ರಪಂಚ !
ಕೆನಡಿಗಳ್ ಅಮೆರಿಕ ವಿಭಾಗಿಯ ನಿಪಾತಕೆ
"ಅಮೆರಿಕ ರ್‍ಯಾಪಿಡ್ಸ್" ಎಂದು ಪೆಸರಿಸಿದೊಡೆ ಇತ್ತ
ಅಮೆರಿಕೆಯ ಪ್ರಜೆಗಳ್ ಆ ಮಗ್ಗುಲಿನ ಭವ್ಯ
ಪ್ರವಾಹಕೆ "ಕೆನಡ ರ್‍ಯಾಪಿಡ್ಸ್" ವೆಂಬ ಜಾಣ್ನುಡಿ
ಇತ್ತಿಹರ್. ಇಂತಪ್ಪ ರಾರಾಜಿತ ಪ್ರವಾಹ
ಭೋರ್ಗರೆದು ಮುನ್ನುಗ್ಗುತ ಸಾಗರ ವಾರಿಧಿಗೆ
ಸಮನಿಸಿ ಹರಿವ ಮಹಾನದಿ ಮಂಜು ಮಯೂರಿ
ನಯಾಗರ ! ಮಂಜು-ಮಂಜು ಮಂಜಿನ ಮಾಹರವು !
ಅತ್ತಿತ್ತಲಾವುದುಂ ಕಾಣಿಸದೊಲ್ ತೆರೆ ಮಂಜು !
ಗಗನ ಚುಂಬೀ ಮಂಜು ! ತಾನೊಂದು ಆಕಾಶ
ಮಂಡಲಕೆ ಪ್ರತಿಸ್ಪರ್ಧಿಯೆನೆ ಪ್ರತ್ಯಾಕಾಶ
ಬಿಂಬವಂ ಸೃಷ್ಟಿಸಿದ ಸ್ವಚ್ಛ ಸ್ಫಟಿಕ ನಿರ್ಮಲ
ಜಲಮಂಜು ! ಎಂದುಮೆಂದುಂ ಬತ್ತಿ ಬಾಡದಿಹ
ಮಂಜು ಮಯೂರಿ ನಯಾಗರ ! 'ಎರಿ ಸರೋವರ'
ಕೃತಕೃತಿ ! ಪ್ರಕೃತಿ ದತ್ತ ದಿವ್ಯ ವರ ಕಣ !

ಉದಯಾಸ್ತಮಾನಗಳಲಿ ಹೊಂಗದಿರಂ ದಿವ್ಯ
ಹೊಂಗಾಂತಿಯ ಲೇಪವನೊತ್ತಿ ಮುದ್ರಿಸುತಿರಲ್
ನೋಡಾ ! ಅದುಭುತ ವರ್ಣಮಯ ಜಲ ರಾಶಿಯುಂ !
ನೆರಳು ಬೆಳಕಿನ ಜೋಡಣೆಯಲಿ ಬಗೆವಗೆ ರಂಗು
ರಂಗೆರಚಿ ಪ್ರೇಕ್ಷಕರ ಹೃನ್ಮನಂ ರಂಜಿಸುವ
ಮಹಾನ್ ನದಿ ಮಂಜು ಮಯೂರಿ ನಯಾಗರ !

→

ಲೋಕದೊಳ್ ಅಗ್ರ ಪಂಕ್ತಿಯಲಿ ಮೆರೆವ ನದಿ ದಿವ್ಯ
ನಯಾಗರ ಆಚಂದ್ರಾರ್ಕವೊ ಎನಲ್ ಧೀಮಂತ
ಮನಮತಿಗೆ ಬೆಮೆಯ ಮುದ್ರೆಯನೊತ್ತುವ ಜಲ ನಿಧಿ !
ಕವಯಿತ್ರಿ ರಸಮತಿಯ ಕಾವ್ಯಕಾನನಕೊಂದು
ಸುಗಂಧಿತ ಕಸ್ತೂರಿ ಮೊಲ್ಲೆಪೂ ಅರಳ್ವವೊಲ್
ರಂಜಿಸುವ ಮಂಜು ಮಯೂರಿ ನಯಾಗರ !

— o —

ಊರ್ವಶಿ

ಹೇ ನಂದನವನ ವಾಸಿನಿ ! ಶುಭಾನನೆ ಊರ್ವಶಿ !
ಸಂಜೆವೆಣ್ಣು ಓಕುಳಿಯಾರತಿವಿಡಿಯೆ, ಸುತ್ತ
ಸ್ವರ್ಣಾಂಚಲ ಮುಗಿಲ್ ಗೋಷ್ಠಿಯಲಿ ಶ್ರಾಂತರವಿ
ಕೆಂಗೆಂಪೊಸರಿ ಇಳಿಯುತಿರೆ ಪಶ್ಚಿಮವಾರ್ಧಿಗೆ
ನೀನಾವ ಗೃಹದೊಳ್ ದೀಪಾಂಜಲಿಯನಿಡುವೆ ?
ತಾಯೇ ! ನಿನಗಗತ್ಯಮೇ ಪೊತ್ತುರಿವ ಸೊಡರ್ ?
ನೀನೆ ಉಜ್ವಲಿಪ ಜ್ಯೋತಿಯಾಗಿರಲಿನ್ನೇಕೆ
ಜ್ಯೋತಿರ್ಗುಡಿಯ ಹಂಗು ? ಆತ್ಮ ಪ್ರದೀಪಕಿಂ
ಮಿಗಿಲಹುದೆ ಹಣತೆಯ ಸೊಡರ್ ? ನಿನ್ನೊಳ್ ಹುಣ್ಣಿಮೆಯ
ಚಂದ್ರಸೌಂದರ್ಯದ ಅಭೂತಪೂರ್ವಕ ಪೆಂಪು,
ಪುಷ್ಪಕೋಟಿಯ ಮೃದು ಮಧುರ ಸೊಂಪು, ಬ್ರಹ್ಮನ
ಸತಿಯ ವಿದ್ಯಾವಿನಯ ಸಂಸ್ಕೃತಿ ಸಿರಿಯಿಂಪು
ಒಗ್ಗೂಡಿ ಮೈಯೊಡೆದ ಸುಸುಂದರಿ ಉರ್ವಶಿಯೆ !
ಚೆಲುವಿನೊಳ್ ಚಲುವೆಯಾದ ನೀನಹುದು ಯೋಗಿನಿ,
ತ್ರೀಲೋಕ ಪರಿಚಿತೆ ನಾಕದ ಅಪ್ಸರೆ, ಮಂಗಳೆ.
ಯಾಮಿನಿಯ ಕುಲಕೀರ್ತಿ ಚಂದ್ರಿಕಾ ಮಧುಮಾಯೆ.
ಇಂದ್ರನಾಸ್ಥಾನದ ಕನಸಿನ ರಾಣಿ ! ಪವಿತ್ರೆ !
ಲೋಕೋತ್ತರೆ ! ಲತಾಂಗಿ ! ಸರೋಜ ಮಾಲಿನಿ.
ನೀನಲ್ಲ ಮಾತೆ ; ನೀನಲ್ಲ ಸತಿ ; ನೀನಲ್ಲ
ವಧು ; ನೀಂ ಚಿರ ಯೌವ್ವನೆ ; ನೀಂ ಚಿರಧವಳೆ ; ನೀನೆ
ಗಂಧರ್ವಲೋಕ ಪುಣ್ಯಾವನಿ, ಪರಿಪಾವನಿ.
ನಿನಗಿಲ್ಲ ರೋಗರುಜಿನಂ. ನಿನಗಿಲ್ಲ ಜರಾ

→

ಮೃತ್ಯು. ನೀನಹುದು ಅಮೃತೆ. ಪರಮ ಯೌವ್ವನೇ
ಹೊಂದಾವರೆಯ ಕರಂಡಲಕ್ಷ್ಮಿ! ಸರ್ವ ಋತುಗಳ
ಪ್ರಭುವಿನ ಒಡ್ಡೋಲಗದಲಿ ವಿವಿಧ ಸುವೇಶಿ !
ಹೇ ! ಲೋಕಮಾನಿನಿ ! ನೀನಹುದು ಮಲ್ಲಿಕಾ
ಕಾವ್ಯಕಾನನ ಸುಶೋಭಿತ ಕಾಮ ಕಸ್ತೂರಿ !

— o —

ಮಹಾ ಕುಂಭ ಮೇಳ

ಅನ್ಯಕ್ಷೇತ್ರೇ ಕೃತಂ ಪಾಪಂ
ಪುಣ್ಯ ಕ್ಷೇತ್ರೇ ವಿನಶ್ಯತಿ ॥

ಲೋಕದಲಿ ಕಾಲ್ಕುಸಿದೊಲ್ ಪಡಿನಿಂದ ಸಂಸ್ಕೃತಿ
ಸತ್ ಸಂಪ್ರದಾಯಗಳ ಸತ್ಕೀರ್ತಿ ಪರಿಮಳಂ
ಯುಗಯುಗಾಂತದಿಂ ಮುಟ್ಟುತಿದೆ ಮನಮನವಂ.
ಸತ್ಯ ಧರ್ಮದಿಂ ಉಜ್ಜೀವನ ತೊಳಗಿ ಬೆಳಗೆ
ಪ್ರಜ್ಞಾನಪ್ರಭೆ ಹೃದಯಹಾರಿಯಾದತ್ತು.
ಸುವಿದ್ಯಾ ಸಂಸ್ಕಾರದಿಂ ಲೋಕ ಪ್ರಜ್ಞೆಯುಂ
ಅರಳುತಿರೆ ದಳದಳ ಮತಿಮೌಢ್ಯಂ ನಾಚುವೊಲ್ !
ಸುಸಂಸ್ಕೃತಿಯೆ ಮುಳ್ಗಾದುದೋ ಎನಲ್ ಇತ್ತಲ್
ಜನಗಣಮನಮಿನ್ನುಂ ಅಜ್ಞಾನದ ಕತ್ತಲೆಯ
ಸೆರೆಯಿಂ ಬಿಡುತೆಗಾಣದ ತೆರದಲಿ ನರಳುತಿದೆ;
ಮತಿಮೌಢ್ಯಕೆ ಮಣಿದು ಬದುಕಿನ ಜಂಜಾಟದಲಿ
ಸೆರೆ ಸಿಲ್ಕಿಹುದು ಘೋರ ಪ್ರಾಣಾಂತಕ ನೋವಿನಿಂ !
ಕೇಳ್ ! ಸಾವಿರದೊಂಭೈನೂರ ಐವತ್ತನಾಲ್ಕರ
ಮಹಾಕುಂಭ ಮೇಳಂ ಐತಿಹಾಸೀಯ ಪುಟದಲಿ
ಕರ್ಪು ಚುಕ್ಕಿಯನಿಟ್ಟ ಕಡು ದುಃಖಪ್ರಕಾಂಡ !
ದ್ವಾದಶೀಯ ಸಂವತ್ಸರಮಾನ ಚರಕದಲಿ
ಮಿಂಚಿಬಹ ನಕ್ಷತ್ರಗಳ ಸಂಘಟನೆಯ ದಿವ್ಯ
ಘಟೆಯು ಸಂಯೋಜನೆಯನೋಜಿಸುವೊಲ್ ಮೂಡಿಬರೆ
ತ್ರಿವೇಣಿ ಸಂಗಮದ ಮಾಜಲಧಿಯಲಿ ಪುಣ್ಯ
ಸ್ನಾನದಾಸೆಯಿಂ ಕಿಕ್ಕಿರಿ ತುಂಬಿ ನೆರೆದತ್ತು

→

ಜನರಾಶಿ ! ತ್ರಿವೇಣಿಗೆ ಹೊಯ್ಕುಯಯ್ ಎನೆ ಮಹಾ
ಜನವಾರ್ಧಿ ! ಗ್ರಹಗತಿಗಳಾರ್ಧೈದ ಗಳಿಗೆಯುಂ
ಘೋರಾತಿಘೋರ ವಿಷಮುಂ ಕಾರ್ದವೊಲಾಯ್ತು
ರುದ್ರ ಭೀಷಣ ಹೋಮ ! ಶುಭ ತೂರ್ಯ ಊದುವೊಲ್
ಮಂತ್ರಗಳ ಉದ್ಘೋಷಣೆ ನಭೋ ಭೇರಿ ತಾನ್ಮೈಸಿ
ಮೊಳಗಿದುದು ಒಕ್ಕೊರಲಿ ಮಧುಧಾರೆ ಜಡಿ ಸೋರ್ದು
ಜಲ ರಾಶಿಯ ಜುಳುಜುಳು ಮಂಜುಳಮಯ ಧಾರಾ
ಶೃತಿಯೆಂತೆಂತನುರಣಿತವಾದುದು ನಿಜದಿಂ.
ಮನಮತಿಗಳ ದುರ್ಬಲತೆ ಪವಿತ್ರ ಸ್ನಾನದಿಂ
ಪಾಪನಾಶಮೆಂಬೊಂದು ನಂಬಿಗೆಗೀಡಾಗಿ
ಪುಣ್ಯಮಂ ಪಡೆಕೊಂಬ ಭಕ್ತಿಯುತ್ಸಾಹದಿಂ !
ಮತಿಮೌಢ್ಯ ಬೃಹದಾಕಾರದ ವಟವೃಕ್ಷಮೊ
ಎನೆ ಕದಂಬ ಬಾಹುಗಳ ಅತ್ತಿತ್ತ ಚಾಚಿದ
ದಾಂಗುಡಿಗಳವೊಲ್ ಕೊನೆಯಿಲ್ಲಮಿಾಮುಗ್ಧಮನ
ಮೌಢ್ಯಕೆ. ಕರ್ಬುನದ ಸೆರೆಗಿಂ ಮಿಗಿಲಲ್ತೇ
ಮನಮತಿಗಳ ಸೆರೆ ? ಕಾಲದೇಶಗಳ ಸುಂದರ
ಚೌಕಟ್ಟಿನಲಿ ಸಂಭವಿಪ ಅಮಿತ ಮತಿಮೌಢ್ಯದ
ಕೀರ್ತಿಗೆ ಕೊರಮಿಲ್ಲಮೆನೆ ತನ್ನಂ ತಾನರಿವ
ಸೂಕ್ಷ್ಮಮತಿ ಭಾಸಣೆಸದೆಲ್ಲಿ ನಿಜ ಪ್ರಜ್ಞಾನ ?
ಪುಣ್ಯ ಸಾನ್ನದ ಹುಮ್ಮ ಆಕರ್ಷಿಸಿತು ಭಕ್ತ
ಜನ ಪರಿವಾರಮಂ ಸೂಜಿಗಲ್ಲಿನ ಮಾಳ್ಕೆಯಲಿ.
ಜನ. ಜನ. ಜನವೇ ಜನ ! ತ್ರಿವೇಣಿ ಸಂಗಮದ
ಪರಮ ಪುಣ್ಯ ತೀರದಲಿ ! ಸಕ್ಕರೆಯ ಸಿಹಿಯಂ
ಅರಸಿ ಎಲ್ಲೆಡೆಯಿಂ ಓಡಾಡಿ ಮುತ್ತ ಬಹ

→

ಇರುವೆಗಳ ಹೋಲಿ ಓಡಿ ಬಂದುದು ಜನರಾಶಿ !
ಲಕ್ಷ–ಲಕ್ಷ–ಲಕ್ಷೋಪಲಕ್ಷಗಳೆನೆ ಒಂದೆರಡು
ಲಕ್ಷಗಳಲ್ತು. ಅರವತ್ತು ಲಕ್ಷ ! ಅಂತೆಂದಲ್ಲಿನ
ವೀಕ್ಷಕರ ದಿವ್ಯ ಗಣಿಕೆ ! ದುರ್ವಿಧಿ ವಿಘಳಿಗೆಯು
ಹೊಂಚಿ ಕೈಬೀಸಿ ಕರೆದವೊಲಾಯ್ತು ಅಂದಿನಾ
ಜನ ಸಂಘಟನಂ ! ಮುಗ್ಧ ಮನಮತಿಗಳಾತುರ
ಕಾತರ ಚಣಚಣಂ ಪುಟಿದು ಹದ್ದು ಮೀರುತಿರೆ
ರುದ್ರ ಭೀಷಣ ಚಿತ್ರಕೆ ಮುದ್ರೆಯನೊತ್ತುವೊಲ್ !
ಜನಜನಗಳ ಮಧ್ಯೆ ಘಟಿಸಿದ ನೂಕು ನೂಗ್ಗುಲಿನ
ಒತ್ತಡಂ ಪೆರ್ಚುತಿರೆ ಚಣಚಣಂ ಪೇಳಲೇಂ ?

ಓವೊ ! ತೀವೇಣಿ ಸಂಗಮದ ವರ ಕ್ಷೇತ್ರದಲಿ
ತ್ರಿವರ್ಣ ರಂಜಿತ ಅನನ್ಯ ಅನುಪಮ ಜಲಧಿ !
ಧುಮುಧುಮಿಸಿ ಮುನ್ನುಗ್ಗಿ ಬಹ ಗಂಗಾ ಯಮುನಾ
ಸರಸ್ವತಿ ನದೀತ್ರಯರ ದಿವ್ಯ ರಥವಿಲಾಸಂ
ಪ್ರಯಾಗವೆಂಬ ಪೆಸರಾಂತು ಸತ್ಕೀರ್ತಿಯಿಂ
ಪ್ರೋಜ್ವಲಿತ ಪುಣ್ಯ ಕ್ಷೇತ್ರ ವಾರಾಶಿ ! ಸುಂದರ
ಸ್ವಚ್ಛ ರಜತ ಪಟ್ಟದೊಲ್ ರಂಜಿಸುವ ಶೈಕತ
ಶಯ್ಯಾಪ್ರಾಂತ್ಯ ಪ್ರಕೃತಿ ಪಾದ ಪಂಕೇಜದೊಲ್
ರಾಮಣೀಯಕ ಪ್ರಸ್ಥಾನ ! ಅಹಾ ! ಪುಣ್ಯರಸ
ಸ್ವಾದನೆಯ ತನಿಯಿಂಪು ಸೆಳೆಯುತಿರೆ ಹೃನ್ಮನಂ
ಬೀಗುವೊಲ್ ನುಗ್ಗಿದರ್ ಮುನ್ನೀರಿನಲಿ ಮೀಯೆ !
ಪುಣ್ಯ ಸಂಗಮದಲಿ ನರಜನುಮಂ ಜಾಲಾಡಿ
ಪುನೀತಗೊಳಿಪ ಆಸೆ ಪ್ರತ್ಯಾಸೆ ಧುಮುಧುಮಿಸಿ

→

ಗಜಬಜಿಸಿದತ್ತು ತ್ರಿವೇಣಿ ತೀರವಮಂ.
ಹಾ !
ಆತುರಾಸೆಯ ಜಂಜಡಂ ಕಂಡು ಕನಲ್ದುದೊ
ಎನೆ ಬೋಂಕನೊಗೆದುದು ಚಣದೊಳ್ ರುದ್ರಪಾಶವಂ
ದುರ್ವಿಧಿ ! ಸಬಲರ ಪದಹತಿಗೆ ದುರ್ಬಲರ್ ನೆರೆ
ಸಿಲ್ಕಿ ನೆಲಗಚ್ಚಿದರ್ ಗತಾಸುಗಳಾಗಿ ! ಹಾ !
ಹಲಕೆಲವರೇಂ ? ಮೇಣ್ ನೂರಾರು ಮಂದಿಯೇಂ ?
ಅಲ್ತುಲ್ತು ! ಆರೇಳು ಸಹಸ್ರವೆಂಬ ಸುದ್ದಿ !
ತೀರದಲಿ ಹರಡಿ ಬಿಳ್ದುದು ಹೆಣಗಳ ಹೇರಾಶಿ !
ಹಿರಿಕಿರಿಯರ, ಸ್ತ್ರೀಪುರುಷರ ನಜ್ಜುಗುಜ್ಜಾದ
ಶವಂಗಳ ಹೃದಯ ವಿದ್ರಾವಕ ಚಿತ್ರಾರ !
ಮುಗ್ಧಜನ ಚಣಾರ್ಧದಲಿ ಅನಾಥಗತಿಗೆತ್ತು
ದೀನಾತಿದೀನರಾದರ್ ಸದ್ಗತಿಯ ಬಯಸಿ.
ಪುಣ್ಯ ಕ್ಷೇತ್ರದಲಿ ಪಾವ ಮುನ್ನಮೆ ಸ್ವರ್ಗೀಯ
ಸಿರಿಗೆ ಪಾರುವೋಗಿ ಪೈವಿಟ್ಟು ಹಾರಿದೊಲಾಯ್ತು
ದುರ್ದಿನದ ಭೀಕರ ಭೀಭತ್ಸ ಮಾರಣ ಹೋಮ !
ಅಳಿದುಳಿದವರ ಅಳುಗೋಳಿನ ಕರೆ ಕಂಬನಿಯ
ಕೋಡಿ ಒಗ್ಗೂಡಿ ಹರಿಯಿತ್ತೈ ಪ್ರಯಾಗದಾ
ಪರಿಪುಣ್ಯ ಕ್ಷೇತ್ರದಲಿ ! ನದೀ ತ್ರಯರ ಮಹಾ
ಜಲರಾಶಿಗೆ ಹೊಯ್‌ಕೈಯಾಗುವೊಲ್ ! ಅಂದಿನಾ
ದುರಂತಕೆ ಅರುಣ ಕಿರಣಂ ಸಾಕ್ಷಿ ! ತ್ರಿವೇಣೀ
ನದಿ ತ್ರಯರೇ ಸಾಕ್ಷಿ ! ಗಿರಿವನಂಗಳ್ ಸಾಕ್ಷಿ !
ಭೂತಲಂ ಸಾಕ್ಷಿ ! ಸರ್ವತ್ರ ನೀನೇ ಸಾಕ್ಷಿ !
ಹೇ ಪ್ರಭುವೇ ! ನಿನ್ನ ನಲ್ ಮಕ್ಕಳನಿಂತೇಂ

→

ಮನ ಮೌಢ್ಯದ ರಣಕುಂಡದಲಿ ಮುಳುಗಿಸಿಟ್ಟಿಹೆ ?
ಇದೆಲ್ಲದರ ಹಿಂದೆಯೆ ನೀನಿರಲ್ ಎಲ್ಲಿಹುದು
ಎನ್ನೊಂದು ನಿಜ ಚಿಂತನೆಯು ಜ್ಞಾನ ವಿಶೇಷಂ ?
ಜ್ಞಾನಾಜ್ಞಾನಿಗಳ ನಾಗಾಲೋಟ ಪಿಡಿದಿಹುದು
ಕುಪಥದಲಿ ಕುರುಡುವೇದಿಯು ಗುರಿಗೊಂಡು !
ಇದಕಾರು ಹೊಣೆ ನೀನೆ ಪೇಳಯ್ಯ ಸಿರಿದೊರೆಯೆ !

ಸುಖದುಃಖಗಳ್ ಕೊಚ್ಚಿ ಹೋಹುತಿರೆ ಚಣಚಣಂ
ಎಣೆಯಿಲ್ಲದಾ ಕಾಲವಾಹಿನಿಯಲಿ ನೆನೆವುದೀ
ಕವಿರಸಮತಿಯು ಪುರಾತನ ಪ್ರಕರಣಗಳಂ
ಕಾರುಣ್ಯ ದ್ರವ್ಯ ಕರಗಿ ಹರಿಯುವ ಮಾಳ್ಕೆಯಲಿ
ಚಿಂತನಾವೇಶಂ ರಸಾನುಭವಕೆ ಚಿತ್ತಲ್ತೆ ?

— o —

ಆತ್ಮವಿಸ್ಮೃತಿ

ಪ್ರಾಪ್ಯಚಾಪ್ಯುತ್ತಮಂ ಜನ್ಮ
ಲಬ್ಧ್ವಾಚೇಂದ್ರಿಯ ಸೌಷ್ಟವಂ ।
ನ ವೇತ್ತ್ಯಾತ್ಮಹಿತಂ ಯಸ್ತು
ಸ ಭವೇದಾತ್ಮ ಘಾತಕಃ ॥

ಹೇ, ಪ್ರಭುವೇ ! ನಾನೆ ನಾನ್ನೈಸಿ ಬರಲಿಲ್ಲ
ಈ ಧರಾತಲಕೆ. ನಿನ್ನ ಘನಕೃಪೆಯೊಳೈದು
ಭವ ಬಂಧನದಿ ಸಿಲ್ಕಿ ದುರಿತ ಕೋಟಿಯಲಿ ನೆರೆ
ಮುಳುಗಿ ನಿನ್ನಂ ಮರೆತೆನ್ನೈ ಅತ್ಮವಿಸ್ಮೃತಿಯೊಳ್ !
ಶೃಂಖಲಾ ಬದ್ಧ ಬಾಳಿನಲಿ ಬೆಳಕಿಂ ದೂರ್ರೈದು
ಏನೊಂದು ಅರಿದೆನಿಲ್ಲಂ. ಕಾಲಮಾನವದು
ಕಳೆದುದು ನದಿಪ್ರವಾಹದೊಲ್ ಕೈಗೆಟುಕದೆಯೆ
ನೆನೆದೆನಿಲ್ಲ ನಿನ್ನಂ. ಅರಿದೆನಿಲ್ಲನೆನ್ನಂ.
ಮಣ್ಣಾಡಿ ಧೂಳಾಡಿ ಹರಟೆಗೆ ಮಣಿದು
ವ್ಯರ್ಥಮಾದುದು ಬಾಳು. ಭಂಗ ಬನ್ನದಿ ಜೀವ
ಕೊರಳ್ಗಿತ್ತು ನುಡಿಯಲರಿಯೆ, ಬಾಳಲರಿಯೆ ನೆರೆ
ನೇರ್ಪಡಿಸಲರಿಯೆ ಹೇ ಪ್ರಭುವೇ! ನಿನ್ನೆದುರ್
ಉಸಿರೆ ರುದ್ರೋಚ್ಛ್ವಾಸವ ನೀಡದೊಡೆ ಎಂತೆನ್ನ
ಅರಿಕೆ ? ನುಡಿಯ ಗುಡುಗಿನ ಗರ್ಜನೆಯನೀಯದಿರೆ
ನುಡಿವನೆಂತು ? ಪೇಳೆನ್ನ ಹೃದಯನಾಥನೇ !
ನಿನ್ನಡಿಗೆ ತಲೆಮಣಿದು, ಕೈಮುಗಿದು ಬೇಡುವೆನ್ನೈ !
ಘೋರದುರಿತವ ಕಳೆಯಲೆನ್ನ ಅನುದಿನ ನಿನ್ನ
ಪಾದ ಸೇವೆಯುಂದು ಸಿರಿ ನುಡಿ ಸೇವೆಗೈವೆ.

→

ಮನ್ನಿಸೆನ್ನ ಆತ್ಮ ವಿಸ್ಮೃತಿಯಂ ಪರಮಾತ್ಮನೇ !
ಇಂದಿನೀ ದಿನಮಾನಗಳ ಮಹಾ ಸ್ರೋತದೊಳ್
ಕೊಚ್ಚಿಹೊಗಿ ಮುಳುಗಾಡಿ ತೇಲಾಡಿ ಯೋಚಿಸಿ
ಮನೋವೇದಿಯಲಿ ಅಂಡಲೆದು ಅಮಿತಜ್ಞಾನದೀ
ನೇಮದೀ ಪ್ರೇಮದೀ ಜೀವನೋತ್ಕರ್ಷತೆಯ
ಭಾವದೀ ಸರ್ವೋತ್ತಮ ಚಿಂತನದೀ ಮನೋ
ಮಂಡಲಂ ತುಂಬಿ ಕೋಡಿವರಿಯುತಿರೆ ವರ್ಷಾ
ಕಾಲದ ನದಿಯೊಲ್ ಏಂಗೈವೆನೀ ಜೀವನದ
ಸಂಜೆಯಲ್ಲಿ ಭಾವಿಸಿ ನೋಡಯ್ಯ ಪ್ರಭುವೇ !
ನೀನೇ ದಯಾಳು ! ನೀನೇ ಪರಮ ಕೃಪಾಳು !
ನಿನ್ನ ಸೇವೆಯಂ ನೀನೇ ನೀಡಿ ಉಪಕರಿಸು !
ಓ ಎನ್ನ ಪ್ರಾಣ ಪ್ರಭುವೇ !

—೦—

ತಮಸೋ ಮಾ ಸದ್ಗಮಯ....

ಕಗ್ಗತ್ತಲೆಯು ಗವಿ ಹೃದಯದ ಗುಡಿ ! ಜಾನಿಕೆಯ
ದೀಪವುರಿಯದೆಲ್ಲಿಯ ಚೆಂಬೆಳಕು ಎದೆಗುಡಿಗೆ ?
ಯೋಚಿಸಲ್ ಮನಃಕಲ್ಪದ ತಳಹದಿಯೆ ಕತ್ತಲೆ.
ಜಾನಿಸಲ್ ಜಾನದ ಸರಿಯೆ ಕತ್ತಲೆ. ಚಿಂತನ
ಮಂಥನದ ಚಕ್ರದಲಿ ಜಾನಸರಿ ಸುಳಿಸುತ್ತಿ
ದ್ರವಿಸದೆಲ್ಲಿಯ ದೀಪಿಕಾ ಜ್ಯೋತಿ ಮನುಕುಲಕೆ ?
ಮೂಢಮತಿಯಲಿ ಮಿಂಚಿ ಬಹ ಕುರುಡು ನಂಬಿಕೆಯ
ಕೊಳಕು ಮಂಡಲದಲಿ ಮುಳುಗಿ ವ್ಯಮನಗಳ್ ಹದ
ಗೆಟ್ಟು ನಂಜಿನೂಟಿಯೆನೆ ಸಂಕುಚಿತಗೊಳುತಿವೆ
ದಿನದಿಸಂ. ಧೈರ್ಯ ಪ್ರವೃತ್ತಿಯ ಸರಿದಾರಿಯ
ಜಾಡರಿಯದೆ ತೊಳಲಿ ಬಳಲಿದೆನ್ನೈ ಪ್ರಭುವೇ !
ಮನದ ಕತ್ತಲೆ ಮನೆಯ ಕತ್ತಲೆಗಳನುಡುಗುವ–
ಉಜ್ವಲಿಪ ದೀಪದಾನಿಯಂ ನೀಡಿ ದಯೆಯಿಂ
ಉದ್ಧರಿಸ್ಯೆ ಮಂದಮತಿಯನು ತೊಳಗಿ ಬೆಳಗಿ.
ಎದೆಯ ಕಾರುಣ್ಯ ದ್ರವಿಸಿ ಮನುಕುಲಕೊಗೆದೆಯ್ಯೆ
ಮತ್ತೇನ್ ಜಡಮತಿಯ ಉಂಬಳಿಯನಿತ್ತೆ ? ಈ
ಪರಿಪಾಡು ಏಕೆಲ್ಯೆ ಮನಮತಿಗೆ ಮಸಿಯೊರೆಯೆ !
ಇಹಪರಕೆ ದೂರಾಗಿ ನಿನ್ನ ಸೇವೆಗೊದಗದ
ಪರಿಯುಲಿರ್ಕ್ಕ ಪಾಳುಗ್ಯೆವೇಕೆಲೆ ಸುಗಾಲಂ ?
ಕೆಲಬರಂ ಸೊಗದೊಳಿರ್ಕ್ಕ ಕೆಲಬರಂ ನದೆ ಬಡಿದು
ಅಜ್ಞಾನದ ಕಗ್ಗಾಡಿಗೆ ತಳ್ಳುವುದೆ ನಿನಗೆ
ನರಸ ಸಲ್ಲಾಪದಾಟವೊ ಎನಲೆಲ್ಲವುಂ

→

ಶ್ಯಾಮಾನಂದ ನಂದಿನಿ–೧೨೯

ಅಸ್ತವ್ಯಸ್ತ. ನಿನ್ನಯ ನ್ಯಾಯ ಮಂದಿರದಲಿಯೆ
ನ್ಯಾಯವಿಲ್ಲದಿರದಿರೆ ಇನ್ನೆಲ್ಲಿರ್ಪುದೈ ?
ಇದೊಂದು ಮನುಕುಲದ ಬಾಳಿ ಪರಮಾತ್ಮನೇ ?
ಬಾಳಿನಂಕ ಬರಿ ಕಾಮಕಾಮನೆಗಳ ಬಿಗಿತ,
ತಮಸೋ ಮಾ ಸದ್ಗಮಯ ಎಂದು ಬೇಡುವೆಂ.
ಬೆಳಕಿನಾಶೆಯಲಿ ತೊಳಲುತ ಬದುಕುವ ಬಾಳಿಗೆ
ನೀನೀಯುದೆಲ್ಲಿಯ ಬೆಳಕು ಪೇಳ್ಳೈ ಪ್ರಭುವೇ !

— o —

ಸೈಲೆಂಟ್ ವ್ಯಾಲಿ ಅಥವಾ ಮೌನ ಕಣಿವೆ

ಧರಣಿಯೊಳ್ ಸುಮನೋಹರ ರೂಪಿಂ ಮೈದಾಳ್ದು
ನಿಚ್ಚ ಪರಮೋಪಕಾರಿಯೆನೆ ಸತ್ಕೀರ್ತಿ ಸಿರಿ
ಮಾಲೆಯಂ ಧರಿಸಿ ಪಚ್ಚರಾಗದ ಪೆಂಪಿನಿಂ
ಬೀಗುತಿರ್ಪ ನಿಶ್ಶಬ್ದ ನೀರವ ಘನ ನಿಬಿಡ
ಕಾಂತಾರ ಸೈಲೆಂಟ್ ವ್ಯಾಲಿ ! ಕಣ್ಮನದಣಿಯೆ
ಕೇಳಿ–ಓದಿತಿಳಿವೆನೆನೆ ಆಗದುಮಾಗದು ಕಣ !

ಮಹಾಭಾರತ ಸಾಮ್ರಾಜ್ಯದ ಚೆನ್ನುಡಿಯಲಿ ಪಡಿ
ನಿಂದ ಸೈಲೆಂಟ್ ವ್ಯಾಲಿ ಅಥವಾ ಮೌನ ಕಣಿವೆ
ಅದ್ಭುತ ಪಠಮೋಚ್ಚ ಅನನ್ಯ ಕಾನನ ಲಕ್ಷ್ಮಿ !
ಕೇರಳೀ ರಾಜ್ಯದ ಸಿಸ್‌ಪಾರ್ ಗಿರಿಸ್ತೋಮದ
ಸಿರಿಮೈಗೆ ಪಚ್ಚ ಪಟ್ಟುಡೆಯುಡಿಸಿದ ಸುರಮ್ಯ
ಘೋರಾಟವಿಯುಂ ವಿವಿಧ ವರ್ಗದ ಸಸ್ಯಗಣ
ಸಂಪತ್ತಿಯಿಂ ಕೂಡಿ ಒತ್ತೊತ್ತಿ ಪ್ರಚಂಡ
ಮಾರ್ತಾಂಡನುರವಣೆಗಿನಿತೆಡೆಯುಂ ಇಲ್ಲದೊಲ್
ತಡೆಯೊಡ್ಡಿ ತಣ್ಣನೆಯ ತನಿಯುಂಗುವ ತನಿಗೂಡಿ
ಕಳ್ತಲೆಯ ಭೀಮ ಭೀಕರತೆಯುಂ ಸಾರ್ದತ್ತು.
ಬೃಹದ್ ವನದೇಶದ ಸೃಷ್ಟಿ ಸೌಂದರ್ಯವದು
ಮುಗ್ಧದುಗ್ಧ ಮಧುರವೇಶಮೆಂತಂತು ರಾವಣ
ಭೀಕರಂ ತಿಳಿದು ನೋಡೆ. ನೋಳ್ಪ ಕಣ್ ಮುಮ್ಮಲ
ಗೊಳ್ವ ಮಾಳ್ಕೆಯಲಿ ಕಮನೀಯ ಕಠೋರ ಚಿತ್ರಮೆ
ಎಲ್ಲೆಲ್ಲು ! ನಿಮ್ನೋನ್ನತ ಗಿರಿಪ್ರದೇಶದೊಳ್
ಅಲೆಯೇರಿ ಅಲೆಯಿಳಿದು ನಳನಳಿಪ ವನಧಿಯುಂ

→

ಕಲೆಗಾರನ ಅನನ್ಯ ಕುಂಚದಿಂ ಮೈಗೂಡಿ
ಚಿತ್ರಸ್ತವಾದಂತೆವೊಲ್ ವರ್ಣವರ್ಣಾಂತು
ಫಲಪುಷ್ಪಭರಿತ ನಿತ್ಯೋಪಯುಕ್ತ ಅರಣ್ಯಾನಿ !
ಸರ್ವತ್ರ ಸಮೃದ್ಧತೆಗೆ ಸರ್ವ ಸಾಕ್ಷಿಯುಂ
ತಾನಾಗಿ. ಬಲೋನ್ಮತ್ತ ದ್ರುಮಗಳ್ ತಂತಮ್ಮ
ಬಗೆವಗೆಯ ದೈತ್ಯ ಬಾಹುಗಳನೆತ್ತಲೆತ್ತಲ್
ಚಾಚಿ ಬಾಚಿ ಕುಟಿಲ ಜಟಿಲ ಕಠಿಣತೆಯನೂಡಿ
ನ್ಯಾಸವಿನ್ಯಾಸಗಳ ವಿರಚಿಸಿದ ರುಂದ್ರಶೈಲಿ.
ದಿನದಿನಂ ಮುಂಚೆಳೆವ ದಾಂಗುಡಿಗಳ್ ಕ್ರಮಿಸಿ
ಮೇಣತಿಕ್ರಮಿಸಿ ಬೆಳೆವ ಭೂಜೇಶಗಳ ಕುಲ
ಕೀರ್ತಿ ಏರುತ್ತೇರಿ ಮುಗಿಲ್ ಮಂಜು ಮುದ್ದಿಸುವ
ಮಾಳ್ಕೆಯಲಿ ನಭೋಪ್ರೇಮಿಯಾದತ್ತು. ಶಿಶಿರಋತು
ರಾಜ ಪಿಂಜರಿಯೆ ಮುಂಬರುವ ವಸಂತ ಪ್ರಭು
ಸಡಗರವೆ ಸಡಗರಂ. ಮರ ಬಳ್ಳಿ ಸಸ್ಯಗಳ
ಪ್ರತಿ ಪಲ್ಲವ ಪಾಣಿಗಳಲಿ ಮಿಡಿಮೊಗ್ಗು ನೆರೆ
ಮೂಡಿಸಿ ಅರಳಿಸಿ ಇಡೀ ವನವನಾಂತರಂ
ಸುಮಸುಗಂಧ ಮಾಧುರ್ಯದಿಂ ಮಘಮಘಿಸುವಂ !
ವನವಿಹಂಗಳ ನಿಃಸ್ವನಂ ವಿವಿಧ ಧ್ವನಿಯಲಿ
ಎಡೆಬಿಡದೆ ಹೊಮ್ಮುವುದು ಕರ್ಣ ಬಂಧುರವಾಗಿ.
ಮಧುಮತ್ತ ಪರಮೆಗಳ ಮೃದು ಮಧುರ ಕಂಠದ
ಝೇಂಕೃತಿಯಿಂ ಕ್ರಿಮಿಕೀಟಗಳ ಬಗೆವಗೆಯ
ಚೀಂಕೃತಿಗಳಿಂ, ಜೀರ್ದುಂಬಿಗಳ ಜೀರ್ದನಿಯಿಂ
ಪ್ರಾಣಿಕೋಟಿಯ ಚೆಂಕೃತ ಕೂಪ್ ದನಿಯಿಂ ಮೇಣ್
ಕೋಗಿಲೆಗಳ ಕಮನೀಯ ಕೋಮಲ ಕಂಠ ಸ್ವರ

ಮಾಧುರ್ಯದಿಂ ಸಂಘಟಿತವಾದುದು ಜೀವನ
ಸಾಮ್ರಾಜ್ಯದ ಮನೋಹರ ವಿಜಯಘೋಷವ ತೋರಿ !
ಮೌನ ಕಣಿವೆಯುಂ ರಸಮತಿಗೌತಣವೀವವೊಲ್
ಯಾವತ್ಕಾಲಂ ಎಲ್ಲ ಋತುಮಾನಕೊಪ್ಪುವೊಲ್
ಚಿಗುರೊಡೆದು ಮೈದುಂಬಿರೆ ಹರಿದ್ವರ್ಣದಳಿರ್
ಕೆಂದಳಿರ್ ಬೆಳ್ದಳಿರ್ ಕೆನ್ನೀಲದಳಿರ್ ಬಿಳಿ
ಚುಕ್ಕಿಚುಕ್ಕಿಯ ಪಚ್ಚದಳಿರ್ ಸಂಗರದ ಸಿರಿ
ಸಿಂಗರದಲಿ ವನಧಿಯ ಚೆಲುವು ಚೆಲ್ಲಿಸೂಸಿದೊಲ್
ಚೆಲ್ವಾಯ್ತು ; ಮಧುರ ವೇಶದಿಂ ಮನೋಜ್ಞವಾಯ್ತು.
ದಿವ್ಯ ಓಷದಿಯು ತಾನಾಯ್ತು ಸಕಲ ಮೂಲಿಕೆ
ಗಿಡಮರಗಳಿಂ ತಾನೊಪ್ಪಿತೆನೆ ಚಿತ್ರಿಸಿಕೊ ಮನವೆ !
ಪರಮ ಜನಪದದ ಜೀವನದೈಸಿರಿಯೆ ಆಯ್ತು !
ವಿವಿಧ ವರ್ಣವರ್ಣಾಂತ ಸೌಂದರ್ಯಶಾಲಿನಿ
ಚಿಟ್ಟೆಗಳ್ ಪಾರ್ವ ಕುಸುಮಗಳಂತೆ ರಂಜಿಸುತೆ
ನಲಿನಲಿಯುತ ಹಾರಾಡಿ ಸುಳಿಸುಳಿದಾಡಿ ವರ
ಮಕರಂದವಂ ಪೀರ್ವ ಪರಿ ಕಣ್ಮನಕೌತಣಂ !
ನಿಶ್ಶಬ್ದ–ನೀರವತೆಯ ರಾಗಾನುರಾಗದ
ಝುರಿಯು ಹರಿಯುತಿರಲುರೆ ನಿತ್ಯವನದಗಲ ನಿಜ
ಸದ್ದುಗದ್ದಲಗಳಧಿಕಾರಕ್ಕೆಡೆಯಿಲ್ಲದೊಲ್
ಸರ್ವತ್ರ ಸದಾ ಶಾಂತ ಸೌಂದರ್ಯ ಸಮೃದ್ಧಿ
ಮೌನ ಕಣಿವೆಯ ಮನೋಹರ ಚಿತ್ರವ ನೆನೆಮನವೆ !
ವಿಪಿನ ಛಾಯಾಂಧತೆಯೊಳಲ್ಲಲ್ಲಿ ಹೊಂಬಿಸಿಲ್
ಇಣುಕಿಣುಕಿ ಮಿಸುನಿಯೆಳೆಯೆಳೆಯೊಲ್ ಎಲೆಎಲೆಗಳ
ಮಧ್ಯೆತೂರಿ ಬರೆ ಸಾಸವೆಸಗಿದೊಲೆಸೆದತ್ತು.

→

ಉಂಗುರುಂಗುರವಾಗಿ ಬೆಳ್ಪುುದ್ರೆ ಒತ್ತಿದೊಲ್.
ತನ್ನೆಳಲ ಪಸಲೆಯಲ್ಲಿ ಹೊಂಗೋಲ್‌ಗಳ್ ಊರಿ
ಭುವಿಯಲಿ ನೆರಳು ಬೆಳಕಿನ ಬಲೆಯಂ ನೆಯ್ದಿತ್ತು.
ವನಧಿಯಾತ್ರೆಯಲಿ ರಸಋಷಿಗಳ ತನುಮನವಂ
ಸೂಜಿಗಲ್ಲಿನೊಲ್ ಆಕರ್ಷಿಸಿರೆ ಸೌಂದರ್ಯವೋ
ರಸವೋ ರಸವೋ ಸೌಂದರ್ಯವೋ ಅರಿಯದಿರೆ
ಮನಃಪ್ರಾಣಗಳ್ ಮಮ್ಮಲಮನೆ ಅರಿಮನವೇ !

ಮರುತನಾಟದಿಂ ಗಿಡುಮರಬಳ್ಳಿಗಳ್ ತಲೆ
ತೊನೆಯುತುಂ ಅತ್ತಿತ್ತಲೋಡಾಡುತಲಿರುತಿರೆ
ವನವಾರ್ಧಿ ಅಲೆಯೇರೆ ಅಲೆಯಿಳಿಯೆ ಸಾಗರದ
ಅಲೆಗಳಂ ಹೋಲಿ ! ಅ ದೃಶ್ಯಮಾನ ಸೌಂದರ್ಯ
ನಿಧಿಯಂ ನೆನೆ ಮನವೆ ! ಮಧುರ ಮನ ಮೋಹನೀಯ
ಕಾನನ ಕಡಲಿನ ಕಮನೀಯ ಕಠೋರವಾ
ಚಿತ್ರಣಂ ಚಿತ್ರಕಾರನ ಕುಂಚದಿಂ ಮೂಡಿ
ಚಿತ್ರಸ್ಥವಾದವೊಲ್ ಚೆಲುವಿಗೆಲ್ಲೆಡೆ ಗೆಲ್ಮೆ.
ತರುತಲದಲಿ ಹಚ್ಚನೆ ರಂಗೊರೆದ ಗರಿಕೆಯದು
ಹಾಸಿರಲ್ ಪಚ್ಚರನ್ನಗಂಬಳಿಯ ತೆರದಲಿ
ದರುಗೆಲೆ ಕುಸುಮರೇಣುಗಳುದುರುದುರಿ
ನವರತ್ನಗಳಂ ಸುರಿದವೊಲ್ ಚಿತ್ರವಿಚಿತ್ರ
ವರ್ಣಮಂಜರಿಯಾಗಿ ಮೆರೆದತ್ತು ಕಣ್ಮನಂ
ತಣಿಸುವೊಲ್. ಅಲ್ಲಲ್ಲಿ ಒಳಾಂತರದಲಿ ವಿವಿಧ
ವರ್ಗೀಯ ಬಳ್ಳಿ ದಿಂಡುಗಳ್ ಹೆಮ್ಮರಗಳಂ
ತಬ್ಬಿ ಹಬ್ಬಿ ಏರುತ್ತೇರಿ ಕುಡಿ ನಿಮಿರಿ ನಡು
ನೆತ್ತಿಯಲಿ ಎಲೆಗೊಂಚಲಿನ ನಡುವೆ ತಲೆದೋರ್ದ

→

ಪರಿ ಆದಿಶೇಷನೋ ಎನೆ ಕವಲು ಕವಲಾಗಿ
ಹೆಡೆ ಎತ್ತಿದತ್ತು. ಹಲ ಕೆಲವುಂ ಇಳಿ ಬೀಳುತೆ
ಜೋಲುತಿರ್ದುವು ವಿಧವಿಧದಲಿ ಹೆಬ್ಬಾವುಗಳ
ಹೋಲಿ ! ಒಳಗೊಳಗೆ ಸಸ್ಯಕೋಟಿಯುಂ ಕೂಡಿ
ಗುಡಿಗಟ್ಟಿ ಲತಾಕುಂಜಮುಂ ನಿರ್ಮಿಸಿದೊಲ್
ದಟ್ಟೈಸಿ ಸಣ್ಣದೊಡ್ಡ ಪರ್ಣಕಟೀರಾಳಿಯು
ಪಾಂಗಿನಿಂ. ಬೆಟ್ಟಗಳ ಶಿಖರದೇಶದಿಂದಿಳಿದು
ಬರುತೆ ವೆಳ್ಳಿ ಝರಿಯೊಲ್ ಕಂಗೊಳಿಪ ಕಿರುತೊರೆಯು
ಅಂಕುಡೊಂಕಿನ ಧಾರೆಗಳ್ ಮುಂದೆ ಮುಂದೆ ಎಡೆ
ಎಡೆಯು ತುಂಗುದಾಣದಲಿ ತಂಗಿ ಕೆರೆ–ಪುಷ್ಕರಣಿ
ಮೇಣ್ ನದಿಯೈಸುವ ಸೌಂದರ್ಯ ದೃಶ್ಯಮಾನಂ !

ತ್ರೇತಾಯುಗದೊಳ್ ಪಂಚಪಾಂಡವರಿಲ್ಲಿ ತವ
ಜನನಿ ಕುಂತಿಯೊಡಂ ಅಧಿಕಕಾಲ ವನವಾಸ
ವ್ರತ ಆಚರಿಸಿರ್ದರೆಂಬುದೊರ್ ಪ್ರತೀತಿ.
"ಕುಂತೀ ಪುಳ" ಮೆಂಬ ನದಿಯು ಪೆಸರ್ ಪಾಂಡವರ
ಜನನಿ ಕುಂತೀದೇವಿಯು ಪವಿತ್ರ ನಾಮದಿಂ
ಬಂತೆಂದು ವಾದಿಪರ್ ಇಂದಿಗುಂ ಇರುತಿರಲ್
ಪ್ರತೀತಿ ಜೀವಂತಂ. ಮೇಣ್ "ಸೈಲೆಂಟ್" ಎನೆ
ಸೈರಂದ್ರಿ ಶಬ್ದದಾ ಅಪಭ್ರಂಶವಿರದೇಕೆ
ಎಂಬೊಂದು ವಾದವಿರ್ಪುದು ಕೇರಳ ರಾಜ್ಯದಲಿ.
ಜನವಸತಿಯಿಂ ದೂರ್ವೈದ ಸೈಲೆಂಟ್ ವ್ಯಾಲಿ
ಬ್ರಿಟಿಷರ ಮನ ಸೆಳೆದು ಪ್ರಖ್ಯಾತ ನಾಮಾಂತು
ಜೃಂಭಿಸಿದುದು ದೇಶೀಯರ್ ಅಚ್ಚರಿ ಪಡುವೊಲ್.
ಸತ್ಯಂ–ಶಿವಂ–ಸುಂದರಂ ವೇಶಿ. ಅದಾವ

→

ದೇಶಗಳ ಪರಿಪರಿಯ ಬೀಜ ಬಿತ್ತನೆಯೋ
ಎನೆ ಸಾಲ್ಪಿಡಿದು ಬಿತ್ತಿ ನೀರೆರೆದು ಗೊಬ್ಬರಂ
ಚೆಲ್ಲಿ ಬಿತ್ತಿ ಮುಂಬೆಳೆಸಿದ ಮಾಳ್ಕೆಯಲಿ ಹಸುರ್
ಮುಂಬೆಳೆದುದು ಸೊರ್ಕುಗುವ ಪಾಂಗಿನಲಿ. ಸಗ್ಗಿಗರ
ನಂದನವನವಂಮಿರ್ಪವೊಲ್, ಪಸುರ್ಲೋಕದ
ಕುಲಕೀರ್ತಿಯಯುದುವೆಳಗಿರೆ ಮತಿವಾನ್ಯರ ಪ್ರಾಣ
ರೋಚಕವಾಗಿ. ಸೈಲೆಂಟ್ ವ್ಯಾಲಿಯುಂ ದೇಶದ
ಅಪೂರ್ವತರ ಸಂಪದಮೆನೆ ಅತ್ಯುಕ್ತಿಯಲ್ಲ.
ಮೌನ ಕಣಿವೆ ಸದಾ ಬೆಂದ ಮನಸಿಗೆ ನೊಂದ ಬಾಳ್
ಬದುಕಿನ ಸುಖ ಶಾಂತಿಗೆ ಸ್ವಾಂತನವ ನೀಡುವೊಲ್
ಕೈಬೀಸಿ ಕರೆದು ಶಾಂತಿ ಸೇಚನೆಗೊಳಿಪ ವರ
ಧಾಮ ! ಎನಲಾ ದೇಶೋವಿಶಾಲಮಪ್ಪ ಆ
ಶಾಂತಪ್ರಶಾಂತನಿಶಾಂತಸುಶಾಂತವಾಶಾಂತ
ಶೈಲಿಯ ಅನುಪಮ ವನಧಾತ್ರಿಯುಂ ನೆನೆಮನವೆ !
ಸರ್ವತ್ರ ಸಂಜೀವನಂ ಚಿತ್ರಸಿಕೊ ಮನವೆ ! !

— o —

ವಿಶ್ವ ನ್ಯಾಯ ಮಂದಿರ

ಎನಿತೆನಿತೊ ಭಂಗವಂ ನುಂಗಿ ನ್ಯಾಯನೀತಿಯ
ಸಂವರ್ಧನೆಯುಂ ಯುಗಯುಗಾಂತರಗಳಿಂದಲಿ
ಕನಸು ಕಾಣುತಲಿರ್ದ ಪ್ರವಾದಿಗಳ್, ಜ್ಞಾನಿ
ಕವಿಗಳ್ ಜಗತ್ ಮಹಾ ಶಾಂತಿಯದು ಮರೀಚಿಕೆ
ಎನಿಸಿಯುಂ ಪ್ರಯತ್ನಿಸಿರ್ದರದು ಕಷ್ಟವೆನೆ
ಬಾಯಿ ಬಾರದು ! "ಮನುಕುಲದ ಜಾಗತೀಕರಣ"
ಜ್ಯೋತಿಯನುರಿಸಿ ಕರದೀವಿಗಳ ಪೊತ್ತಿಸುವುದರಿಂ
ಸರ್ವತ್ರ ಸಾಧನೆಯು ಸಾಧ್ಯವೈ ಲೋಕದೊಳ್ !
ಅಂದಿಂದಿಗು ಕಲಿತವರ್ ಕಲಿಯದವರವೊಲ್
ಕಣ್ಣು ಕಟ್ಟಿರ್ದಶ್ವಗಳ ಮಾಳ್ಕಿಯಲಿ ಒಂದೇ
ನೇರಕ್ಕೆ ಓಡುವುದದು ಅಭ್ಯಾಸಬಲವೆಂಬೆನೆ
ಕಿನಿಸಿಗೆಯ ವಿಚಾರಂ ! ಪುರಾತನ ರೂಢಿಯೊಳ್
ಕಟ್ಟುಪಾಡಿಗೆ ನಿಶ್ಚಿಂತೆಯಿಂ ಮಸ್ತಕವೊಡ್ಡಿ
ಸಂಕಷ್ಟಸಂಕಟಗಳ ಭೀಕರ ಪರಿಣಾಮ
ಬದುಕಿನವಿಭಾಜ್ಯದಂಗವೆಂದೆದನುಭವಿಪ
ಮುಗ್ಧದುಗ್ಧ ಪ್ರವೃತ್ತಿಯಿಂದು ನೆಲಗಚ್ಚದೆ
ವಿಧಿಯಿಲ್ಲ. ಇನ್ನೆನಿತು ಕಾಲಾವಿಾ ಅಜ್ಞಾನ ?
ಸುವಿಚಾರ ಹೀನತೆ ? ಜಗದಾದ್ಯಂತ ಅಕ್ಷರ
ಜ್ಞಾನ-ವಿಜ್ಞಾನ ನೆನೆ ಕೊನೆಯೇರುತ್ತಲಿದೆ !
ಸುಪ್ತ ಚೇತನ ಎಚ್ಚತ್ತು ಮೈಕೊಡವುತ್ತಲಿದೆ !
ಘನಿತ ಮನಮತಿ ಶಾಂತಿ ಪ್ರಮತ್ತತೆಯಿಂದಲಿ
ಕಾರ್ಯಕ್ಷೇತ್ರಕಿಳಿಯೆ ಯೋಗಬಲ ಮುಂಗೆತ್ತು
ಅಣ್ವಸ್ತ್ರ, ವಿಷಾನಿಲ, ರೋಗಾಣು, ಜೀವಾಣು

→

ಸಮರಗಳ್ ಬಹಿಷ್ಕರಿಸಿ ಸತ್‌ಶಾಂತಿ ಬೀಜವಂ
ಬಿತ್ತುವುದು ಯತ್ನಸಾಧ್ಯಮೆಂದೆನಲ್ ಸತ್ಯಂ.
ಆದೊಡೇಂ ? ಶಾಂತಿಮಂತ್ರಮಂ ಕಡೆಗಣಿಸಿ ನಿಲ್ದ
ಧೂರ್ತಕೆಚ್ಚಿನ ಅತಿ ನೆಣಗೊಬ್ಬಿನ ಯುವಜನಂ
ಕೊಂಡಿಯೊಂದು ಕಳಚಿದೊಡೆ ಮತ್ತೊಂದಂ ಹುಟ್ಟು
ಹಾಕುವರ್ ! ನಿರ್ದಯೆ, ನಿರ್ದಾಕ್ಷಿಣ್ಯ, ನಿರಾತಂಕ,
ಸಿಯೋರ್ಜನೆಗಳ ಸಾಂಗತ್ಯ ಎನೆಲೆಲ್ಲಿಹುದು
ಮಾನವೀಯತೆ ಪೇಳ್ ? ಜಗತ್ ಪ್ರಣಾಳಿಕೆಯಲಿ
ಸುಜ್ಞಾನಿಗಳೊಪ್ಪುವ ವಿಶ್ವನ್ಯಾಯ ಮಂಡಳಿ
ಭವಿಷ್ಯದ ಘೋರಾತಿಘೋರ ಸಂಕ್ಷೋಭೆಯಾ
ವಿಷಜ್ವಾಲೆಯಂ ಅಳಿಸಿ ಪೋಗಾಡೆ ಮುಂದೈದು
ಶಾಂತಿಜ್ಯೋತಿಯೆತ್ತಿ ಹಿಡಿವುದೆ ಧರ್ಮಲಕ್ಷಣ !
ಜಗತ್ ಶಾಂತಿದೂತರ್ ಪಾಶ್ಚಾತ್ಯರಿರಲಿ ಯಾ
ಪೌರ್ವಾತ್ಯರಿರಲಿ ಬಂಡವಾಳ ಶಾಹಿಯಿರಲಿ
ಸಮಾಜವಾದಿಗಳಿರಲಿ ಶಾಂತಿಪಾಲನೆಗೆ
ಬದ್ಧರಿರ್ಪ್ಪ. ಅಶಾಂತಿಯಂ ಬಗ್ಗು ಬಡಿಯಲುರೆ
ನೈತಿಕ ಬಲ ಮೇಣಾತ್ಮ ಬಲಮಿಹ ಪರಮೋಚ್ಚ
ನ್ಯಾಯಮಂಡಳಿಯ ದೃಢಸಂಕಲ್ಪದಿಂದಲಿ
ಶಾಂತಿದೀವಿಯಿಂ ಶಾಂತಿದೀವಿಗಳುರಿಸುವುದೆ
ಯುವ ಪ್ರಭೃತಿಗಳ ನೆಣಗೊಬ್ಬಿಗುತ್ತರಮುಕ್ಕು !
ಯೂರೋಪ್, ಅಮೆರಿಕ, ಕೆರೆಬಿಯನ್, ಆಫ್ರಿಕನ್
ಅರೆಬಿಯನ್ ಮುಂತಪ್ಪ ವಿವಿಧ ಸಮುದಯಂಗಳ್
ಒಗ್ಗಿಸಿಂ ಪರಿಶ್ರಮದಿಂ ಶಾಂತಿ ಪ್ರೀತಿಯಿಂ
ಲೋಕಪ್ರಜ್ಞೆಯಿಂ ಮನುಕುಲ ಜಾಗತೀಕರಣ

→

ವ್ಯವಸ್ಥೆಯಿಂ ವಿಶ್ವನ್ಯಾಯಮಂಡಳ ಸಮರ್ಥ
ಮಂದಿರಕೆ ಹೊಂಗಳಸವಿಡುವುದೆ ಸತ್ಯಾರ್ಥ ಕಣ !
ಈಗಳ್ತಿ ಬಡವಬಲ್ಲಿದರ ನಡುವಿನಂತರ
ತಲ್ಲಣಿಪನಿತು ಅಗಾಧಮೆನೆ ಪ್ರಾಣಸಂಕಟ.
ನಿರಕ್ಷರೀ ದರಿದ್ರರ್ಗೆ ಆಧ್ಯಾತ್ಮಿಕ, ನೈತಿಕ
ವೈಜ್ಞಾನಿಕ ಸಮುಸ್ವಿತ ಸತ್ಯವ್ರತ ನಿಷ್ಫಲ.
ಸ್ತ್ರೀಬಂಧವೋಚನೆಯಿಂ ದೂರಾಗಿರೆ ಜೀವನ
ರಂಗ ಕಡುಕತ್ತಲೆಯಲ್ಲದೇನಲ್ಲವಿಾ
ಧರಣಿಯಲಿ. ಸ್ತ್ರೀಪುರುಷ ಸಮಾನತೆಯಿಂದಲ್ಲದೆ
ಜೀವನ ಪರಿಪೂರ್ಣತೆಯಿಂ ಕಾಣದು. ಸ್ತ್ರೀಜನ
ನಿರ್ಬಂಧಮೆನೆ ಅರ್ಧಾಂಗದ ದುರ್ಬಲತೆಯಿಂ
ರಾಷ್ಟ್ರಮುನ್ನಡೆಗೆ ಘೋರ ಮಾರೊಡ್ಡು ! ಜೀವನ-
ದನುಬಂಧಕೆ ಸಮಾನತೆಯ ನಿರಾಕರಣೆಯುಂ
ನ್ಯಾಯೋಚಿತ ನಾಗರಿಕ ಲಕ್ಷಣವಲ್ಲ ಕಣ !

ವಿಶ್ವ ನ್ಯಾಯಮಂಡಳಿ ಶಾಂತಿಜ್ಯೋತಿಯುಜ್ವಲಿಸೆ
ಎಲ್ಲವಗೆಯ ಕ್ಲಿಷ್ಟ ವಿವಾದಾತ್ಮಕ ವಿಷಾದ
ಪ್ರಕರಣಗಳ ಎಳೆಎಳೆಯಿಂ ಹಿಂಜಿ ಹೊಸೆದೊಡೆ
ವಿಶ್ವಾತ್ಮಕ ಬಟ್ಟೆಯು ಗಟ್ಟಿ ! ಇಂತೊಂದು ನಲ್
ಸತ್ಯಾರ್ಥಮಂ ಕಾಂಬೊಡಾವು ಸಾರ್ವಭೌಮಿಕ
ಪ್ರತಿನಿಧಿತ್ವಮುಳ್ಳ ಮಹಾಸಭೆಯ ಅವಶ್ಯಮಂ
ಜಾನಿಗಳ್ ಜಾನಿಸಿ ದೃಢ ಮನದಿಂ ಉದ್ಧರಣ
ಕಾರ್ಯಕಾಗಿ ಸರ್ವಾಂಗ ಸುಂದರ ಯೋಜನೆಯಲಿ
ಸಂಯೋಜಿಸದೆ ಶಾಂತಿ ಮಂತ್ರ ಪಠಣಮದು ಬರಿ
ಬಾಯಿ ಮಾತುಗಳ ಡಂಬಾಚಾರಮಾದತ್ತು !

→

ಇಪ್ಪತ್ತನೆ ಶತಮಾನವದು ಉರುಳ್ದುರುಳ್ದು
ಇಪ್ಪತ್ತೊಂದನೆಯ ಶತಮಾನವಂ ಸ್ವಾಗಸಲಿಹ
ವಿಜೃಂಭಣೆಯುಂ ಲೋಕೋತ್ತರಂ ! ವಿಜ್ಞಾನ
ಸಾಧನೆಯಲಿ ಆಮೋದ ಪ್ರಮೋದಗಳ್ ನಭ
ಭೇರಿಯಾಗಿಯುಂ ಸಂಸ್ಕೃತಿಯ ಸಾರವತ್ತಾದ
ಸುಸಂಸ್ಕಾರಮಿರದಿರೆ ಮನುಕುಲದ ಶೋಭೆಯೆಲ್ಲಿ ?
ಬರಿಯ ಬಾಹ್ಯಾಡಂಬರ ಜನ್ಮಸಾರ್ಥಕವಲ್ಲ.
ರಾಷ್ಟ್ರಗಳ ಸ್ಥಾನಮಂ ಏರಿಸುವ ಸಂಸ್ಕಾರ
ವಿಶ್ವನ್ಯಾಯಾತ್ಮಕ ವಿಚಾರದೋಹನದಿಂದೆ
ಸಾಧಿತಮುಪ್ಪುದಲ್ಲದೆ ಬೇರೆ ಗತಿಯಿಲ್ಲ ಕಣ !

ಓಹೊ ! ವಿಶ್ವಭ್ರಾತೃತ್ವ ವಿಶ್ವಬಾಂಧವ್ಯಗಳ್
ಘನಿಸಿ ವಿಶ್ವಾತ್ಮಕವಾದ ಅನನ್ಯ ಪರಮೋಚ್ಚ
ದಯಾನ್ವಿತ ದೃಷ್ಟಿಯಿರೆ ವಿಶ್ವದೊಳ್ ಅಶಾಂತಿಗೆ
ಎಡೆಯೆಲ್ಲಿ ? ಕಿರುಮನದ ರಣಾಗ್ರಗಣ್ಯರಿಂಗೆ
ಶಾಂತಿಯೆ ಸರಿಯುತ್ತರ ! ವಿಶ್ವಮಹಾಶಾಂತಿ
ಜ್ಯೋತಿಯುರಿಯೆ ಧಗಧಗಿಸಿ ಶಾಂತಿ ಕಿರುದೀವಿ
ಉರಿಯವೇಂ ಶತಸಹಸ್ರ ಕೋಟಿಕೋಟಿಗಳ್ಳೈಸಿ ?
ವಿಶ್ವನ್ಯಾಯಮಂಡಳಿ–World Court
ಇಂದಿನೀ ಕುಬ್ಜ ಮನಮತಿಗಳಿಗೆ ಸರಿಯಪ್ಪ
ಉತ್ತರವನೀಯುವೊಡೆ ಕರ್ಣಾಕರ್ಣಿಯೈಸಿರೊ
ವಿಶ್ವ ಸುದ್ದಿಯಂ ಮಹಾನ್ ವಿಶ್ವ ಬಂಧುಗಳೇ !
ಓಂ ಶಾಂತಿ ಶಾಂತಿ ಶಾಂತಿಃ !

— o —

ಮೃತ್ಯು ಮಾಧುರಿ

ಎನ್ನೊಂದು ಜೀವನೋದ್ಯಾನದ ಪಾಶ್ಚಿಮಾತ್ಯ
ದ್ವಾರದಲಿ ಪಾಶವಾಂತು ಸುಶಾಂತ ಮೌನದಿಂ
ಸುಗಳಿಗೆವಿಗಳಿಗೆಗಳ ಸೂಕ್ತ ಸಮಯಮಂ ಗುಣಿಸಿ
ಕಾದಿರ್ಪ ಮೃತ್ಯುಮಾಧುರಿಯೆ ! ತವ ನಿಶ್ಚಿಂತ
ನೀರವ ಸತ್ ಪಾತ್ರಕೆ ಎಣೆಯುಂಟೆ ? ಹೊತ್ತ ಹೊಣೆ
ಹಿಂಚು ಮುಂಚಾಗದವೊಲ್ ಕೈಕೊಂಬೆ ಮಂತ್ರಿತ
ಮಾಯದಾಟದಂದದಿ ಹೊಂಚಿ. ನಿತ್ಯ ವ್ರತದ
ಸೀಮೆಯಂ ದಾಂಟದೆಯೆ, ಮತಿಗತಿಯಣಂ ಬದಲಿಸಿ
ಹೋಗದೆಯೆ, ಕರ್ತವ್ಯದ ಹೊಣೆಯಂ ಇಳಿಸದೆಯೆ
ಮಹತ್ವಾಕಾಂಕ್ಷೆಯ ಮಹತ್ ಪಾತ್ರಹ್ರದಂ ಕಣ !

ನಿನ್ನ ದಯಾರ್ಕ್ಮೇದುರ ಶಾಂತಿರಸ ಪಾನದಿಂ
ದೀರ್ಘಾತಿದೀರ್ಘಭಾವ ಪ್ರವಾಹದ ದಿಟ್ಟ
ಮೌನಮಾತ್ರದಲಿ ಪರಿಣಮಿಪ ಪರಿಣಾಮವದು
ಪಿರಿದಲ್ತೆ ? ಬಾಳಿನ ಹುರುಳರಿಯದೆ ನೈರಾಶ್ಯ
ಭಾವದಿ ಸತ್ ಕಾರ್ಯದಾಚರಣೆಯಂ ಕೈಬಿಟ್ಟೆಂ.
ಲೋಕಪ್ರಜ್ಞೆಯಿಂ ದೂರಾಗಿ ಪಗಲ್ ನಿದ್ದೆಯ
ಜಡತ್ವವನೆ ಕೆಳೆಕೊಂಡೆನೆನೆ ಕಳೆದುದು ಕಾಲ
ವ್ಯರ್ಥಮೈಸಿ. ನಾನೆನ್ನ ಕರ್ತವ್ಯ ಪ್ರಜ್ಞೆಯ
ಇನಿತು ಪಡೆಕೊಳ್ಳದಿರೆ ಜೀವನೀಯ ಹೊಣೆಯಂ
ಕಳೆಕೊಂಡೆಸಿಲ್ಲ, ಹೇ ! ಎನ್ನ ಮೃತ್ಯು ಮಾಧುರೀ !
ಈಗಳಾಂ ಸಮಯದಾನಮಂ ಬೇಡ್ವೆನೆಂತೈ ?
ಪ್ರಾಣಪಕ್ಷಿ ನರಳುತಿರೆ ಭವಧಿಯಲಿ ಬೆಂದು ಕಡು

→

ನೋವಿನಿಂ ಗಾರಾಗಿ. ಏಂಗ್ಸೈಯ್ಯಲೆಂಬ ಹಿರಿ
ಚಿಂತೆ ಹಿಂಡುತಿದೆ ಕರ್ಬುನದ ಗಾಣದೊಲ್. ಆಂ
ಸೋಲ್ದುಸೋಲದ ರಾಹುಕೇತುವಿನ ಕೈಲಿ ಸಿಲ್ಕಿ
ನರಳುತಿರೆ ಬಾಳಿನ ಸಂಜೆಯಲಿ ಎಣೆಯಿಲ್ಲದೊಲ್ !
ಹಾ, ಕೆಟ್ಟೆನ್. ಕಾಲ ಕಳೆದುದು. ಏಂಗ್ಸೈಯಲರಿಯೆ
ಬರ್ದುಕೆ ಅಸಹನೀಯು. ವ್ಯವಹಾರವೆ ಭಾರ.
ಎಂತೆನ್ನ ಕಜ್ಜಮಂ ನಿರ್ವಹಿಪೆನೊ ಕಾಣೆಂ.
ಮೃತ್ಯುವಿಗಭಿಮುಖವಾಗಿ ಎನಿತೆನಿತೊ ದೂರ
ನಡೆದಿರುವೆ. ಇಂ ನಡೆಯಲಿರ್ಪಾ ತಾಣವದೆನ್ನ
ಸುದೂರವಲ್ಲ. ಪಿರಿಯರ್ಕಳ ಹೆಜ್ಜೆಯ ಜಾಡು
ಪಿಡಿವೆನೆನೆ ಗುರುತು ಸಿಗುವುದೇಂ ಈ ಭವಧಿಯಲಿ ?
ಮುಂಜಾಡು ಅಸ್ಪಷ್ಟ ಅಸಂಬದ್ಧವಿರುತಿರೆ
ಓಡುವಾಸೆ ಮುಗ್ಗರಿಪುದು ಎಡವಿ ದಿಕ್ಕೆಟ್ಟು.

ಓ ! ಎನ್ನ ಜೀವನ ಗೆಣೆಯ ಮೃತ್ಯು ಮಾಧುರೀ !
ಎಂತೆನ್ನ ಜೀವನೀಯ ಸುಶಾಂತಿ ? ಮತ್ತಮಾ
ಮರಣೋತ್ತರ ನಿಜಶಾಂತಿ ? ನೆನೆಯಲದ ನಾನಿಂದು
ನೊಂದು ನೀರಾಗಿ ಹರಿವುದು ಜೀವವಾಹಿನಿ ?
ಇರ್ಕೆ, ಎನಿತೆನಿತು ಭಂಗ ಬವಣೆಗಳೊದವಿ ಬರೆ
ಕರ್ತವ್ಯಪ್ರಜ್ಞೆಯ ಕಿಡಿ ಬೆಂಕೆ ಕೆರಳಿದುದೆನೆ
ಸಾಲ್ಗುಂ. ಕಳೆದುಳಿದ ಶಕುತಿಯಂ ಗರಿಗೂಡಿಸಿ
ಕಳೆವೆನೆನ್ನ ಭುಜಭಾರವನಿಂದಿನಿಂ ಶೀಘ್ರ
ಗತಿಯಲೆಂಬೆನ್ ಧೈರ್ಯದಿಂ. ಆದೊಡದು ನಿನ್ನ
ಮೃತ್ಯುಪಾಶಕಲ್ಲವೊ ಮಾರೊಡ್ಡು ! ನೀ ಬರುವ

→

ಹಾದಿಯಲಿ ಪಚ್ಚನೆಯ ಗರಿಕೆ ಪುಲ್ ಒತ್ತೊತ್ತಿ
ಬೆಳೆಸಿರ್ಪ ಪಚ್ಚರನ್ನಗಂಬಳಿಯು ಹಾಸದು
ಸ್ವಚ್ಛ ಸುಂದರ ಮೇಣ್ ಪಚ್ಚವರ್ಣ ಸುಂದರ.
ಎಡಬಲದಿ ಮಾವು ಹಲಸು ಸಸಿಗಳನೊತ್ತಿ ನೆಟ್ಟು
ತಳಿರು ತೋರಣ ಕಟ್ಟಿಸಿರುವೆ. ನಿನ್ನಯ ಮನಕೆ
ಮುದವೀವವೊಲ್ ! ನೀಂ ಕುಪಿತಗೊಳದೆ ಕಿನಿಸಿಗೆ
ಗೊಳದೆ ಬಾರೈಮಮ ಬಂಧು, ನಿಡುಪಾಶವಹೊತ್ತು !
ಹೇ, ಎನ್ನ ಪ್ರಾಣ ಕೆಳೆಯ ಮೃತ್ಯು ಮಾಧುರೀ ?

— o —

ಮಲ್ಲಿಕಾ ಕೃತಿಗಳು

೧) ಜೀವನಗಂಗಾ
೨) ಡಾ|| ಅಘೋರ
೩) ಡಾ|| ಕಮಲೇಶ್
೪) ವಂದೇ ಮಾತರಂ
೫) ಅನಂತಾನಂತದೆಡೆಗೆ

(ಕಥಾ ಸಂಕಲನ)

೬) ಶ್ರೀಮುಖಿ
೭) ಬಹುರತ್ನಾವಸುಂಧರಾ
೮) ರತ್ನಗರ್ಭಾವಸುಂಧರಾ
೯) ಫಾಲ್ಗುಣೀ ಪರ್ವ

(ಕವಿತಾ ಸಂಕಲನ)

೧೦) ಪೂಜಾವಸಾನ ಸಮಯೇ....!
೧೧) ಧ್ಯಾನಾವಸಾನ ಸಮಯೇ....!

(ಪೌರಾಣಿಕ ನಾಟಕ)

೧೨) ಪುಣ್ಯಪಯೋನಿಧಿ
೧೩) ಪುಣ್ಯಾಭಿಸಾರ

(ಇವುಗಳ ಪ್ರತಿಗಳು ಮುಗಿದಿವೆ)

ಎರಡನೆಯ ಮುದ್ರಣಗಳು

(ಸಾನೆಟ್ಟುಗಳು)

೧೪) ತರಂಗಿಣಿ

(ಕಥಾ ಸಂಕಲನ)

೧೫) ಸುಧಾಮಣಿ
೧೬) ರಮಣೀಮಣಿ
೧೭) ಲಿಯೋನಾ
೧೮) ಶ್ರೀಹರ್ಷಲಾ
೧೯) ವೈಶಾಖೀ ಪರ್ವ

ಮಲ್ಲಿಕಾ ಕೃತಿಗಳು

(ಕಾದಂಬರಿಗಳು)

೨೦) ಮನೋನ್ಮಣಿ
೨೧) ಸಂತ್ರಾಸಿನಿ
೨೨) ಆಸೆಯ ಸುಳಿಯಲ್ಲಿ

(ಕವಿತಾ ಸಂಕಲನ)

೨೩) ಗಗನ ಕುಸುಮ
೨೪) ಜೀವನ ಕುಸುಮ
೨೫) ಕಸ್ತೂರಿ ಮಾಲಿಕಾ
೨೬) ಮಂದಾರ ಮಾಲಿಕಾ
೨೭) ಚಂಪಕ ರಾಜಿ
೨೮) ನಾದ ಬಿಂದು
೨೯) ವಿಜಯ ಗಾಥಾ
೩೦) ಗಾನ ತೀರ್ಥ
೩೧) ಬಕುಳ ರಾಜಿ
೩೨) ಕಲ್ಯಾಣ ಭಾರತಿ (ಅಚ್ಚಿನಲ್ಲಿ)
೩೩) ಕಾವ್ಯಾನಂದ ನಂದಿನಿ

(ಸಂಜೀವನ ಕಾವ್ಯ)

೩೪) ರಾಗಾನುರಾಗಿಣಿ
೩೫) ಉತ್ತರೋತ್ತರಣಿ
೩೬) ಮಂಗಳ ಭಾರತಿ

(ಗದ್ಯ ಕಾವ್ಯ)

೩೭) ಐಂದ್ರ ಕೀರ್ತಿ ಕೇತನಂ

(ಉಪನಿಷತ್ಕಥಾ)

೩೮) ಕೃತಂ ಸ್ಮರ ಕ್ರತುಂ ಸ್ಮರ

(ಶಿಶು ಸಾಹಿತ್ಯ)

೩೯) ದೂರ ದೇಶದಲ್ಲಿ
೪೦) ಬೆಳದಿಂಗಳ ರಾತ್ರಿ
೪೧) ವಿಶೇಷ ಸುದ್ದಿ
೪೨) ರಂಗನ ಸಾಹಸ
೪೩) ಓಹಿಯೋಜ ಸರೋವರ
೪೪) ಕೌಶಿಕನ ಗೊಂಬೆ

ಲಕ್ಷ್ಮೀ ಪ್ರಕಾಶನ
170, ಲ್ಯಾಂಗ್ ಫೋರ್ಡ್ ರೋಡ್, ಬೆಂಗಳೂರು- 560 025